**1. ವ್ಯಾಖ್ಯಾನಗಳು**

1.1. "ಖಾತೆ/ಗಳು" ಎಂದರೆ ಎಕ್ಸಿಸ್ ಬ್ಯಾಂಕ್‌ನಲ್ಲಿ ಇರುವ ಹಾಗೂ ಸಿಐಬಿ ಸೇವೆಗಳಿಗಾಗಿ ಕಾಲಕಾಲಕ್ಕೆ ಪರಸ್ಪರ ಗೊತ್ತುಪಡಿಸಿದ ಗ್ರಾಹಕರ ಖಾತೆ/ಗಳು ಎಂದರ್ಥ ಮತ್ತು ಇದು ಎಕ್ಸಿಸ್ ಬ್ಯಾಂಕ್‌ನಲ್ಲಿರುವ ಗ್ರಾಹಕರ ಎಲ್ಲಾ ಈಗಿನ, ಹೊಸ ಹಾಗೂ ಮುಂದೆ ತೆರೆಯಲ್ಪಡುವ ಖಾತೆಗಳನ್ನು ಒಳಗೊಂಡಿರುತ್ತದೆ.

1.2. "ಗ್ರಾಹಕರು" ಅಥವಾ "ಕ್ಲೈಂಟ್" ಅಥವಾ "ಕಂಪನಿ" ಎಂದರೆ ಈ ನಿಯಮ ಮತ್ತು ಷರತ್ತುಗಳ ಅಡಿಯಲ್ಲಿ ಸಿಐಬಿ ಸೇವೆಗಳನ್ನು ಪಡೆಯುವ ವ್ಯಕ್ತಿ/ಘಟಕ.

1.3. "ಸಿಐಬಿ" ಅಥವಾ "ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳು" ಅಥವಾ "ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್" ಅಥವಾ "ಸೇವೆಗಳು" ಎಂಬ ಪದವನ್ನು ಈ ನಿಯಮ ಮತ್ತು ಷರತ್ತುಗಳಲ್ಲಿ ಬಳಸುವ ಪ್ರತಿ ಸಂದರ್ಭದಲ್ಲೂ, ಇದರ ಅರ್ಥ ಏನೆಂದರೆ ಎಕ್ಸಿಸ್ ಬ್ಯಾಂಕ್ ತನ್ನ ಗ್ರಾಹಕರಿಗೆ ಫಂಡ್ ಟ್ರಾನ್ಸ್‌ಫರ್/ಪಾವತಿ ಸೇವೆಗಳು (ಎನ್‌ಇಎಫ್‌ಟಿ/ಆರ್‌ಟಿಜಿಎಸ್/ಐಎಂಪಿಎಸ್ ಸೌಲಭ್ಯ), ಚೆಕ್/ಡಿಮ್ಯಾಂಡ್ ಡ್ರಾಫ್ಟ್/ಪೇ ಆರ್ಡರ್ ಸೌಲಭ್ಯ, ಶಾಸನಬದ್ಧ ಮತ್ತು ತೆರಿಗೆ ಪಾವತಿಗಳು, ಟ್ರೇಡ್ ಮತ್ತು ವಿದೇಶಿ ವಿನಿಮಯ ಸೇವೆಗಳು, ಹಣಕಾಸು ಅಲ್ಲದ ಸೇವೆಗಳು (ಚೆಕ್ ಬುಕ್, ಡಿಡಿ, ಪ್ಯಾನ್ ಅಪ್‌ಡೇಟ್ ಇತ್ಯಾದಿ) ಮತ್ತು ಕಾಲಕಾಲಕ್ಕೆ ಲಭ್ಯವಾಗುವಂತೆ ಮಾಡಲಾದ ಯಾವುದೇ ಇತರ ಸೇವೆಗಳನ್ನು ಒಳಗೊಂಡಂತೆ ಈ ನಿಯಮ ಮತ್ತು ಷರತ್ತುಗಳ ಅಡಿಯಲ್ಲಿ ಎಕ್ಸಿಸ್ ಬ್ಯಾಂಕ್ ಒದಗಿಸುವ ಸೇವೆಗಳು ಮತ್ತು ಎಕ್ಸಿಸ್ ಬ್ಯಾಂಕ್ ಕಾಲಕಾಲಕ್ಕೆ ಮಾಡಬಹುದಾದ ಅಂತಹ ಸೇವೆಗಳ ಎಲ್ಲಾ ಮಾರ್ಪಾಡುಗಳನ್ನು ಕೂಡ ಇದು ಒಳಗೊಂಡಿರುತ್ತದೆ.

1.4. "ಸೂಚನೆ(ಗಳು)" ಎಂದರೆ ರೆಮಿಟೆನ್ಸ್ ಮಾಡಲು ಅಥವಾ ಫಂಡ್ ಟ್ರಾನ್ಸ್‌ಫರ್ ಮಾಡಲು ನೀಡುವ ಯಾವುದೇ ಪಾವತಿ ಸೂಚನೆಗಳನ್ನು ಒಳಗೊಂಡಂತೆ ಸೇವೆಗಳ ಅಡಿಯಲ್ಲಿ ಕವರ್ ಮಾಡಲಾದ ಚಟುವಟಿಕೆಗಳನ್ನು ನಡೆಸಲು ಭದ್ರತಾ ಪ್ರಕ್ರಿಯೆ ಅನುಸರಿಸುವ ಮೂಲಕ ಗ್ರಾಹಕರು ಎಕ್ಸಿಸ್ ಬ್ಯಾಂಕ್‌ಗೆ ನೀಡಿದ ಎಲ್ಲಾ ಸಂವಹನಗಳು ಅಥವಾ ಸೂಚನೆಗಳು.

1.5. "ಒಟಿಪಿ" ಎಂದರೆ ಒನ್-ಟೈಮ್ ಪಾಸ್‌ವರ್ಡ್/ಒನ್-ಟೈಮ್ ಪರ್ಸನಲ್ ಐಡೆಂಟಿಫಿಕೇಶನ್ ನಂಬರ್.

1.6. "ಆರ್‌ಬಿಐ" ಅಂದರೆ ಭಾರತೀಯ ರಿಸರ್ವ್ ಬ್ಯಾಂಕ್.

1.7. "ಎನ್‌ಪಿಸಿಐ" ಎಂದರೆ ನ್ಯಾಶನಲ್ ಪೇಮೆಂಟ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ.

1.8. "ನಿಬಂಧನೆಗಳು" ಅಥವಾ "ಮಾರ್ಗಸೂಚಿಗಳು" ಅಂದರೆ ಸೇವೆಗಳಿಗೆ ಸಂಬಂಧಿಸಿದಂತೆ ಆರ್‌ಬಿಐ, ಎನ್‌ಪಿಸಿಐ ಅಥವಾ ಯಾವುದೇ ಇತರ ಸರ್ಕಾರಿ ಅಥವಾ ಶಾಸನಬದ್ಧ ಪ್ರಾಧಿಕಾರವು ಕಾಲಕಾಲಕ್ಕೆ ನೀಡಲಾದ ಎಲ್ಲಾ ನಿಯಮಗಳು, ನಿಬಂಧನೆಗಳು ಮತ್ತು/ಅಥವಾ ಮಾರ್ಗಸೂಚಿಗಳು.

1.9. "ಭದ್ರತಾ ಪ್ರಕ್ರಿಯೆ" ಎಂದರೆ ಒಂದು ಸೂಚನೆ ಅಥವಾ ಅಂತಹ ಸೂಚನೆಯನ್ನು ತಿದ್ದುಪಡಿ ಮಾಡುವ ಅಥವಾ ರದ್ದುಗೊಳಿಸುವ ಸಂವಹನವು ಗ್ರಾಹಕರ ಕಡೆಯಿಂದಲೇ ಆಗಿದೆ ಎಂದು

ಪರಿಶೀಲಿಸುವ ಅಥವಾ ಪ್ರಕ್ರಿಯೆಗೊಳಿಸುವ ಉದ್ದೇಶಕ್ಕಾಗಿ, ಅಥವಾ ಸೂಚನೆಯ ವಿಷಯದ ರವಾನೆಯಲ್ಲಿನ ದೋಷಗಳನ್ನು ಪತ್ತೆಹಚ್ಚಲು ಎಕ್ಸಿಸ್ ಬ್ಯಾಂಕ್ ಕಾಲಕಾಲಕ್ಕೆ ನಿಗದಿಪಡಿಸುವ ಪ್ರಕ್ರಿಯೆ.

1.10. "ನಿಯಮ ಮತ್ತು ಷರತ್ತುಗಳು" ಎಂದರೆ ಇಲ್ಲಿ ವಿವರಿಸಿರುವಂತೆ ಮಾರ್ಪಡಿಸಲಾದ ಮತ್ತು ಪೂರಕಗೊಳಿಸಲಾದ ಈ ನಿಯಮಗಳು ಮತ್ತು ಷರತ್ತುಗಳು ಎಂದರ್ಥ.

1.11. "ಬಳಕೆದಾರರು" ಎಂದರೆ ಸಿಐಬಿ ಮೂಲಕ ಗ್ರಾಹಕರ ಖಾತೆಗಳನ್ನು ಆಕ್ಸೆಸ್ ಮಾಡುವ ಹಕ್ಕು ಹೊಂದಿರುವ ಗ್ರಾಹಕರ ಪ್ರತಿನಿಧಿಗಳು ಎಂದರ್ಥ ಮತ್ತು ಇದು ವೀಕ್ಷಿಸುವ ಹಕ್ಕು ಹೊಂದಿರುವ ಬಳಕೆದಾರರು ಹಾಗೂ ಮಾಹಿತಿ ನಮೂದಿಸುವ, ಅಪ್‌ಲೋಡ್ ಮಾಡುವ, ವೆರಿಫಿಕೇಶನ್ ಮಾಡುವ, ದೃಢೀಕರಿಸುವ ಮತ್ತು/ಅಥವಾ ಅಧಿಕೃತಗೊಳಿಸುವ ಹಕ್ಕುಗಳನ್ನು ಹೊಂದಿರುವ ಬಳಕೆದಾರರು ಇಬ್ಬರನ್ನೂ ಒಳಗೊಂಡಿರುತ್ತದೆ. ಗ್ರಾಹಕರು ಇಂತಹ ಅಧಿಕೃತ ಹಕ್ಕುಗಳನ್ನು ಜಂಟಿ ಆಧಾರದ ಮೇಲೆ ನೀಡಿದ್ದಲ್ಲಿ, ಸಂದರ್ಭ ಅಥವಾ ಅರ್ಥಕ್ಕೆ ಅನುಗುಣವಾಗಿ, ಈ ಪದವು ಅಂತಹ ಅಧಿಕಾರ ಹೊಂದಿರುವ ಜಂಟಿ ಬಳಕೆದಾರರನ್ನು ಸೂಚಿಸುತ್ತದೆ.

1.12. "ವೆಬ್‌ಸೈಟ್/ಸೈಟ್" ಅಂದರೆ www.axis.bank.in ವೆಬ್‌ಸೈಟ್ ಅಥವಾ ಕಾಲಕಾಲಕ್ಕೆ ಎಕ್ಸಿಸ್ ಬ್ಯಾಂಕ್ ಸೂಚಿಸಬಹುದಾದ ಇತರ ವೆಬ್‌ಸೈಟ್.

1.13. "ಜಿಎಸ್‌ಟಿ" ಎಂದರೆ ಜಿಎಸ್‌ಟಿ ಕಾನೂನುಗಳ ಅಡಿಯಲ್ಲಿ ಸರಕು ಅಥವಾ ಸೇವೆಗಳ ಪೂರೈಕೆಯ ಮೇಲೆ ಅಥವಾ ಅವೆರಡರ ಮೇಲೂ ವಿಧಿಸಲಾದ ಯಾವುದೇ ತೆರಿಗೆ ಅಥವಾ ಸೆಸ್ ಅಥವಾ ಅವೆರಡೂ.

1.14. "ಜಿಎಸ್‌ಟಿಐಎನ್" ಎಂದರೆ ಸರಕು ಮತ್ತು ಸೇವೆಗಳ ತೆರಿಗೆ ಗುರುತಿನ ನಂಬರ್.

1.15. "ಜಿಎಸ್‌ಟಿಎನ್" ಎಂದರೆ ಸರಕು ಮತ್ತು ಸೇವೆಗಳ ತೆರಿಗೆ ನೆಟ್‌ವರ್ಕ್.

1.16. "ಜಿಎಸ್‌ಟಿ ಕಾನೂನುಗಳು" ಅಂದರೆ ಐಜಿಎಸ್‌ಟಿ ಕಾಯ್ದೆ 2017, ಸಿಜಿಎಸ್‌ಟಿ ಕಾಯ್ದೆ 2017, ಯುಟಿಜಿಎಸ್‌ಟಿ ಕಾಯ್ದೆ 2017 ಮತ್ತು ಆಯಾ ರಾಜ್ಯದ ನಿರ್ದಿಷ್ಟ ಎಸ್‌ಜಿಎಸ್‌ಟಿ ಕಾಯ್ದೆಗಳು, 2017 ಮತ್ತು ಸಂಬಂಧಪಟ್ಟ ಕಾನೂನುಗಳ ಅಡಿಯಲ್ಲಿ ನೀಡಲಾದ ಎಲ್ಲಾ ಸಂಬಂಧಿತ ನಿಯಮಗಳು, ನಿಬಂಧನೆಗಳು, ನೋಟಿಫಿಕೇಶನ್‌ಗಳು ಮತ್ತು ಸುತ್ತೋಲೆಗಳು.

1.17. DD-MM-YYYY ದಿನಾಂಕದ ಬೋರ್ಡ್ ರೆಸಲ್ಯೂಶನ್ (ಅಥವಾ ಸಮಾನವಾದದ್ದು) ನಿಜವಾಗಿದೆ ಮತ್ತು ಮಾನ್ಯವಾಗಿದೆ ಎಂದು ಗ್ರಾಹಕರು ಖಚಿತಪಡಿಸುತ್ತಾರೆ. ಅಪ್ಲಿಕೇಶನ್ ಫಾರ್ಮ್‌ನಲ್ಲಿ ನಮೂದಿಸಿದ ಖಾತೆಗಳನ್ನು ನಿರ್ವಹಿಸಲು ಬಳಕೆದಾರರಿಗೆ ಅಧಿಕಾರ ನೀಡಲು ಗ್ರಾಹಕರಿಗೆ ಬೋರ್ಡ್ ರೆಸಲ್ಯೂಶನ್ (ಅಥವಾ ಸಮಾನವಾದದ್ದು) ಮೂಲಕ ಅಧಿಕಾರ ನೀಡಲಾಗುತ್ತದೆ.

1.18. ಅಪ್ಲಿಕೇಶನ್ ಫಾರ್ಮ್‌ನಲ್ಲಿ ನಮೂದಿಸಿದ ವಿವರಗಳು ಸರಿಯಾಗಿವೆ ಮತ್ತು ಒದಗಿಸಲಾದ ಇಮೇಲ್ ಐಡಿ ಅಧಿಕೃತವಾಗಿದೆ ಎಂದು ಗ್ರಾಹಕರು ಖಚಿತಪಡಿಸುತ್ತಾರೆ.

1.19. (ಬಳಕೆದಾರರ ಇಮೇಲ್ ಐಡಿಗಳು ಖಾಸಗಿ ಡೊಮೇನ್ ಆಗಿಲ್ಲದಿದ್ದಲ್ಲಿ ಮಾತ್ರ ಇದು ಅನ್ವಯಿಸುತ್ತದೆ) ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್‌ನಲ್ಲಿ ಬಳಕೆದಾರರಿಗಾಗಿ

ಉಲ್ಲೇಖಿಸಲಾದ ಇಮೇಲ್ ಐಡಿಗಳು ಸಾರ್ವಜನಿಕ ಡೊಮೇನ್‌ನಲ್ಲಿವೆ ಮತ್ತು ತಾವು ಯಾವುದೇ ಖಾಸಗಿ ಡೊಮೇನ್‌ಗೆ ಸಂಬಂಧಿಸಿದ ಇಮೇಲ್ ಐಡಿಗಳನ್ನು ಹೊಂದಿಲ್ಲ ಎಂದು ಗ್ರಾಹಕರು ದೃಢೀಕರಿಸುತ್ತಾರೆ. ಬಳಕೆದಾರರು ಸಾರ್ವಜನಿಕ ಡೊಮೇನ್ ಐಡಿಗಳನ್ನು ಬಳಸುವುದರಿಂದ ಉಂಟಾಗಬಹುದಾದ ಭದ್ರತಾ ಉಲ್ಲಂಘನೆ, ಹ್ಯಾಕಿಂಗ್, ಕಳ್ಳತನ ಅಥವಾ ಸೈಬರ್ ಅಪರಾಧ, ಮುಂತಾದ ಯಾವುದೇ ಘಟನೆಗಳಿಂದ ಸಂಭವಿಸುವ ಹಣದ ನಷ್ಟ ಸೇರಿದಂತೆ ಆದರೆ ಅಷ್ಟಕ್ಕೆ ಮಾತ್ರ ಸೀಮಿತವಾಗಿರದೆ ಯಾವುದೇ ಮತ್ತು ಎಲ್ಲಾ ಅಪಾಯಗಳಿಗೆ ಗ್ರಾಹಕರೇ ಜವಾಬ್ದಾರರಾಗಿರುತ್ತಾರೆ ಹಾಗೂ ಬ್ಯಾಂಕನ್ನು ಯಾವುದೇ ಹೊಣೆಗಾರಿಕೆಯಿಂದ ಮುಕ್ತಗೊಳಿಸಲು ಮತ್ತು ಉಂಟಾದ ನಷ್ಟಕ್ಕೆ ಪರಿಹಾರ ನೀಡಲು ಗ್ರಾಹಕರು ಸಮ್ಮತಿಸುತ್ತಾರೆ.

1.20. ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್ ಸೌಲಭ್ಯವನ್ನು ಕೇವಲ ಗ್ರಾಹಕರ ಕೋರಿಕೆಯ ಮೇರೆಗೆ ನೀಡಲಾಗಿದೆ ಮತ್ತು ಈ ಸೌಲಭ್ಯವು ಜಾರಿಯಲ್ಲಿರುವ ಅವಧಿಯಲ್ಲಿ ಖಾತೆಯಲ್ಲಿ ಸಂಭವಿಸಬಹುದಾದ ಯಾವುದೇ ರೀತಿಯ ಹ್ಯಾಕಿಂಗ್ ಮತ್ತು/ಅಥವಾ ಫಿಶಿಂಗ್ ದಾಳಿಗಳು ಮತ್ತು/ಅಥವಾ ಸೈಬರ್ ಸಂಬಂಧಿತ ಅಪರಾಧಗಳಿಗೆ ಹಾಗೂ ಇದರ ಪರಿಣಾಮವಾಗಿ ಗ್ರಾಹಕರ ಖಾತೆಯಿಂದ ಥರ್ಡ್ ಪಾರ್ಟಿ ಖಾತೆಗೆ ಹಣ ವರ್ಗಾವಣೆಯಾಗಿ ಉಂಟಾಗಬಹುದಾದ ಯಾವುದೇ ನಷ್ಟಕ್ಕೆ ಈ ಬ್ಯಾಂಕ್ ಯಾವುದೇ ರೀತಿಯಲ್ಲಿ ಹೊಣೆಯಲ್ಲ ಎಂದು ಗ್ರಾಹಕರಿಗೆ ತಿಳಿದಿದೆ. ಎಲ್ಲಾ ಸೂಕ್ತ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿದ್ದರೂ ಸಹ, ಥರ್ಡ್ ಪಾರ್ಟಿಗಳಿಂದ ಇಂತಹ ದಾಳಿಗಳು ನಡೆಯುವ ಸಾಧ್ಯತೆಯನ್ನು ಯಾವುದೇ ರೀತಿಯಲ್ಲಿ ತಳ್ಳಿಹಾಕಲು ಸಾಧ್ಯವಿಲ್ಲ ಹಾಗೂ ಇದಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ಯಾವುದೇ ರೀತಿಯ ಕ್ಲೈಮ್‌ಗಳ ಹೊಣೆಗಾರಿಕೆಯಿಂದ ಮುಕ್ತವಾಗಿರುತ್ತದೆ ಎಂದು ಗ್ರಾಹಕರಿಗೆ ತಿಳಿದಿದೆ.

1.21. ಇಲ್ಲಿ ನಮೂದಿಸಿದ ಬಳಕೆದಾರರಿಗೆ ಒದಗಿಸಲಾದ ಇಮೇಲ್ ಐಡಿ(ಗಳು) ಮತ್ತು ಮೊಬೈಲ್ ನಂಬರ್ ಮಾನ್ಯವಾಗಿದೆ ಹಾಗೂ ಬ್ಯಾಂಕ್‌ನಿಂದ ಯಾವುದೇ/ಎಲ್ಲಾ ಸಂವಹನಕ್ಕಾಗಿ ಇವುಗಳನ್ನು ಬಳಸಲಾಗುತ್ತದೆ ಎಂದು ಗ್ರಾಹಕರು ಒಪ್ಪುತ್ತಾರೆ. ಇದು ಬ್ಯಾಂಕ್‌ನಿಂದ ಕಾಲಕಾಲಕ್ಕೆ ಕಳುಹಿಸಬಹುದಾದ ಟ್ರಾನ್ಸಾಕ್ಷನ್‌ಗಳು/ಮಾಹಿತಿ/ಅಕ್ಸೆಸ್/ಜಾಗೃತಿಗೆ ಸಂಬಂಧಿಸಿದ ಸಂವಹನಕ್ಕೆ ಸಂಬಂಧಿಸಿರುತ್ತದೆ.

## 2. ನಿಯಮಗಳ ಅನ್ವಯತೆ

2.1 ಸಿಐಬಿ ಸೇವೆಗಳ ಬಳಕೆ ಈ ನಿಯಮ ಮತ್ತು ಷರತ್ತುಗಳಿಂದ ನಿಯಂತ್ರಿಸಲ್ಪಡುತ್ತದೆ. ಈ ನಿಯಮಗಳು ಮತ್ತು ಷರತ್ತುಗಳು ಗ್ರಾಹಕರಿಗೆ ಎಕ್ಸಿಸ್ ಬ್ಯಾಂಕ್ ನಿಗದಿಪಡಿಸಿರುವ ಇತರ ಯಾವುದೇ ನಿಯಮಗಳು ಮತ್ತು ಷರತ್ತುಗಳಿಗೆ ಹೆಚ್ಚುವರಿ ಆಗಿರುತ್ತವೆಯೇ ಹೊರತು ಅವುಗಳನ್ನು ಕುಂದಿಸುವುದಿಲ್ಲ.

2.2 ಎಕ್ಸಿಸ್ ಬ್ಯಾಂಕ್ ಕುಂದುಕೊರತೆ ಪರಿಹಾರ ಪಾಲಿಸಿ ನಿಯಮ ಮತ್ತು ಷರತ್ತುಗಳು

2.3 ಎಕ್ಸಿಸ್ ಬ್ಯಾಂಕ್ ಬ್ಯಾಂಕ್‌ನ ಬದ್ಧತೆಯ ನಿಯಮ ಮತ್ತು ಷರತ್ತುಗಳ ಸಂಹಿತೆ

2.4 ಉತ್ಪನ್ನ ವಿವರಗಳು ಮತ್ತು ಗ್ರಾಹಕ ಸಹಾಯದ ಸಂದರ್ಭದಲ್ಲಿ ನಮ್ಮನ್ನು ಸಂಪರ್ಕಿಸಿ

2.5 ಗ್ರಾಹಕ ಪರಿಹಾರ ಪಾಲಿಸಿ

## 3. ಸೇವೆಗಳು

3.1 ಈ ನಿಯಮ ಮತ್ತು ಷರತ್ತುಗಳು, ಅನ್ವಯವಾಗುವ ಕಾನೂನುಗಳು ಹಾಗೂ ಎಕ್ಸಿಸ್ ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ನಿರ್ದಿಷ್ಟಪಡಿಸಬಹುದಾದ ಇತರ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟು, ಗ್ರಾಹಕರಿಗೆ ಎಕ್ಸಿಸ್ ಬ್ಯಾಂಕ್ ಸೇವೆಗಳನ್ನು ಒದಗಿಸುತ್ತದೆ. ಎಕ್ಸಿಸ್ ಬ್ಯಾಂಕ್ ಕಾಲಕಾಲಕ್ಕೆ ತನ್ನ ಸೇವೆಗಳನ್ನು ಅಥವಾ ಸೇವೆಗಳ ವಿಧಾನ, ರೀತಿ ಮತ್ತು ವ್ಯಾಪ್ತಿಯನ್ನು ಮಾರ್ಪಡಿಸುವ, ಅಪ್‌ಗ್ರೇಡ್ ಮಾಡುವ ಮತ್ತು/ಅಥವಾ ಅಮಾನತುಗೊಳಿಸುವ ಹಕ್ಕನ್ನು ಹೊಂದಿರುತ್ತದೆ ಹಾಗೂ ಸೇವೆಗಳಲ್ಲಿನ ಇಂತಹ ಬದಲಾವಣೆಗಳ ಬಗ್ಗೆ ಗ್ರಾಹಕರಿಗೆ ತಿಳಿಸಲು ಪ್ರಯತ್ನಿಸುತ್ತದೆ. ಯಾವುದೇ ಮುನ್ಸೂಚನೆ ನೀಡದೆ ಮತ್ತು ಯಾವುದೇ ಕಾರಣ ನೀಡದೆ ಗ್ರಾಹಕರಿಗೆ ಒದಗಿಸಲಾದ ಎಲ್ಲಾ ಅಥವಾ ಯಾವುದೇ ಸೇವೆಗಳನ್ನು ನಿಲ್ಲಿಸುವ ಹಕ್ಕನ್ನು ಎಕ್ಸಿಸ್ ಬ್ಯಾಂಕ್ ಕಾಯ್ದಿರಿಸುತ್ತದೆ.

3.2 ಸೇವೆಗಳನ್ನು ಅಥವಾ ಅವುಗಳ ಯಾವುದೇ ಭಾಗವನ್ನು ಪಡೆಯಲು ಅಥವಾ ಪಡೆಯುವುದನ್ನು ನಿಲ್ಲಿಸಲು, ಗ್ರಾಹಕರು ಎಕ್ಸಿಸ್ ಬ್ಯಾಂಕ್‌ಗೆ ನಿಗದಿತ ನಮೂನೆಯಲ್ಲಿ ಪ್ರತ್ಯೇಕ ಅಪ್ಲಿಕೇಶನ್ ಸಲ್ಲಿಸಬೇಕು ಹಾಗೂ ಗ್ರಾಹಕರು ಈ ಉದ್ದೇಶಕ್ಕಾಗಿ ಎಕ್ಸಿಸ್ ಬ್ಯಾಂಕ್ ನಿಗದಿಪಡಿಸಿದ ಹೆಚ್ಚುವರಿ ನಿಯಮಗಳು ಮತ್ತು ಷರತ್ತುಗಳಿಗೆ ಹಾಗೂ ಅನ್ವಯವಾಗುವ ಕಾನೂನುಗಳಿಗೆ ಒಳಪಡುತ್ತಾರೆ.

3.3 ಗ್ರಾಹಕರ ಕೋರಿಕೆಯ ಮೇರೆಗೆ, ಯಾವುದೇ ಹಳೆಯ/ಹೊಸ ಖಾತೆಗಳಿಗೆ ಸೇವೆಗಳನ್ನು ಎಕ್ಸಿಸ್ ಬ್ಯಾಂಕ್ ವಿಸ್ತರಿಸಬಹುದು, ಹಾಗೂ ಈ ನಿಯಮ ಮತ್ತು ಷರತ್ತುಗಳು ಗ್ರಾಹಕರು ಅಂತಹ ಹೆಚ್ಚಿನ ಸೇವೆಗಳನ್ನು ಬಳಸುವುದಕ್ಕೆ ಸ್ವಯಂಚಾಲಿತವಾಗಿ ಅನ್ವಯವಾಗುತ್ತವೆ.

3.4 ಸೇವೆಗಳಲ್ಲಿ ಒಳಗೊಂಡಿರುವ ಮತ್ತು ಈ ಬ್ಯಾಂಕ್ ವತಿಯಿಂದ ಸೇವೆಗಳನ್ನು ಒದಗಿಸುವ ಅವಧಿಯಲ್ಲಿ ಅಭಿವೃದ್ಧಿಪಡಿಸಿದ/ಸೃಷ್ಟಿಸಲಾದ ಬೌದ್ಧಿಕ ಆಸ್ತಿ ಹಕ್ಕುಗಳು ಸಂಪೂರ್ಣವಾಗಿ ಬ್ಯಾಂಕ್‌ನ ಒಡೆತನದಲ್ಲಿ ಮಾತ್ರ ಇರುವುದು ಮುಂದುವರಿಯುತ್ತದೆ ಹಾಗೂ ಈ ನಿಯಮಗಳು ಮತ್ತು ಷರತ್ತುಗಳು ಆ ಬೌದ್ಧಿಕ ಆಸ್ತಿ ಹಕ್ಕುಗಳ ಮಾಲೀಕತ್ವ ಅಥವಾ ಬಳಕೆಗೆ ಸಂಬಂಧಿಸಿದಂತೆ ಗ್ರಾಹಕರಿಗೆ ಯಾವುದೇ ರೀತಿಯ ಹಕ್ಕು ನೀಡುವುದಿಲ್ಲ ಎಂದು ಗ್ರಾಹಕರು ಈ ಮೂಲಕ ಒಪ್ಪಿಕೊಳ್ಳುತ್ತಾರೆ ಮತ್ತು ಅಂಗೀಕರಿಸುತ್ತಾರೆ

3.5 ನೋಂದಾಯಿತ ಯೂಸರ್ ಐಡಿ ಬಳಸಿಕೊಂಡು ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳನ್ನು ಅಕ್ಸೆಸ್ ಮಾಡಲು ನಿಗದಿತ ಪ್ಲಾಟ್‌ಫಾರ್ಮ್ ಮೂಲಕ ಯಾವುದೇ ಗ್ರಾಹಕರು/ಬಳಕೆದಾರರು ಕೊನೆಯದಾಗಿ ಲಾಗಿನ್ ಆದ ದಿನಾಂಕದಿಂದ 365 (ಮುನ್ನೂರ ಅರವತ್ತೈದು) ದಿನಗಳ [ಕ್ಯಾಲೆಂಡರ್ ದಿನಗಳು] ನಿರಂತರ ಅವಧಿಗೆ ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್‌ಗೆ ಲಾಗಿನ್ ಆಗದಿದ್ದರೆ, ಎಕ್ಸಿಸ್ ಬ್ಯಾಂಕ್ ಅಂತಹ ಗ್ರಾಹಕರು/ಬಳಕೆದಾರರು/ಯೂಸರ್ ಐಡಿಯನ್ನು "ನಿಷ್ಕ್ರಿಯ ಬಳಕೆದಾರರು" ಎಂದು ವರ್ಗೀಕರಿಸಬಹುದು/ಗುರುತಿಸಬಹುದು/ಪ್ರತ್ಯೇಕಿಸಬಹುದು. ಯಾವುದೇ ಗ್ರಾಹಕರು/ಬಳಕೆದಾರರು/ಯೂಸರ್ ಐಡಿಯನ್ನು 'ನಿಷ್ಕ್ರಿಯ ಬಳಕೆದಾರರು' ಎಂದು ವರ್ಗೀಕರಣ/ಗುರುತಿಸುವಿಕೆ/ಪ್ರತ್ಯೇಕೀಕರಣ ಮಾಡಿದ ನಂತರ, ಅಂತಹ ಗ್ರಾಹಕರು/ ಬಳಕೆದಾರರು ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್‌ನಲ್ಲಿ ಆ ಐಡಿಯನ್ನು ರಿ-ಆ್ಯಕ್ಟಿವೇಶನ್ ಮಾಡದೇ ಸಂಬಂಧಿತ ನೋಂದಾಯಿತ ಯೂಸರ್ ಐಡಿಯಿಂದ ಯಾವುದೇ ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳನ್ನು ಪಡೆಯಲು ಸಾಧ್ಯವಾಗುವುದಿಲ್ಲ. ನಿಷ್ಕ್ರಿಯ ಯೂಸರ್

ಐಡಿ ರಿ-ಆ್ಯಕ್ಟಿವೇಟ್ ಮಾಡಲು, ಆ ಗ್ರಾಹಕರು (ಅಧಿಕೃತ ಸಹಿದಾರರ ಮೂಲಕ) / ಬಳಕೆದಾರರು ಎಕ್ಸಿಸ್ ಬ್ಯಾಂಕ್‌ಗೆ ಲಿಖಿತ ಸೂಚನೆ ನೀಡುವ ಮೂಲಕ ವಿನಂತಿಸಬಹುದು. ರಿ-ಆ್ಯಕ್ಟಿವೇಶನ್ ವಿನಂತಿ ಸ್ವೀಕರಿಸಿದ ನಂತರ, ಎಕ್ಸಿಸ್ ಬ್ಯಾಂಕ್ ತನ್ನ ವಿವೇಚನೆಯ ಮೇರೆಗೆ ಅಂತಹ ವಿನಂತಿಯನ್ನು ಅನುಮೋದಿಸಬಹುದು ಮತ್ತು ಯೂಸರ್ ಐಡಿ ರಿ-ಆ್ಯಕ್ಟಿವೇಶನ್ ಮಾಡುವ ಮೂಲಕ ಗ್ರಾಹಕರಿಗೆ/ಬಳಕೆದಾರರಿಗೆ ಮತ್ತೆ ಆಕ್ಸೆಸ್ ನೀಡಬಹುದು.

3.6 ಒಂದೇ ಪಾವತಿಗೆ ಒದಗಿಸಲಾದ ಅಧಿಕೃತವಾಗಿಸಿದ ಮ್ಯಾಟ್ರಿಕ್ಸ್ ಆಧಾರದ ಮೇಲೆ ಹಳೆಯ ಗ್ರಾಹಕರಿಗೆ ದೊಡ್ಡ ಗಾತ್ರದ ಪಾವತಿ ಮತ್ತು ಟಿಎಫ್ ಕನೆಕ್ಟ್‌ನ ಸೇವೆಗಳನ್ನು ಡಿಫಾಲ್ಟ್ ಆಗಿ ನೀಡಲು ಗ್ರಾಹಕರು ಈ ಮೂಲಕ ಬ್ಯಾಂಕ್‌ಗೆ ಅಧಿಕಾರ ನೀಡುತ್ತಾರೆ. ಅನ್ವಯವಾಗುವ ನಿಯಮ ಮತ್ತು ಷರತ್ತುಗಳು ಗ್ರಾಹಕರಿಂದ ಅಂತಹ ಸೇವೆಗಳ ಬಳಕೆಯ ಮುಂದುವರಿಕೆಗೆ ಅನ್ವಯವಾಗುತ್ತವೆ.

3.7 ಎಕ್ಸಿಸ್ ಪಾವತಿ ವರ್ಗಾವಣೆ ಸೌಲಭ್ಯಕ್ಕೆ (ಎನ್‌ಇಎಫ್‌ಟಿ, ಆರ್‌ಟಿಜಿಎಸ್ ಮತ್ತು ಐಎಂಪಿಎಸ್) ಸಂಬಂಧಿಸಿದ ಯಾವುದೇ ಉತ್ತಮ ಗುಣಮಟ್ಟದ ಬಗ್ಗೆ ಎಕ್ಸಿಸ್ ಬ್ಯಾಂಕ್ ಲಿಮಿಟೆಡ್ (ಎಕ್ಸಿಸ್‌ಬಿ) ಯಾವುದೇ ಗ್ಯಾರಂಟಿ ನೀಡುವುದಿಲ್ಲ ಅಥವಾ ವಾರಂಟಿ ನೀಡುವುದಿಲ್ಲ ಮತ್ತು ಯಾವುದೇ ಪ್ರಾತಿನಿಧ್ಯ ನೀಡುವುದಿಲ್ಲ. ಮಾನದಂಡಗಳನ್ನು ಪೂರೈಸಿದರೆ ಅದು ಕೆಲಸ ಮಾಡುತ್ತದೆ ಎಂಬ ಸದ್ಭಾವನೆಯ ಆಧಾರದಲ್ಲಿ ಹಣ ವರ್ಗಾವಣೆ ಮಾಡಲು ಎಕ್ಸಿಸ್‌ಬಿ ಈ ಸೌಲಭ್ಯ ಒದಗಿಸುತ್ತದೆ. ಗ್ರಾಹಕರು ಕೈಗೊಂಡ ಮತ್ತು ಎಕ್ಸಿಸ್‌ಬಿ ಮೂಲಕ ಪ್ರಕ್ರಿಯೆಗೊಳಿಸಲಾದ ಯಾವುದೇ ಟ್ರಾನ್ಸಾಕ್ಷನ್‌ನ ವೈಫಲ್ಯದಿಂದ ಉಂಟಾಗುವ ಆದಾಯದ ನಷ್ಟ, ವ್ಯವಹಾರದ ಅಡಚಣೆ, ಗ್ರಾಹಕರ ಖಾತೆಗಳಿಗೆ ಸಂಬಂಧಿಸಿದಂತೆ ಎಕ್ಸಿಸ್ ಬ್ಯಾಂಕ್ ಒದಗಿಸಿದ ಅಥವಾ ಬಹಿರಂಗಪಡಿಸಿದ ಮಾಹಿತಿ ಅಥವಾ ಯಾವುದೇ ರೀತಿಯ ನಷ್ಟಕ್ಕೆ ಸಂಬಂಧಿಸಿದಂತೆ, ಅದು ಪ್ರತ್ಯಕ್ಷ, ಪರೋಕ್ಷ, ಪ್ರಾಸಂಗಿಕ ಅಥವಾ ಪರಿಣಾಮಕಾರಿ ಹಾನಿಯಾಗಿದ್ದರೂ ಮತ್ತು ಅಂತಹ ಹಾನಿಯು ಗ್ರಾಹಕರಿಗೆ ಅಥವಾ ಇನ್ಯಾವುದೇ ವ್ಯಕ್ತಿಗೆ ಸಂಭವಿಸಿದ್ದರೂ ಸಹ, ಅದಕ್ಕೆ ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ ಮತ್ತು ಯಾವುದೇ ರೀತಿಯಲ್ಲಿ ಹೊಣೆಯಾಗುವುದಿಲ್ಲ ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ.

ಆದರೂ ಗ್ರಾಹಕರು ತಕ್ಷಣವೇ ಮಾಡಲು ಪ್ರಸ್ತಾಪಿಸಿದಂತೆ ಟ್ರಾನ್ಸಾಕ್ಷನ್ ಕಾರ್ಯಗತಗೊಳಿಸಲು ಮತ್ತು ಪ್ರಕ್ರಿಯೆಗೊಳಿಸಲು ಎಕ್ಸಿಸ್‌ಬಿ ಪ್ರಯತ್ನಿಸುತ್ತದೆ ಆದರೆ ಕಾರ್ಯಾಚರಣೆಯ ವ್ಯವಸ್ಥೆಗಳ ವೈಫಲ್ಯ ಅಥವಾ ಕಾನೂನಿನ ಯಾವುದೇ ಅವಶ್ಯಕತೆಯಿಂದಾಗಿ ಯಾವುದೇ ಕಾರಣದಿಂದಾಗಿ ಪ್ರತಿಕ್ರಿಯೆಯ ಕೊರತೆ ಅಥವಾ ವಿಳಂಬಕ್ಕೆ ಈ ಬ್ಯಾಂಕ್ ಹೊಣೆಯಲ್ಲ.

ಮೇಲಿನ ವಿಷಯಗಳು ಏನೇ ಇದ್ದರೂ, ಎಕ್ಸಿಸ್‌ಬಿ ಟ್ರಾನ್ಸ್‌ಫರ್ ಸೌಲಭ್ಯದ (ಎನ್‌ಇಎಫ್‌ಟಿ, ಆರ್‌ಟಿಜಿಎಸ್ ಮತ್ತು ಐಎಂಪಿಎಸ್) ಕಾನೂನುಬಾಹಿರ ಅಥವಾ ಅನುಚಿತ ಬಳಕೆಗೆ ಸಂಬಂಧಿಸಿದಂತೆ ಗ್ರಾಹಕರು ಆರ್ಥಿಕ ಶುಲ್ಕಗಳು ಅಥವಾ ದಂಡವನ್ನು ಪಾವತಿಸಲು ಹೊಣೆಗಾರರಾಗಿರುತ್ತಾರೆ ಹಾಗೂ ಈ ಶುಲ್ಕಗಳನ್ನು ನಿರ್ಧರಿಸುವ ಸಂಪೂರ್ಣ ವಿವೇಚನಾಧಿಕಾರವು ಎಕ್ಸಿಸ್‌ಬಿ ವಶದಲ್ಲಿರುತ್ತದೆ ಅಥವಾ ಅಂತಹ ಬಳಕೆಯು ಗ್ರಾಹಕರಿಗೆ ಈ ಎಕ್ಸಿಸ್‌ಬಿ ಟ್ರಾನ್ಸ್‌ಫರ್ ಸೌಲಭ್ಯದ ಅಮಾನತಿಗೆ ಕಾರಣವಾಗಬಹುದು. ಯಾವುದೇ ದಾವೆ,

ಕಾನೂನು ಪ್ರಕ್ರಿಯೆ ಅಥವಾ ಅದರ ಪರಿಣಾಮವಾಗಿ ಉಂಟಾಗುವ ಯಾವುದೇ ನಷ್ಟ, ವೆಚ್ಚ ಅಥವಾ ಹಾನಿಯ ವಿರುದ್ಧ ಎಕ್ಸಿಸ್‌ಬಿ, ಅದರ ಅಂಗಸಂಸ್ಥೆಗಳು ಮತ್ತು ಸಂಯೋಜಿತ ಸಂಸ್ಥೆಗಳಿಗೆ ಸಂಪೂರ್ಣ ಪರಿಹಾರ ನೀಡಲು ಮತ್ತು ಅವುಗಳಿಗೆ ಯಾವುದೇ ಹಾನಿ ಆಗದಂತೆ ರಕ್ಷಿಸಲು ಗ್ರಾಹಕರು ಈ ಮೂಲಕ ಒಪ್ಪುತ್ತಾರೆ.

ಫಿಶಿಂಗ್ ಮತ್ತು/ಅಥವಾ ಹ್ಯಾಕಿಂಗ್ ಸೇರಿದಂತೆ ಯಾವುದೇ ವಿಧಾನಗಳ ಮೂಲಕ ಎಕ್ಸಿಸ್‌ಬಿ ಪಾವತಿ ವರ್ಗಾವಣೆ ಸೌಲಭ್ಯ (ಎನ್‌ಇಎಫ್‌ಟಿ, ಆರ್‌ಟಿಜಿಎಸ್ ಮತ್ತು ಐಎಂಪಿಎಸ್) ಬಳಸಿಕೊಂಡು, ಅನಧಿಕೃತ ವ್ಯಕ್ತಿಗಳು ದಾಖಲೆಗಳು ಮತ್ತು/ಅಥವಾ ಖಾತೆಗಳು/ಮಾಹಿತಿಯನ್ನು ಪ್ರವೇಶಿಸುವುದಕ್ಕೆ ಎಕ್ಸಿಸ್‌ಬಿ ಅಥವಾ ಅದರ ಅಂಗಸಂಸ್ಥೆಗಳು ಅಥವಾ ಸಂಯೋಜಿತ ಸಂಸ್ಥೆಗಳು ಹೊಣೆಯಲ್ಲ, ಹಾಗೂ ಇದರ ಪರಿಣಾಮವಾಗಿ ಎಕ್ಸಿಸ್‌ಬಿ ಮತ್ತು ಅದರ ಅಂಗಸಂಸ್ಥೆಗಳು ಹಾಗೂ ಸಂಯೋಜಿತ ಸಂಸ್ಥೆಗಳ ವಿರುದ್ಧ ಕೈಗೊಳ್ಳಬಹುದಾದ ಯಾವುದೇ ಕ್ರಮ, ಮೊಕದ್ದಮೆ, ಕಾನೂನು ಪ್ರಕ್ರಿಯೆ ಅಥವಾ ಉಂಟಾಗಬಹುದಾದ ಯಾವುದೇ ನಷ್ಟ, ವೆಚ್ಚ ಅಥವಾ ಹಾನಿಯಿಂದ ಗ್ರಾಹಕರು ಈ ಮೂಲಕ ಎಕ್ಸಿಸ್‌ಬಿ ಮತ್ತು ಅದರ ಅಂಗಸಂಸ್ಥೆಗಳು ಹಾಗೂ ಸಂಯೋಜಿತ ಸಂಸ್ಥೆಗಳನ್ನು ಸಂಪೂರ್ಣವಾಗಿ ಮುಕ್ತಗೊಳಿಸುತ್ತಾರೆ ಮತ್ತು ರಕ್ಷಣೆ ನೀಡುತ್ತಾರೆ. ಅನಿವಾರ್ಯ ಸಂದರ್ಭಗಳಿಂದಾಗಿ ಅಥವಾ ಎಕ್ಸಿಸ್‌ಬಿ ನಿಯಂತ್ರಣಕ್ಕೂ ಮೀರಿದ ಯಾವುದೇ ಇತರ ಕಾರಣಗಳಿಂದಾಗಿ, ಎಕ್ಸಿಸ್‌ಬಿ ಪಾವತಿ ವರ್ಗಾವಣೆ ಸೌಲಭ್ಯ (ಎನ್‌ಇಎಫ್‌ಟಿ, ಆರ್‌ಟಿಜಿಎಸ್ ಮತ್ತು ಐಎಂಪಿಎಸ್) ಅಪೇಕ್ಷಿತ ರೀತಿಯಲ್ಲಿ ಸಿಗದೇ ಇದ್ದಲ್ಲಿ, ಅಂತಹ ಯಾವುದೇ ಸಂದರ್ಭದಲ್ಲೂ ಗ್ರಾಹಕರಿಗೆ ಎಕ್ಸಿಸ್‌ಬಿ ಹೊಣೆಯಲ್ಲ.
ಎಕ್ಸಿಸ್‌ಬಿ ಪಾವತಿ ವರ್ಗಾವಣೆ ಸೌಲಭ್ಯದ (ಎನ್‌ಇಎಫ್‌ಟಿ, ಆರ್‌ಟಿಜಿಎಸ್ ಮತ್ತು ಐಎಂಪಿಎಸ್) ಬಳಕೆಯಿಂದ ಉಂಟಾಗುವ ಟ್ರಾನ್ಸಾಕ್ಷನ್‌ಗಳಿಂದ ಜನರೇಟ್ ಆದ ಎಲ್ಲಾ ಎಕ್ಸಿಸ್‌ಬಿ ದಾಖಲೆಗಳು (ಎಲೆಕ್ಟ್ರಾನಿಕ್ ಸೇರಿದಂತೆ), ಟ್ರಾನ್ಸಾಕ್ಷನ್ ರೆಕಾರ್ಡ್ ಮಾಡಲಾದ ಸಮಯ ಒಳಗೊಂಡಂತೆ ಇವುಗಳು ಟ್ರಾನ್ಸಾಕ್ಷನ್‌ನ ನೈಜತೆ ಮತ್ತು ನಿಖರತೆಯ ನಿರ್ಣಾಯಕ ಪುರಾವೆಯಾಗಿರುತ್ತವೆ.
ಎರಡೂ ಪಾರ್ಟಿಗಳ ರಕ್ಷಣೆಗಾಗಿ, ಮತ್ತು ತಪ್ಪು ತಿಳುವಳಿಕೆಗಳನ್ನು ಸರಿಪಡಿಸುವ ಸಾಧನವಾಗಿ, ಎಕ್ಸಿಸ್‌ಬಿ ತನ್ನ ವಿವೇಚನೆಯಿಂದ ಮತ್ತು ಗ್ರಾಹಕರಿಗೆ ಹೆಚ್ಚಿನ ಮುನ್ಸೂಚನೆ ನೀಡದೆ, ಗ್ರಾಹಕರು ಮತ್ತು ಎಕ್ಸಿಸ್‌ಬಿ ಮತ್ತು ಅದರ ಯಾವುದೇ ಉದ್ಯೋಗಿಗಳು ಅಥವಾ ಏಜೆಂಟ್‌ಗಳ ನಡುವಿನ ಯಾವುದೇ ಅಥವಾ ಎಲ್ಲಾ ದೂರವಾಣಿ ಸಂಭಾಷಣೆಗಳನ್ನು (ಯಾವುದಾದರೂ ಇದ್ದರೆ) ಮೇಲ್ವಿಚಾರಣೆ ಮಾಡಲು ಮತ್ತು ರೆಕಾರ್ಡ್ ಮಾಡಲು ಗ್ರಾಹಕರು ಒಪ್ಪುತ್ತಾರೆ ಮತ್ತು ಅಧಿಕಾರ ನೀಡುತ್ತಾರೆ.
ಎಕ್ಸಿಸ್‌ಬಿ ಪಾವತಿ ವರ್ಗಾವಣೆ ಸೌಲಭ್ಯದಲ್ಲಿ (ಎನ್‌ಇಎಫ್‌ಟಿ, ಆರ್‌ಟಿಜಿಎಸ್ ಮತ್ತು ಐಎಂಪಿಎಸ್), ವ್ಯಾಪಾರ ಅರ್ಹತೆ, ನಿರ್ದಿಷ್ಟ ಉದ್ದೇಶಕ್ಕಾಗಿ ಸೂಕ್ತತೆ, ಡೇಟಾ ನಿಖರತೆ ಮತ್ತು ಸಂಪೂರ್ಣತೆ, ಹಾಗೂ ಉಲ್ಲಂಘನೆ ಮಾಡದಿರುವಿಕೆಗೆ ಸಂಬಂಧಿಸಿದ ಯಾವುದೇ ವಾರಂಟಿಗಳು ಸೇರಿದಂತೆ, ಪ್ರತ್ಯಕ್ಷ ಅಥವಾ ಪರೋಕ್ಷ ಅಥವಾ ಶಾಸನಬದ್ಧವಾದ ಯಾವುದೇ ರೀತಿಯ ಎಲ್ಲಾ ವಾರಂಟಿಗಳ ಸಂಪೂರ್ಣ ನಿಖರತೆ, ದೋಷ ರಹಿತತೆಯನ್ನು ಎಕ್ಸಿಸ್‌ಬಿ ಇಲ್ಲಿ ಸ್ಪಷ್ಟವಾಗಿ

ನಿರಾಕರಿಸುತ್ತದೆ.

**4. ನಿಯಮ ಮತ್ತು ಷರತ್ತುಗಳಿಗೆ ತಿದ್ದುಪಡಿ**

4.1. ಈ ನಿಯಮ ಮತ್ತು ಷರತ್ತುಗಳಲ್ಲಿ ಬೇರೆ ಕಡೆ ಒಳಗೊಂಡಿರುವ ಯಾವುದೇ ವಿಷಯದ ಹೊರತಾಗಿಯೂ, ಎಕ್ಸಿಸ್ ಬ್ಯಾಂಕ್ ಸೇವೆಗಳನ್ನು ಅಪ್‌ಗ್ರೇಡ್ ಮಾಡಲು ಅಥವಾ ಮಾರ್ಪಾಡು ಮಾಡಲು ಅಥವಾ ಗ್ರಾಹಕರಿಗೆ ಹೊಸ ಸೇವೆಗಳನ್ನು ಒದಗಿಸಲು ನಿರ್ಧರಿಸಿದಾಗ, ಅಂತಹ ಅಪ್‌ಗ್ರೇಡ್‌ಗಳು, ಮಾರ್ಪಾಡುಗಳು ಮತ್ತು ಹೊಸ ಸೇವೆಗಳು ಎಕ್ಸಿಸ್ ಬ್ಯಾಂಕ್ ನಿಗದಿಪಡಿಸಬಹುದಾದ ಅಂತಹ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತವೆ, ಮತ್ತು ಅಂತಹ ತಿದ್ದುಪಡಿಯ ಅಗತ್ಯವಿದ್ದರೆ, ಯಾವುದೇ ಸಮಯದಲ್ಲಿ ಎಕ್ಸಿಸ್ ಬ್ಯಾಂಕ್ ಈ ಯಾವುದೇ ನಿಯಮ ಮತ್ತು ಷರತ್ತುಗಳನ್ನು ತಿದ್ದುಪಡಿ ಮಾಡುತ್ತದೆ ಅಥವಾ ಪೂರಕಗೊಳಿಸುತ್ತದೆ ಹಾಗೂ ಈ ತಿದ್ದುಪಡಿಯು ಗ್ರಾಹಕರ ಮೇಲೆ ಬದ್ಧವಾಗಿರುತ್ತದೆ. ಅಂತಹ ಬದಲಾವಣೆಗಳ ಬಗ್ಗೆ ಗ್ರಾಹಕರಿಗೆ ತಿಳಿಸಲು ಎಕ್ಸಿಸ್ ಬ್ಯಾಂಕ್ ಪ್ರಯತ್ನಿಸುತ್ತದೆ. ಈ ನಿಯಮ ಮತ್ತು ಷರತ್ತುಗಳಲ್ಲಿನ ಯಾವುದೇ ಮಾರ್ಪಾಡುಗಳನ್ನು ಗ್ರಾಹಕರಿಗೆ ವೆಬ್‌ಸೈಟ್/ಸೈಟ್‌ನಲ್ಲಿ ಅಪ್‌ಡೇಟ್/ಅಪ್‌ಲೋಡ್ ಮಾಡಲಾಗುತ್ತದೆ, ಅದನ್ನು ಗ್ರಾಹಕರಿಗೆ ಸೂಚಿಸಲಾಗುತ್ತದೆ ಎಂದು ಪರಿಗಣಿಸಲಾಗುತ್ತದೆ.

**5. ಭದ್ರತಾ ಪ್ರಕ್ರಿಯೆ**

5.1. ಗ್ರಾಹಕರು, ತಮ್ಮ ಸ್ವಂತ ಆದ ಅಪಾಯ ಮತ್ತು ಪರಿಣಾಮಗಳಲ್ಲಿ, (i) ಬಳಕೆದಾರ-ಐಡಿ ಮತ್ತು ಪಾಸ್‌ವರ್ಡ್ (ಗಳು) (ii) ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳನ್ನು ಅಕ್ಸೆಸ್ ಮಾಡಲು ಒನ್ ಟಚ್ ಡಿವೈಸ್‌ಗಳು ಒಳಗೊಂಡಂತೆ ಕಾಲಕಾಲಕ್ಕೆ ಎಕ್ಸಿಸ್ ಬ್ಯಾಂಕ್ ಸೂಚಿಸಿದ ಭದ್ರತಾ ಪ್ರಕ್ರಿಯೆ ಅನುಸರಿಸುವ ಮೂಲಕ ಸೇವೆಗಳನ್ನು ಅಕ್ಸೆಸ್ ಮಾಡಬೇಕು. ಜೊತೆಗೆ, ಎಕ್ಸಿಸ್ ಬ್ಯಾಂಕ್‌ಗೆ ಅಗತ್ಯವಿರುವಂತೆ ಅಂತಹ ಇತರ ಭದ್ರತಾ ಪ್ರಕ್ರಿಯೆ ಮತ್ತು ದೃಢೀಕರಣದ ವಿಧಾನಗಳನ್ನು ಅಳವಡಿಸಿಕೊಳ್ಳಲು ಗ್ರಾಹಕರಿಗೆ ಎಕ್ಸಿಸ್ ಬ್ಯಾಂಕ್ ಸಲಹೆ ನೀಡಬಹುದು ಮತ್ತು ಗ್ರಾಹಕರು ಅಂತಹ ಭದ್ರತಾ ಪ್ರಕ್ರಿಯೆಯನ್ನು ಪಾಲಿಸಲು ಒಪ್ಪುತ್ತಾರೆ.

5.2. ಗ್ರಾಹಕರು ಮತ್ತು ಗ್ರಾಹಕರು ಅಧಿಕೃತಗೊಳಿಸಿದ ಬಳಕೆದಾರರು ಪಾಸ್‌ವರ್ಡ್‌ಗಳು, ಎಲ್ಲಾ ಬಳಕೆದಾರ ಐಡಿಗಳು ಮತ್ತು ಪಾಸ್‌ವರ್ಡ್‌ಗಳು, ಒಟಿಪಿಗಳನ್ನು ಗೌಪ್ಯ ಮತ್ತು ಸೂಕ್ತ ರಕ್ಷಣೆಯೊಂದಿಗೆ ಇಟ್ಟುಕೊಳ್ಳಬೇಕು ಮತ್ತು ಯಾವುದೇ ಉದ್ಯೋಗಿಗಳು ಮತ್ತು ಪ್ರತಿನಿಧಿಗಳು, ಮಾರಾಟಗಾರರು, ಎಕ್ಸಿಸ್ ಬ್ಯಾಂಕ್‌ನ ಪಾಲುದಾರರು ಸೇರಿದಂತೆ ಯಾವುದೇ ಅನಧಿಕೃತ ವ್ಯಕ್ತಿಗೆ ಅದನ್ನು ಬಹಿರಂಗಪಡಿಸಬಾರದು. ಗ್ರಾಹಕರು ಅಥವಾ ಬಳಕೆದಾರರು ಯಾವುದೇ ಥರ್ಡ್ ಪಾರ್ಟಿಗಳಿಗೆ ಪಾಸ್‌ವರ್ಡ್ ಬಹಿರಂಗಪಡಿಸಿದ ಪರಿಣಾಮವಾಗಿ ಗ್ರಾಹಕರು ಯಾವುದೇ ನಷ್ಟ ಎದುರಿಸಿದರೆ, ಅದಕ್ಕೆ ಎಕ್ಸಿಸ್ ಬ್ಯಾಂಕ್ ಯಾವುದೇ ರೀತಿಯಲ್ಲಿ ಹೊಣೆಯಲ್ಲ.

5.3. ಬ್ಯಾಂಕ್ ಒದಗಿಸುವ ಕಡ್ಡಾಯ 2 ಅಂಶ ದೃಢೀಕರಣ (2ಎಫ್ಎ) ಮೂಲಕ ಗ್ರಾಹಕರಿಗೆ ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್ ಚಾನೆಲ್‌ಗೆ ಅಕ್ಸೆಸ್ ನೀಡಲಾಗುತ್ತದೆ. ಎಸ್‌ಎಂಎಸ್, ಫೋನ್ ಕರೆ, ಮೊಬೈಲ್‌ನಲ್ಲಿ ಒಟಿಪಿ, ಒನ್ ಟಚ್ ಡಿವೈಸ್‌ಗಳು ಅಥವಾ

ಕಾಲಕಾಲಕ್ಕೆ ಅದರ ಉತ್ಪನ್ನಗಳನ್ನು ಒದಗಿಸುವುದರ ಭಾಗವಾಗಿ ಅಂತಹ ಯಾವುದೇ ವಿಧಾನಗಳ ಮೂಲಕ ಗ್ರಾಹಕರಿಗೆ ಎಕ್ಸಿಸ್ ಬ್ಯಾಂಕ್ ಈ 2ಎಫ್ಎ ಒದಗಿಸಬಹುದು.

- ಎಕ್ಸಿಸ್ ಮೊಬೈಲ್-ಕಾರ್ಪೊರೇಟ್ ಆ್ಯಪ್‌ನಲ್ಲಿ ಒಟಿಪಿ ಜನರೇಟ್ ಮಾಡುವ ಮೂಲಕ ಗ್ರಾಹಕರು ವೆಬ್ ಬ್ರೌಸರ್‌ನಲ್ಲಿ ಲಾಗಿನ್ ಮಾಡಬಹುದು ಅಥವಾ ಟ್ರಾನ್ಸಾಕ್ಷನ್‌ಗಳನ್ನು ಅನುಮೋದಿಸಬಹುದು. ಬಳಕೆದಾರರು ಎಕ್ಸಿಸ್ ಮೊಬೈಲ್-ಕಾರ್ಪೊರೇಟ್ ಅಪ್ಲಿಕೇಶನ್‌ನಲ್ಲಿ ಎಂಪಿನ್ ನೋಂದಣಿ ಮಾಡಿದ್ದರೆ ಮತ್ತು ಸೆಟಪ್ ಮಾಡಿದ್ದರೆ ಮೊಬೈಲ್ ಆ್ಯಪ್‌ನಲ್ಲಿ ಒಟಿಪಿಯನ್ನು ಭಾರತದೊಳಗೆ ಅಥವಾ ಅಂತಾರಾಷ್ಟ್ರೀಯವಾಗಿ ಜನರೇಟ್ ಮಾಡಬಹುದು.
- ಗ್ರಾಹಕರ ಮೊಬೈಲ್ ಫೋನ್ ನೆಟ್‌ವರ್ಕ್‌ನ ಯಾವುದೇ ಸಮಸ್ಯೆ ಅಥವಾ ಗ್ರಾಹಕರ ಮೊಬೈಲ್ ಫೋನ್ ಅಥವಾ ಸಿಮ್ ಕಾರ್ಡ್‌ನಲ್ಲಿ ಇರುವ ಯಾವುದೇ ಇತರ ಸಮಸ್ಯೆಯಿಂದ ಟ್ರಾನ್ಸಾಕ್ಷನ್‌ನಲ್ಲಿ ಆಗುವ ಯಾವುದೇ ವೈಫಲ್ಯಕ್ಕೆ ಬ್ಯಾಂಕ್ ಹೊಣೆಯಲ್ಲ, ಏಕೆಂದರೆ ಅದರ ಮೇಲೆ ಬ್ಯಾಂಕ್ ಯಾವುದೇ ನಿಯಂತ್ರಣ ಹೊಂದಿಲ್ಲ.
- ಗ್ರಾಹಕರ ಮೊಬೈಲ್ ಫೋನ್ ಮತ್ತು/ಅಥವಾ ಸಿಮ್ ಕಾರ್ಡ್‌ನ ಯಾವುದೇ ನಷ್ಟ ಅಥವಾ ಕಳ್ಳತನದ ಸಂದರ್ಭದಲ್ಲಿ, ಗ್ರಾಹಕರು ತಕ್ಷಣವೇ ತಮ್ಮ ಸೇವಾ ಪೂರೈಕೆದಾರರನ್ನು ಸಂಪರ್ಕಿಸಿ ತಮ್ಮ ಮೊಬೈಲ್ ಫೋನ್ ಮತ್ತು/ಅಥವಾ ಸಿಮ್ ಕಾರ್ಡ್ ನೋಂದಣಿ ರದ್ದತಿ ಅಥವಾ ಬ್ಲಾಕ್ ಮಾಡಬೇಕು. ಗ್ರಾಹಕರು ಅಂತಹ ನಷ್ಟ ಅಥವಾ ಕಳ್ಳತನದ ಬಗ್ಗೆ ತಕ್ಷಣವೇ ಬ್ಯಾಂಕ್‌ಗೆ ತಿಳಿಸಬೇಕು, ಆಗ ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್‌ನಲ್ಲಿ ಬ್ಯಾಂಕ್ ತಕ್ಷಣವೇ ಬಳಕೆದಾರರ ಅಕ್ಸೆಸ್ ಡಿಆ್ಯಕ್ಟಿವೇಟ್ ಮಾಡುತ್ತದೆ. ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್‌ನಲ್ಲಿ ಅಕ್ಸೆಸ್ ಆ್ಯಕ್ಟಿವೇಟ್ ಮಾಡಲು ಬಳಕೆದಾರರು ಲಿಖಿತ ಅಥವಾ ಮೌಲ್ಯೀಕರಿಸಿದ ಪ್ರಕ್ರಿಯೆಯ ಮೂಲಕ ಬ್ಯಾಂಕ್‌ಗೆ ತಿಳಿಸಬೇಕು. ಅಂತಹ ನಷ್ಟ ಅಥವಾ ಕಳ್ಳತನದ ಕಾರಣದಿಂದಾಗಿ ಮೊಬೈಲ್ ಫೋನ್ ಅಥವಾ ಸಿಮ್ ಕಾರ್ಡ್‌ನ ಯಾವುದೇ ಅನಧಿಕೃತ ಬಳಕೆಗೆ ಬ್ಯಾಂಕ್ ಹೊಣೆಯಲ್ಲ. ಗ್ರಾಹಕರು ತಮ್ಮ ಮೊಬೈಲ್ ಫೋನ್ ಮತ್ತು ಅದರಲ್ಲಿರುವ ಡೇಟಾ, ಪಾಸ್‌ವರ್ಡ್‌ಗಳು ಮತ್ತು ಅದರ ಬಳಕೆಯನ್ನು ಗೌಪ್ಯವಾಗಿ ಇಡಬೇಕು ಹಾಗೂ ಯಾವುದೇ ಸಂದರ್ಭದಲ್ಲೂ ಅದನ್ನು ಬೇರೆಯವರಿಗೆ ಹಂಚಿಕೊಳ್ಳಬಾರದು. ಬ್ಯಾಂಕ್ ಅನುಮತಿಸಿದ ಅಥವಾ ಅಗತ್ಯಪಡಿಸಿದ ಉದ್ದೇಶಕ್ಕಾಗಿ ಹೊರತುಪಡಿಸಿ, ಗ್ರಾಹಕರು ಮೊಬೈಲ್ ಫೋನ್‌ನಲ್ಲಿ ಇರುವ ಡೇಟಾದ ಕಾಪಿ ಅಥವಾ ಡೂಪ್ಲಿಕೇಟ್ ಮಾಡಬಾರದು ಅಥವಾ ಅಂತಹ ಡೇಟಾ ಸೇವ್ ಮಾಡಬಾರದು.
- ತಮ್ಮ 2ಎಫ್ಎ ಭದ್ರತೆಗೆ ತಾವು ಮಾತ್ರ ಜವಾಬ್ದಾರರು ಎಂಬುದನ್ನು ಗ್ರಾಹಕರು ಖಚಿತಪಡಿಸಿಕೊಳ್ಳಬೇಕು.

5.4. ಇಂಟರ್‌ನೆಟ್ ಬ್ಯಾಂಕಿಂಗ್ ಚಾನೆಲ್‌ನಲ್ಲಿ ಟ್ರಾನ್ಸಾಕ್ಷನ್‌ಗಳು ಮತ್ತು ಕೋರಿಕೆಗಳನ್ನು ಅಕ್ಸೆಸ್ ಮಾಡುವಾಗ ಅಥವಾ ಅನುಮೋದಿಸುವಾಗ ಗ್ರಾಹಕರು ಕಡ್ಡಾಯವಾಗಿ ಈ 2 ಎಫ್ಎ ಬಳಸಬೇಕು.

5.5. ಬಳಕೆದಾರರು ತಮ್ಮ ಮೊಬೈಲ್ ಡಿವೈಸ್‌ಗಳು ಅಥವಾ ಒನ್ ಟಚ್ ಡಿವೈಸ್‌ಗಳ (ಹಾರ್ಡ್ ಟೋಕನ್ ಎಂದೂ ಕರೆಯುತ್ತಾರೆ) ಸುರಕ್ಷಿತ ಪಾಲನೆಗೆ ಜವಾಬ್ದಾರರಾಗಿರುತ್ತಾರೆ ಮತ್ತು

ತಮ್ಮ ಸಂಸ್ಥೆಯ ಸದಸ್ಯರು ಎಕ್ಸಿಸ್ ಬ್ಯಾಂಕ್‌ನ 2ಎಫ್‌ಎ ಬಳಸಿ ನೀಡುವ ಯಾವುದೇ ಮತ್ತು ಎಲ್ಲಾ ಸೂಚನೆಗಳಿಗೆ ಹಾಗೂ ನಡೆಸುವ ವ್ಯವಹಾರಗಳಿಗೆ ಬದ್ಧರಾಗಿರುತ್ತಾರೆ. ಭದ್ರತಾ ವಿಧಾನ ಬಳಸುವ ಮೂಲಕ ನೀಡಲಾಗುವ ಎಲ್ಲಾ ಸೂಚನೆಗಳನ್ನು ಅಸಲಿ ಎಂದು ಪರಿಗಣಿಸುವ ಹಕ್ಕನ್ನು ಎಕ್ಸಿಸ್ ಬ್ಯಾಂಕ್ ಹೊಂದಿರುತ್ತದೆ.

5.6. ಮೊಬೈಲ್ ಡಿವೈಸ್‌ಗಳು ಕಳೆದುಹೋದರೆ, ಕಳ್ಳತನ ಆದರೆ, ತಪ್ಪಾದ ಸ್ಥಳದಲ್ಲಿ ಇರಿಸಲ್ಪಟ್ಟರೆ ಅಥವಾ ಹಾನಿಗೊಳಗಾದರೆ, ಇದರಿಂದ 2ಎಫ್‌ಎ ದುರ್ಬಳಕೆ ಆಗುವ ಸಾಧ್ಯತೆ ಇರುವ ಕಾರಣ ಬಳಕೆದಾರರ ಇಂಟರ್‌ನೆಟ್ ಬ್ಯಾಂಕಿಂಗ್ ಬಳಕೆ ನಿರ್ಬಂಧಿಸಲು ಮತ್ತು ದುರುಪಯೋಗ ತಡೆಗಟ್ಟಲು ತಕ್ಷಣವೇ ಅದರ ಬಗ್ಗೆ ಎಕ್ಸಿಸ್ ಬ್ಯಾಂಕ್‌ಗೆ ವರದಿ ಮಾಡಬೇಕು.

5.7. ಕಾಲಕಾಲಕ್ಕೆ ಉದ್ಯಮದಲ್ಲಿ ಲಭ್ಯವಿರುವ ಸೂಕ್ತ ಭದ್ರತಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಎಕ್ಸಿಸ್ ಬ್ಯಾಂಕ್ ಪ್ರಯತ್ನಿಸುತ್ತದೆ. ಆದರೂ, ಇಂಟರ್‌ನೆಟ್ ಸೇರಿದಂತೆ ಬಳಸಲಾಗುವ ತಂತ್ರಜ್ಞಾನ ಹಾಗೂ ಪಬ್ಲಿಕ್ / ಶೇರ್ ಮಾಡಿರುವ ಸೌಲಭ್ಯಗಳ ಬಳಕೆಯು ದುರುಪಯೋಗ, ಹ್ಯಾಕಿಂಗ್, ವೈರಸ್, ದುರುದ್ದೇಶಪೂರಿತ, ವಿನಾಶಕಾರಿ ಅಥವಾ ಭ್ರಷ್ಟಗೊಳಿಸುವ ಕೋಡ್, ಪ್ರೋಗ್ರಾಂ ಅಥವಾ ಮ್ಯಾಕ್ರೋ ರೀತಿಯ ಹಲವಾರು ಅಪಾಯಗಳಿಗೆ ತುತ್ತಾಗಬಹುದು ಮತ್ತು ಇವು ಸೇವೆಗಳ ಮೇಲೆ ಪರಿಣಾಮ ಬೀರಬಹುದು ಎಂದು ಗ್ರಾಹಕರು ಈ ಮೂಲಕ ಒಪ್ಪಿಕೊಳ್ಳುತ್ತಾರೆ. ಅಂತಹ ಅಪಾಯಗಳ ಕಾರಣದಿಂದಾಗಿ ಸೂಚನೆಗಳ ಪ್ರಕ್ರಿಯೆ, ವರದಿ ಮತ್ತು/ಅಥವಾ ರಶೀದಿ ಜನರೇಶನ್‌ನಲ್ಲಿ ಯಾವುದೇ ನಷ್ಟ, ವಿಳಂಬಗಳು ಅಥವಾ ವೈಫಲ್ಯ ಆದಲ್ಲಿ ಅದಕ್ಕೆ ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ.

5.8. ಎಕ್ಸಿಸ್ ಬ್ಯಾಂಕ್‌ನ ಭದ್ರತಾ ನೀತಿಯ ಪ್ರಕಾರ ಗ್ರಾಹಕರು ಪ್ರತಿ 90 ದಿನಗಳ ನಂತರ ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್ ಪ್ಲಾಟ್‌ಫಾರ್ಮ್‌ನಲ್ಲಿ ಅದರ ಪಾಸ್‌ವರ್ಡ್ ಅಪ್‌ಡೇಟ್ ಮಾಡಬೇಕು. ಇದಕ್ಕಾಗಿ, ಲಾಗಿನ್ ಸಮಯದಲ್ಲಿ 85ನೇ ದಿನದಿಂದ 90ನೇ ದಿನದವರೆಗೆ ತಮ್ಮ ಲಾಗಿನ್ ಪಾಸ್‌ವರ್ಡ್ ಬದಲಾಯಿಸಲು ಬಳಕೆದಾರರಿಗೆ ಸೂಚನೆ (ಮುಂಚಿತ-ಸೂಚನೆ) ನೀಡಲಾಗುತ್ತದೆ.

- 91ನೇ ಮತ್ತು 180ನೇ ದಿನದ ನಡುವೆ ಲಾಗಿನ್ ಮುಂದುವರೆಸಲು ಬಳಕೆದಾರರು ಕಡ್ಡಾಯವಾಗಿ ಪಾಸ್‌ವರ್ಡ್ ರಿಸೆಟ್ ಮಾಡಬೇಕು.
- ಒಂದು ವೇಳೆ ಬಳಕೆದಾರರು 180 ದಿನಗಳವರೆಗೆ ಪಾಸ್‌ವರ್ಡ್ ಬದಲಾಯಿಸದಿದ್ದರೆ, ತಾತ್ಕಾಲಿಕವಾಗಿ ಲಾಗಿನ್ ಅಕ್ಸೆಸ್ ಡಿಆ್ಯಕ್ಟಿವೇಟ್ ಮಾಡಲಾಗುತ್ತದೆ. ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳನ್ನು ರಿಆ್ಯಕ್ಟಿವೇಟ್ ಮಾಡಲು ಗ್ರಾಹಕರು ಆರ್‌ಎಂ/ಶಾಖೆಯನ್ನು ಸಂಪರ್ಕಿಸಬೇಕು.

## 6. ಸೂಚನೆಗಳು

6.1. ಎಕ್ಸಿಸ್ ಬ್ಯಾಂಕ್‌ನಿಂದ ಗ್ರಾಹಕರು ಪಡೆದ ಎಲ್ಲಾ ಸೂಚನೆಗಳನ್ನು ಕೆಲಸದ ದಿನಗಳಲ್ಲಿ ಬ್ಯಾಂಕಿಂಗ್ ಗಂಟೆಗಳಲ್ಲಿ ಮಾತ್ರ ಪ್ರಕ್ರಿಯೆಗೊಳಿಸಲಾಗುತ್ತದೆ. ಈ ನಿಯಮ ಮತ್ತು ಷರತ್ತುಗಳಲ್ಲಿ ನಮೂದಿಸಿದ ರೀತಿಯಲ್ಲಿ ಹಾಗೂ ಇಲ್ಲಿ ಸೂಚಿಸಲಾದ ಭದ್ರತಾ ಪ್ರಕ್ರಿಯೆ ಬಳಸುವ ಮೂಲಕ ಎಕ್ಸಿಸ್ ಬ್ಯಾಂಕ್‌ಗೆ ಕಳುಹಿಸಿದ ಸೂಚನೆಯನ್ನು ಮಾತ್ರವೇ ಎಕ್ಸಿಸ್

ಬ್ಯಾಂಕ್ ಅಂಗೀಕರಿಸುತ್ತದೆ. ಎಕ್ಸಿಸ್ ಬ್ಯಾಂಕ್, ತನ್ನ ಸಂಪೂರ್ಣ ವಿವೇಚನೆಯಿಂದ ಆದರೆ ಯಾವುದೇ ಜವಾಬ್ದಾರಿಗೆ ಬದ್ಧವಾಗದೇ, ಸೂಚನೆಯ ದೃಢೀಕರಣದ ಬಗ್ಗೆ ಹೆಚ್ಚಿನ ಪರಿಶೀಲನೆಗಳನ್ನು ಮಾಡಬಹುದು.

6.2. ಎಕ್ಸಿಸ್ ಬ್ಯಾಂಕ್‌ಗೆ ನೀಡಲಾದ ಸೂಚನೆಗಳ ನಿಖರತೆ ಮತ್ತು ವಿಶ್ವಾಸಾರ್ಹತೆಗೆ ಗ್ರಾಹಕರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ ಹಾಗೂ ಗ್ರಾಹಕರಿಂದ ಅಧಿಕೃತಗೊಂಡ ಯಾವುದೇ ಬಳಕೆದಾರರು ನೀಡುವ ಎಲ್ಲಾ ಸೂಚನೆಗಳಿಗೆ ಮತ್ತು/ಅಥವಾ ನಡೆಸುವ ಟ್ರಾನ್ಸಾಕ್ಷನ್‌ಗಳಿಗೆ ಗ್ರಾಹಕರೇ ಬದ್ಧರಾಗಿರುತ್ತಾರೆ. ಗ್ರಾಹಕರು ನೀಡಿದ ಎಲ್ಲಾ ಸೂಚನೆಗಳನ್ನು ಅವಲಂಬಿಸಲು ಮತ್ತು ಅಂತಹ ಸೂಚನೆಗಳ ಮೇಲೆ ಕಾರ್ಯನಿರ್ವಹಿಸಲು ಎಕ್ಸಿಸ್ ಬ್ಯಾಂಕ್ ಹಕ್ಕು ಹೊಂದಿರುತ್ತದೆ. ಯಾವುದೇ ಮಾಹಿತಿ ಮತ್ತು/ಅಥವಾ ಸೂಚನೆಯಲ್ಲಿ ಯಾವುದೇ ತಪ್ಪು ಇದ್ದರೆ, ತಪ್ಪಾದ ವರ್ಗಾವಣೆಗಳು ಉಂಟಾಗಬಹುದು ಎಂದು ಗ್ರಾಹಕರು ಒಪ್ಪುತ್ತಾರೆ ಮತ್ತು ಅಂಗೀಕರಿಸುತ್ತಾರೆ. ಅಂತಹ ಎಲ್ಲಾ ಸೂಚನೆಗಳು ಅಂತಿಮವಾಗಿರುತ್ತವೆ ಮತ್ತು ಗ್ರಾಹಕರ ಮೇಲೆ ಬದ್ಧವಾಗಿರುತ್ತವೆ. ಎಕ್ಸಿಸ್ ಬ್ಯಾಂಕ್‌ಗೆ ನೀಡಲಾದ ನೈಜ ಸೂಚನೆಗಳ ಬಗ್ಗೆ ಯಾವುದೇ ವಿವಾದ ಉಂಟಾದಲ್ಲಿ, ಎಕ್ಸಿಸ್ ಬ್ಯಾಂಕ್‌ನ ದಾಖಲೆಗಳೇ ಅಂತಿಮ ಮತ್ತು ಗ್ರಾಹಕರಿಗೆ ಬದ್ಧವಾಗಿರುತ್ತವೆ.

6.3. ಗ್ರಾಹಕರು ಮುಂದಿನ ಸೂಚನೆಗಳ ಮೂಲಕ ಅದನ್ನು ರದ್ದುಗೊಳಿಸುವವರೆಗೆ ಅಥವಾ ಎಕ್ಸಿಸ್ ಬ್ಯಾಂಕ್ ಅದನ್ನು ಕಾರ್ಯಗತಗೊಳಿಸುವವರೆಗೆ ಈ ಸೂಚನೆಯು ಜಾರಿಯಲ್ಲಿರುತ್ತದೆ. ಯಾವುದೇ ಸಂವಹನದಲ್ಲಿ ಎಕ್ಸಿಸ್ ಬ್ಯಾಂಕ್‌ಗೆ ಒದಗಿಸಲಾದ ಮಾಹಿತಿಯಲ್ಲಿ ಗ್ರಾಹಕರು ಒಂದು ವೇಳೆ ದೋಷ ಗಮನಿಸಿದಲ್ಲಿ, ಅವರು ತಕ್ಷಣವೇ ಎಕ್ಸಿಸ್ ಬ್ಯಾಂಕ್‌ಗೆ ತಿಳಿಸಬೇಕು ಮತ್ತು ಸಾಧ್ಯವಿರುವಲ್ಲೆಲ್ಲಾ 'ಸಮಂಜಸ ಪ್ರಯತ್ನಗಳ' ಆಧಾರದ ಮೇಲೆ ಆ ದೋಷ ಸರಿಪಡಿಸಲು ಎಕ್ಸಿಸ್ ಬ್ಯಾಂಕ್ ಪ್ರಯತ್ನಿಸುತ್ತದೆ. ಯಾವುದೇ ವ್ಯಕ್ತಿಯ ತಪ್ಪಿನಿಂದಾಗಿ ಗ್ರಾಹಕರ ಖಾತೆಗೆ ತಪ್ಪಾದ ಕ್ರೆಡಿಟ್ ಆದ ಸಂದರ್ಭದಲ್ಲಿ, ಯಾವುದೇ ಸಮಯದಲ್ಲಿ ಅಂತಹ ತಪ್ಪಾದ ಕ್ರೆಡಿಟ್ ಹಿಂಪಡೆಯಲು ಗ್ರಾಹಕರು ಎಕ್ಸಿಸ್ ಬ್ಯಾಂಕ್‌ಗೆ ಅಧಿಕಾರ ನೀಡುತ್ತಾರೆ. ಇದರ ಪರಿಣಾಮವಾಗಿ ಪಡೆದ ಯಾವುದೇ ನ್ಯಾಯವಲ್ಲದ ಅಥವಾ ಅನೀತಿಯ ಲಾಭಕ್ಕೆ ಗ್ರಾಹಕರು ಹೊಣೆಗಾರರಾಗಿರುತ್ತಾರೆ ಮತ್ತು ಸದಾ ಅದಕ್ಕೆ ಜವಾಬ್ದಾರರಾಗಿರುತ್ತಾರೆ

6.4. ಎಕ್ಸಿಸ್ ಬ್ಯಾಂಕ್‌ನ ಅಭಿಪ್ರಾಯದ ಪ್ರಕಾರ (i) ತನ್ನ ಸೂಚನೆಯನ್ನು ಗ್ರಾಹಕರು ಸರಿಯಾಗಿ ಅಧಿಕೃತ ಮಾಡದೇ ಇದ್ದರೆ; ಅಥವಾ (ii) ಸಂಘರ್ಷಾತ್ಮಕ, ಅಸಮಂಜಸ, ಅಸ್ಪಷ್ಟ, ಅಪೂರ್ಣ, ದೋಷಪೂರಿತ ಅಥವಾ ಯಾವುದೇ ಕಾನೂನು ಅಥವಾ ನೀತಿಗೆ ವಿರುದ್ಧವಾಗಿದ್ದರೆ, ಅಥವಾ (iii) ಸದರಿ ಸೂಚನೆಯು ಕಾನೂನುಬಾಹಿರ ಟ್ರಾನ್ಸಾಕ್ಷನ್ ನಡೆಸಲು ನೀಡಲಾಗಿದೆ ಎಂದು ನಂಬಲು ಎಕ್ಸಿಸ್ ಬ್ಯಾಂಕ್ ಬಳಿ ಸಮರ್ಥ ಕಾರಣಗಳಿದ್ದರೆ; ಅಥವಾ (iv) ಯಾವುದೇ ವಿಶೇಷ ಸಂದರ್ಭಗಳ ನೋಟಿಸ್‌ನೊಂದಿಗೆ ಸೂಚನೆಯು ಲಗತ್ತಿಸಲ್ಪಟ್ಟಿದ್ದರೆ, (v) ಖಾತೆಯಲ್ಲಿ ಅಸಮರ್ಪಕ ಹಣವಿದ್ದರೆ ಅಥವಾ ಸ್ಪಷ್ಟವಾದ ಹಣದ ಲಭ್ಯತೆ ಇಲ್ಲದಿದ್ದರೆ; ಎಕ್ಸಿಸ್ ಬ್ಯಾಂಕ್, (ಹಾಗೆ ಮಾಡಲು ಬದ್ಧವಾಗಿರದೆ) ಅಂತಹ ಯಾವುದೇ ಸೂಚನೆ ಅಥವಾ ಕ್ರಿಯೆಯ ಮೇಲೆ ಕಾರ್ಯನಿರ್ವಹಿಸುವ ಮುಂಚೆ ಗ್ರಾಹಕರಿಂದ ಸ್ಪಷ್ಟೀಕರಣ ಪಡೆಯಬಹುದು ಅಥವಾ ಸೂಕ್ತವೆಂದು ಭಾವಿಸುವ ರೀತಿಯಲ್ಲಿ ಅಂತಹ

ಯಾವುದೇ ಸೂಚನೆಯ ಮೇಲೆ ಕಾರ್ಯನಿರ್ವಹಿಸಲು ನಿರಾಕರಿಸಬಹುದು. ಮೇಲಿನ ಸಂದರ್ಭಗಳಲ್ಲಿ, ಯಾವುದೇ ಸೂಚನೆಗಳನ್ನು ಕಾರ್ಯಗತಗೊಳಿಸುವುದರಿಂದ ಅಥವಾ ಕಾರ್ಯಗತಗೊಳಿಸಲು ನಿರಾಕರಿಸುವುದರಿಂದ, ಅಥವಾ ಸೂಚನೆಗಳನ್ನು ಜಾರಿಗೆ ತರುವಲ್ಲಿ ಉಂಟಾಗುವ ಯಾವುದೇ ವಿಳಂಬದಿಂದ ಗ್ರಾಹಕರಿಗೆ ಅಥವಾ ಯಾವುದೇ ಥರ್ಡ್ ಪಾರ್ಟಿಗೆ ಉಂಟಾಗುವ ಯಾವುದೇ ನಷ್ಟಕ್ಕೆ ಎಕ್ಸಿಸ್ ಬ್ಯಾಂಕ್ ಜವಾಬ್ದಾರವಲ್ಲ ಅಥವಾ ಹೊಣೆಯಲ್ಲ.

6.5. ಯಾವುದೇ ಕಾರಣಗಳಿಂದಾಗಿ ಅಥವಾ ಎಕ್ಸಿಸ್ ಬ್ಯಾಂಕ್‌ನ ನಿಯಂತ್ರಣ ಮೀರಿ ಉಂಟಾಗುವ ಸಂದರ್ಭಗಳಿಂದಾಗಿ, ಅಥವಾ ಕಾನೂನಿನ ಅಗತ್ಯತೆಗಳಿಂದಾಗಿ ಅಥವಾ ಯಾವುದೇ ಥರ್ಡ್ ಪಾರ್ಟಿ, ಮಾರಾಟಗಾರರು ಮತ್ತು/ಅಥವಾ ಪಾಲುದಾರರ ಯಾವುದೇ ಲೋಪದೋಷಗಳಿಂದಾಗಿ ಸೂಚನೆಗಳನ್ನು ಕಾರ್ಯಗತಗೊಳಿಸುವಲ್ಲಿ ವಿಳಂಬ ಉಂಟಾದಲ್ಲಿ, ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ.

6.6. ಯಾವುದೇ ಸೂಚನೆಯನ್ನು ಜಾರಿಗೆ ತರಲು ಅಗತ್ಯ ದಾಖಲೆಗಳ ಅವಶ್ಯಕತೆಯಿದ್ದಲ್ಲಿ, ಅಂತಹ ದಾಖಲೆಗಳು ಲಭ್ಯವಾಗುವವರೆಗೆ ಎಕ್ಸಿಸ್ ಬ್ಯಾಂಕ್ ಆ ಸೂಚನೆಯ ಮೇಲೆ ಕ್ರಮ ಕೈಗೊಳ್ಳುವ ಅಗತ್ಯವಿರುವುದಿಲ್ಲ.

6.7. ನಿಧಿಯ ಕೊರತೆಯಿಂದಾಗಿ ಮತ್ತು/ಅಥವಾ ಯಾವುದೇ ಸರ್ಕಾರಿ ಸಂಸ್ಥೆ ಅಥವಾ ಶಾಸನಬದ್ಧ ಪ್ರಾಧಿಕಾರದಿಂದ ಸ್ವೀಕರಿಸಿದ ಯಾವುದೇ ಆದೇಶ, ಮಾರ್ಗಸೂಚಿ ಅಥವಾ ನಿರ್ದೇಶನದಿಂದಾಗಿ ಸೂಚನೆಗಳನ್ನು ಕಾರ್ಯಗತಗೊಳಿಸಲು ವಿಫಲವಾದರೆ, ಅದರಿಂದ ಉಂಟಾಗುವ ಯಾವುದೇ ಪರಿಣಾಮಗಳಿಗೆ ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ.

6.8. ಗ್ರಾಹಕರು ನೀಡಿದ ಸೂಚನೆಗಳ ಪ್ರಕಾರ, ಎಕ್ಸಿಸ್ ಬ್ಯಾಂಕ್‌ನ ಕಾರ್ಪೊರೇಟ್ ಇಂಟರ್‌ನೆಟ್ ಬ್ಯಾಂಕಿಂಗ್ ಮಾಧ್ಯಮದಲ್ಲಿ ಟ್ರಾನ್ಸಾಕ್ಷನ್ ಪ್ರಕ್ರಿಯೆಯ ನಿಯಮಗಳು ಮತ್ತು ಮಿತಿಗಳನ್ನು ರೂಪಿಸಲಾಗುವುದು. ಇಂಟರ್‌ನೆಟ್ ಬ್ಯಾಂಕಿಂಗ್‌ನಲ್ಲಿ ಟ್ರಾನ್ಸಾಕ್ಷನ್ ಪ್ರಾರಂಭಿಸುವ ಮತ್ತು ಅನುಮೋದಿಸುವ ಜವಾಬ್ದಾರಿಯು ಗ್ರಾಹಕರದ್ದಾಗಿರುತ್ತದೆ ಹಾಗೂ ಬಳಕೆದಾರರು ಸೌಲಭ್ಯವನ್ನು ದುರುಪಯೋಗ ಮಾಡಿದರೆ/ಅನಧಿಕೃತವಾಗಿ ಬಳಸಿದರೆ ಅಥವಾ ಆಕ್ಸೆಸ್ ವಿವರಗಳನ್ನು ಇತರರಿಗೆ ಕೊಟ್ಟರೆ ಸಂಭವಿಸಬಹುದಾದ ಯಾವುದೇ ಅನಿರೀಕ್ಷಿತ ಪರಿಣಾಮಗಳಿಗೆ ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ.

6.9. ಗ್ರಾಹಕರು ಮಾಡುವ ಯಾವುದೇ ವಿದೇಶಿ ವಿನಿಮಯ ಟ್ರಾನ್ಸಾಕ್ಷನ್‌ಗೆ ಸಂಬಂಧಿಸಿದ ಸೂಚನೆಗಳ ಸಂದರ್ಭದಲ್ಲಿ, ಎಕ್ಸಿಸ್ ಬ್ಯಾಂಕ್ ನೀಡಿರುವ ವಿನಿಮಯ ದರಗಳು (ಅದು ತನ್ನ ವೆಬ್‌ಸೈಟ್ ಮೂಲಕ ಅಥವಾ ಬೇರೆ ಯಾವುದೇ ರೀತಿಯಲ್ಲಿ ನೀಡಿದ್ದರೂ ಸಹ), ತಾತ್ಕಾಲಿಕ ಮಾತ್ರ ಮತ್ತು ಈ ವಿನಿಮಯ ದರಗಳು ಬದಲಾವಣೆಗಳಿಗೆ ಒಳಪಟ್ಟಿರುತ್ತವೆ. ಟ್ರಾನ್ಸಾಕ್ಷನ್ ಜಾರಿಗೆ ಬರುವ ದರವೇ ಎಲ್ಲಾ ಉದ್ದೇಶಗಳಿಗಾಗಿ ಪರಿಣಾಮಕಾರಿ ದರ ಆಗಿರುತ್ತದೆ. ಗ್ರಾಹಕರು ನೀಡುವ ಯಾವುದೇ ಸೂಚನೆಗಳು ಚಾಲ್ತಿಯಲ್ಲಿರುವ ಕಾನೂನುಗಳ ನಿಬಂಧನೆಗಳನ್ನು ಉಲ್ಲಂಘಿಸುವಂತೆ ಇರಬಾರದು ಹಾಗೂ ಇದರಲ್ಲಿ ನಿಯಮಾವಳಿಗಳು, ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಎಫ್‌ಇಎಂಎ), 1999 ಅಡಿಯಲ್ಲಿ ರೂಪಿಸಲಾದ ವಿವಿಧ ನಿಯಮಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಅಥವಾ ಇತರ ಯಾವುದೇ ಸರ್ಕಾರಿ ಸಂಸ್ಥೆ ಅಥವಾ ಶಾಸನಬದ್ಧ ಪ್ರಾಧಿಕಾರವು ವಿಧಿಸಿರುವ ಇತರ ನಿಯಮಗಳು ಮತ್ತು ನಿಬಂಧನೆಗಳು

ಸೇರಿರುತ್ತವೆ (ಆದರೆ ಇವುಗಳಿಗಷ್ಟೇ ಸೀಮಿತವಾಗಿಲ್ಲ).

## 7. ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳಿಗಾಗಿ ಎಕ್ಸಿಸ್ ಬ್ಯಾಂಕ್‌ಗೆ ಅಧಿಕಾರ

7.1. ಸೂಚನೆಗಳನ್ನು ನೀಡುವ ಮೂಲಕ ಗ್ರಾಹಕರು ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳ ಮೂಲಕ ಮಾಡಿದ ಬ್ಯಾಂಕಿಂಗ್ ಅಥವಾ ಇತರ ಟ್ರಾನ್ಸಾಕ್ಷನ್‌ಗಳ ಮೇಲೆ ಪರಿಣಾಮ ಬೀರಲು ಸೇವೆಗಳಿಗಾಗಿ ನೋಂದಾಯಿಸಲಾದ ಎಲ್ಲಾ ಖಾತೆಗಳನ್ನು ಅಕ್ಸೆಸ್ ಮಾಡಲು ಗ್ರಾಹಕರು ಎಕ್ಸಿಸ್ ಬ್ಯಾಂಕ್‌ಗೆ ಬದಲಾಯಿಸಲಾಗದ ಮತ್ತು ಬೇಷರತ್ ಅಧಿಕಾರ ನೀಡುತ್ತಾರೆ.

## 8. ಟ್ರಾನ್ಸಾಕ್ಷನ್ ಮಿತಿಗಳು

8.1. ಎಕ್ಸಿಸ್ ಬ್ಯಾಂಕ್, ಕಾಲಕಾಲಕ್ಕೆ, ಅದರ ವಿವಿಧ ಸೇವೆಗಳಿಗೆ ಗರಿಷ್ಠ ಮತ್ತು ಕನಿಷ್ಠ ಟ್ರಾನ್ಸಾಕ್ಷನ್ ಮಿತಿಗಳನ್ನು ನಿರ್ದಿಷ್ಟಪಡಿಸಬಹುದು. ಗ್ರಾಹಕರು ಎಕ್ಸಿಸ್ ಬ್ಯಾಂಕ್ ವಿಧಿಸಿದ ಅಂತಹ ಮಿತಿಗಳನ್ನು ಅನುಸರಿಸಲು ಬದ್ಧರಾಗಿರುತ್ತಾರೆ.

## 9. ಮಾಹಿತಿಯಲ್ಲಿ ಬದಲಾವಣೆಗಳು

9.1. ಗ್ರಾಹಕರು ಒದಗಿಸಿದ ಮಾಹಿತಿ ಅಥವಾ ಡಾಕ್ಯುಮೆಂಟ್‌ಗಳಲ್ಲಿನ ಯಾವುದೇ ಬದಲಾವಣೆಗಳನ್ನು ಗ್ರಾಹಕರು ಸೂಚಿಸುವ ಪರಿಹಾರಗಳ ಸಮೇತ ಎಕ್ಸಿಸ್ ಬ್ಯಾಂಕ್ ನಿಗದಿಪಡಿಸಿದ ರೀತಿಯಲ್ಲಿ ಬದಲಾವಣೆಯ ದಿನಾಂಕದಿಂದ 30 ದಿನಗಳ ಒಳಗೆ ಎಕ್ಸಿಸ್ ಬ್ಯಾಂಕ್‌ಗೆ ತಿಳಿಸಬೇಕು. ಗ್ರಾಹಕರು ಕಾಲಕಾಲಕ್ಕೆ ಎಕ್ಸಿಸ್ ಬ್ಯಾಂಕ್‌ಗೆ ಈ ಕುರಿತು ಪತ್ರ ನೀಡುವ ಮೂಲಕ ಮತ್ತು ಅದರೊಂದಿಗೆ ಗ್ರಾಹಕ ನಿರ್ಣಯದ ಪ್ರತಿ ಲಗತ್ತಿಸುವ ಮೂಲಕ, ತಮ್ಮ ಬಳಕೆದಾರರ ಪಟ್ಟಿ ಮಾರ್ಪಡಿಸಲು, ಸೇರಿಸಲು ಮತ್ತು/ಅಥವಾ ತೆಗೆದುಹಾಕಲು ಹಕ್ಕು ಹೊಂದಿರುತ್ತಾರೆ. ಅಂತಹ ಯಾವುದೇ ಬದಲಾವಣೆಗಳು ಎಕ್ಸಿಸ್ ಬ್ಯಾಂಕ್‌ನಿಂದ ಗ್ರಾಹಕರಿಗೆ ಆ ಬದಲಾವಣೆಗಳ ಜಾರಿಯ ಬಗ್ಗೆ ಮಾಹಿತಿ ನೀಡಿದ ನಂತರವಷ್ಟೇ ಜಾರಿಗೆ ಬರುತ್ತವೆ ಹಾಗೂ ಅಲ್ಲಿಯವರೆಗೆ ಎಕ್ಸಿಸ್ ಬ್ಯಾಂಕ್‌ನಲ್ಲಿ ಲಭ್ಯವಿರುವ ಅಂದಿನ ಬಳಕೆದಾರರ ಪಟ್ಟಿಯಲ್ಲಿ ಹೆಸರಿಸಲಾದ ಗ್ರಾಹಕರ ಯಾವುದೇ ಪ್ರತಿನಿಧಿಗಳಿಂದ ಸ್ವೀಕರಿಸಲ್ಪಟ್ಟ ಸೂಚನೆಗಳನ್ನು ಎಕ್ಸಿಸ್ ಬ್ಯಾಂಕ್ ಸ್ವೀಕರಿಸುವುದನ್ನು ಮತ್ತು ನಿರ್ವಹಿಸುವುದನ್ನು ಮುಂದುವರಿಸುತ್ತದೆ.

## 10. ಗೌಪ್ಯತೆ ಮತ್ತು ಪ್ರಕಟಣೆ

10.1. ಗ್ರಾಹಕರು ತಮ್ಮ ಗೌಪ್ಯ ಮಾಹಿತಿ ಬಳಸಲು ಈ ಮೂಲಕ ಎಕ್ಸಿಸ್ ಬ್ಯಾಂಕ್‌ಗೆ ಅಧಿಕಾರ ನೀಡುತ್ತಾರೆ ಹಾಗೂ ಗ್ರಾಹಕರಿಗೆ ಸೇವೆಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಗೌಪ್ಯ ಬಳಕೆಯ ಉದ್ದೇಶಕ್ಕಾಗಿ, ಎಕ್ಸಿಸ್ ಬ್ಯಾಂಕ್ ತನ್ನ ಯಾವುದೇ ಶಾಖೆಗಳು, ಅಂಗಸಂಸ್ಥೆಗಳು, ಪ್ರತಿನಿಧಿ ಕಚೇರಿಗಳು, ಸಂಯೋಜಿತ ಸಂಸ್ಥೆಗಳು, ಆಡಿಟರ್‌ಗಳು, ಮಾರಾಟಗಾರರು, ಪಾಲುದಾರರು ಮತ್ತು ಏಜೆಂಟ್‌ಗಳ ನಡುವೆ ಹಾಗೂ ಅವರಿಗೆ (ಅವರು ಎಲ್ಲೇ ನೆಲೆಸಿದ್ದರೂ) ಗ್ರಾಹಕರ ಕುರಿತಾದ ಯಾವುದೇ ಮಾಹಿತಿ ವರ್ಗಾವಣೆ ಮಾಡಲು ಅನುಮತಿ ನೀಡುತ್ತಾರೆ ಮತ್ತು ಯಾವುದೇ ಕಾನೂನು, ನ್ಯಾಯಾಲಯ, ನಿಯಂತ್ರಕ ಅಥವಾ ಕಾನೂನಾತ್ಮಕ

ಪ್ರಕ್ರಿಯೆಯ ಅಗತ್ಯಕ್ಕೆ ಅನುಗುಣವಾಗಿ ಅಂತಹ ಮಾಹಿತಿ ವರ್ಗಾವಣೆ ಮಾಡಲು ಆಯಾ ಶಾಖೆ, ಅಂಗಸಂಸ್ಥೆ, ಪ್ರತಿನಿಧಿ ಕಚೇರಿ, ಸಂಯೋಜಿತ ಸಂಸ್ಥೆ, ಮಾರಾಟಗಾರರು, ಪಾಲುದಾರರು ಅಥವಾ ಏಜೆಂಟ್ ಅರ್ಹರಾಗಿರುತ್ತಾರೆ ಎಂಬುದನ್ನು ಗ್ರಾಹಕರು ಈ ಮೂಲಕ ಒಪ್ಪಿಕೊಳ್ಳುತ್ತಾರೆ.

**11. ವಾರಂಟಿಗಳ ಹಕ್ಕು ನಿರಾಕರಣೆ**

11.1. ಇಲ್ಲಿ ಮತ್ತು ನಿಯಮ ಮತ್ತು ಷರತ್ತುಗಳಲ್ಲಿ ಖಾತರಿಪಡಿಸಿದಂತೆ ಹೊರತುಪಡಿಸಿ, ಎಕ್ಸಿಸ್ ಬ್ಯಾಂಕ್ ಇಲ್ಲಿ ಒದಗಿಸಲಾದ ಸೇವೆಗಳಿಗೆ ಸಂಬಂಧಿಸಿದಂತೆ ಯಾವುದೇ ಇತರ ಪ್ರತ್ಯಕ್ಷ ಅಥವಾ ಪರೋಕ್ಷ ವಾರಂಟಿ ನೀಡುವುದಿಲ್ಲ, ಮತ್ತು ಸಿಐಬಿ ವ್ಯವಸ್ಥೆಗಳು/ಸೇವೆಗಳ ತಡೆರಹಿತ, ದೋಷ-ಮುಕ್ತ, ಸಮಯೋಚಿತ ಅಥವಾ ಸುರಕ್ಷಿತ ಕಾರ್ಯಕ್ಷಮತೆ, ಶೀರ್ಷಿಕೆ, ತೃಪ್ತಿದಾಯಕ ಗುಣಮಟ್ಟ, ವ್ಯಾಪಾರ, ನಿರ್ದಿಷ್ಟ ಉದ್ದೇಶಕ್ಕಾಗಿ ಹೊಂದಿಕೆ, ಡೇಟಾ ನಿಖರತೆ ಮತ್ತು ಪರಿಪೂರ್ಣತೆ ಮತ್ತು ಇಂಟರ್ನೆಟ್ ಬ್ಯಾಂಕಿಂಗ್‌ನಲ್ಲಿ ಉಲ್ಲಂಘನೆಯಾಗದಿರಲು ಸಂಬಂಧಿಸಿದ ಯಾವುದೇ ವಾರಂಟಿಗಳು ಅಥವಾ ಎಕ್ಸಿಸ್ ಬ್ಯಾಂಕ್‌ನಿಂದ ಗ್ರಾಹಕರಿಗೆ ಯಾವುದೇ ಮಾಹಿತಿಯ ಪ್ರಸಾರಕ್ಕೆ ಸಂಬಂಧಿಸಿದ ಯಾವುದೇ ವಾರಂಟಿಗಳನ್ನು ಈ ಮೂಲಕ ಸ್ಪಷ್ಟವಾಗಿ ನಿರಾಕರಿಸುತ್ತದೆ.

**12. ಸರಿಹೊಂದಿಸುವ ಹಕ್ಕು**

12.1. ಸೌಲಭ್ಯದ ಪರಿಣಾಮವಾಗಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ಯಾವುದೇ ಬಾಕಿ ಮೊತ್ತದ ವ್ಯಾಪ್ತಿಯವರೆಗೆ, ಎಕ್ಸಿಸ್ ಬ್ಯಾಂಕ್‌ನಲ್ಲಿರುವ ಗ್ರಾಹಕರ ಡೆಪಾಸಿಟ್‌ಗಳು, ಫಂಡ್‌ಗಳು ಅಥವಾ ಇತರ ಆಸ್ತಿಗಳ ಮೇಲೆ (ಅವು ವೈಯಕ್ತಿಕ ಹೆಸರಿನಲ್ಲಿ ಇರಲಿ ಅಥವಾ ಇತರರೊಂದಿಗೆ ಜಂಟಿಯಾಗಿರಲಿ), ಬ್ಯಾಂಕರ್‌ಗಳ ಹೊಣೆಗಾರಿಕೆ ಮತ್ತು ಮೊತ್ತವನ್ನು ಸರಿಹೊಂದಿಸುವ ಹಕ್ಕನ್ನು ಎಕ್ಸಿಸ್ ಬ್ಯಾಂಕ್ ಹೊಂದಿರುತ್ತದೆ.

**13. ನಷ್ಟ ಪರಿಹಾರ**

13.1. ಯಾವುದೇ ಸೇವೆಗಳನ್ನು ಒದಗಿಸಿದ ಪರಿಣಾಮವಾಗಿ ಅಥವಾ ಅದರ ಕಾರಣದಿಂದಾಗಿ ಅಥವಾ ಅದರಿಂದ ಉದ್ಭವಿಸುವ, ಅಥವಾ ಗ್ರಾಹಕರ ಕಡೆಯಿಂದ ಯಾವುದೇ ನಿರ್ಲಕ್ಷ್ಯ/ತಪ್ಪು/ದುರ್ನಡತೆಯಿಂದಾಗಿ ಅಥವಾ ಇಲ್ಲಿ ಸೂಚಿಸಲಾದ ಯಾವುದೇ ನಿಯಮ ಮತ್ತು ಷರತ್ತುಗಳ ಉಲ್ಲಂಘನೆ ಅಥವಾ ಪಾಲಿಸದೇ ಇರುವುದು (ಯಾವುದೇ ಸೇವೆಗಳಿಗೆ ಸಂಬಂಧಿಸಿದ ಅನ್ವಯವಾಗುವ ಶಾಸನ ಮತ್ತು ಶಾಸನಬದ್ಧ ಮಾರ್ಗಸೂಚಿಗಳು ಸೇರಿದಂತೆ), ಅಥವಾ ಗ್ರಾಹಕರು ನೀಡಿದ ಯಾವುದೇ ಸೂಚನೆಯ ಮೇರೆಗೆ ಎಕ್ಸಿಸ್ ಬ್ಯಾಂಕ್ ಸದುದ್ದೇಶದಿಂದ ಕ್ರಮ ಕೈಗೊಂಡ ಅಥವಾ ಕ್ರಮ ಕೈಗೊಳ್ಳಲು ನಿರಾಕರಿಸಿದ ಕಾರಣದಿಂದಾಗಿ, ಎಕ್ಸಿಸ್ ಬ್ಯಾಂಕ್ ಯಾವುದೇ ಸಮಯದಲ್ಲಿ ಅನುಭವಿಸಬಹುದಾದ ಅಥವಾ ಎದುರಿಸಬಹುದಾದ ಎಲ್ಲಾ ಕ್ರಮಗಳು, ಕ್ಲೈಮ್‌ಗಳು, ಬೇಡಿಕೆಗಳು, ನಡಾವಳಿಗಳು, ನಷ್ಟಗಳು, ಹಾನಿಗಳು, ವೆಚ್ಚಗಳು ಮತ್ತು ಶುಲ್ಕಗಳ ವಿರುದ್ಧ ತಾವು ಮಾತ್ರ ಹೊಣೆಗಾರರು

ಆಗಿರುತ್ತೇವೆ ಮತ್ತು ಎಕ್ಸಿಸ್ ಬ್ಯಾಂಕ್, ಅದರ ಅಧಿಕಾರಿಗಳು, ನಿರ್ದೇಶಕರು, ಏಜೆಂಟರು, ಮಾರಾಟಗಾರರು, ಪಾಲುದಾರರು, ಅಂಗಸಂಸ್ಥೆಗಳು, ಉದ್ಯೋಗಿಗಳು ಮತ್ತು ಪ್ರತಿನಿಧಿಗಳಿಗೆ ಯಾವುದೇ ಹಾನಿ ಆಗದಂತೆ ರಕ್ಷಿಸುತ್ತೇವೆ ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ.

13.2. ಗ್ರಾಹಕರ ಯಾವುದೇ ಕೃತ್ಯ ಅಥವಾ ಲೋಪದಿಂದಾಗಿ, ಯಾವುದೇ ಸರ್ಕಾರಿ ಸಂಸ್ಥೆ, ನಿಯಂತ್ರಕ ಪ್ರಾಧಿಕಾರ ಅಥವಾ ಥರ್ಡ್ ಪಾರ್ಟಿಯು ಎಕ್ಸಿಸ್ ಬ್ಯಾಂಕ್ ವಿರುದ್ಧ ಕೈಗೊಳ್ಳುವ ಯಾವುದೇ ಕ್ರಮದ ಪರಿಣಾಮವಾಗಿ ಅಥವಾ ಅದರ ಕಾರಣದಿಂದ ಎಕ್ಸಿಸ್ ಬ್ಯಾಂಕ್ ಯಾವುದೇ ಸಮಯದಲ್ಲಿ ಎದುರಿಸಬಹುದಾದ ಅಥವಾ ಭರಿಸಬಹುದಾದ ಎಲ್ಲಾ ಕ್ರಮಗಳು, ಕ್ಲೈಮ್‌ಗಳು, ಬೇಡಿಕೆಗಳು, ನಷ್ಟಗಳು, ಹಾನಿಗಳು, ವೆಚ್ಚಗಳು ಮತ್ತು ಶುಲ್ಕಗಳ ವಿರುದ್ಧ ಎಕ್ಸಿಸ್ ಬ್ಯಾಂಕ್, ಅದರ ಅಧಿಕಾರಿಗಳು, ನಿರ್ದೇಶಕರು, ಏಜೆಂಟರು, ಮಾರಾಟಗಾರರು, ಪಾಲುದಾರರು, ಅಂಗಸಂಸ್ಥೆಗಳು, ಉದ್ಯೋಗಿಗಳು ಮತ್ತು ಪ್ರತಿನಿಧಿಗಳಿಗೆ ಯಾವುದೇ ಹಾನಿಯಾಗದಂತೆ ರಕ್ಷಿಸಲು ಮತ್ತು ನಷ್ಟ ಪರಿಹಾರ ನೀಡಲು ಗ್ರಾಹಕರು ಈ ಮೂಲಕ ಒಪ್ಪುತ್ತಾರೆ.

**14. ಇಂಟರ್‌ನೆಟ್ ಬ್ಯಾಂಕಿಂಗ್ ದಾಖಲೆಗಳು ಮತ್ತು ಟ್ರಾನ್ಸಾಕ್ಷನ್ ನಿಯಮಗಳು**

14.1. ಗ್ರಾಹಕರ ಹಂತದಲ್ಲಿ ವೆರಿಫಿಕೇಶನ್ ನಡೆಸಲು ಅನುಕೂಲವಾಗುವಂತೆ, ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ಎಕ್ಸಿಸ್ ಬ್ಯಾಂಕ್ ಖಾತೆಗಳ ಸ್ಟೇಟ್‌ಮೆಂಟ್ ನೀಡುತ್ತದೆ. ಟ್ರಾನ್ಸಾಕ್ಷನ್ ನಡೆದ ದಿನಾಂಕದಿಂದ 7 (ಏಳು) ದಿನಗಳ ಒಳಗಾಗಿ, ಗ್ರಾಹಕರು ಸೂಚನೆಯ ಅನುಷ್ಠಾನದಲ್ಲಿ ಕಂಡುಬರುವ ಯಾವುದೇ ವ್ಯತ್ಯಾಸದ ಬಗ್ಗೆ ಎಕ್ಸಿಸ್ ಬ್ಯಾಂಕ್‌ಗೆ ವರದಿ ಮಾಡತಕ್ಕದ್ದು. ಮೇಲೆ ತಿಳಿಸಲಾದ ಅವಧಿಯೊಳಗೆ ಯಾವುದೇ ವ್ಯತ್ಯಾಸವನ್ನು ವರದಿ ಮಾಡಲು ಗ್ರಾಹಕರು ವಿಫಲವಾದರೆ, ಸೂಚನೆಯ ಕಾರ್ಯಗತಗೊಳಿಸುವಿಕೆಯ ಸರಿಯಾದ ಕ್ರಮ ಅಥವಾ ತಮ್ಮ ಖಾತೆಯಿಂದ ಕಡಿತಗೊಳಿಸಲಾದ ಮೊತ್ತದ ಬಗ್ಗೆ ದಾವೆ ಹೂಡುವ ಹಕ್ಕನ್ನು ಹೊಂದಿರುವುದಿಲ್ಲ ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ.

14.2. ಟ್ರಾನ್ಸಾಕ್ಷನ್ ದಾಖಲಾದ ಸಮಯವೂ ಸೇರಿದಂತೆ, ಸೂಚನೆಗಳಿಂದ ಆಗುವ ಟ್ರಾನ್ಸಾಕ್ಷನ್‌ಗಳ ಮೂಲಕ ಜನರೇಟ್ ಆದ ಎಕ್ಸಿಸ್ ಬ್ಯಾಂಕ್‌ನ ಎಲ್ಲಾ ದಾಖಲೆಗಳು ಎಕ್ಸಿಸ್ ಬ್ಯಾಂಕ್ ಸ್ವೀಕರಿಸಿದ ಸೂಚನೆಗಳ ನೈಜತೆ ಮತ್ತು ನಿಖರತೆಗೆ ಹಾಗೂ ಅದರ ಪರಿಣಾಮವಾಗಿ ನಡೆದ ಟ್ರಾನ್ಸಾಕ್ಷನ್‌ಗೆ ನಿರ್ಣಾಯಕ ಪುರಾವೆಯಾಗಿರುತ್ತವೆ.

14.3. ಯಾವುದೇ ಕಾನೂನು ಪ್ರಕ್ರಿಯೆಗಳಲ್ಲಿ ಎಕ್ಸಿಸ್ ಬ್ಯಾಂಕ್‌ನ ದಾಖಲೆಗಳು ಅಸಲಿ ಪ್ರತಿಗಳು ಅಲ್ಲ, ಲಿಖಿತ ರೂಪದಲ್ಲಿ ಇಲ್ಲ ಅಥವಾ ಕಂಪ್ಯೂಟರ್‌ನಿಂದ ಸಿದ್ಧಪಡಿಸಿದ ದಾಖಲೆಗಳು ಎಂಬ ಕಾರಣ ನೀಡಿ, ಅವುಗಳನ್ನು ಸಾಕ್ಷಿಯಾಗಿ ಸ್ವೀಕರಿಸುವುದಕ್ಕೆ ಆಕ್ಷೇಪ ವ್ಯಕ್ತಪಡಿಸುವುದಿಲ್ಲ ಎಂದು ಗ್ರಾಹಕರು ಒಪ್ಪುತ್ತಾರೆ.

14.4. ಯಾವುದೇ ಸಮರ್ಥ ನ್ಯಾಯಾಲಯ ಅಥವಾ ನ್ಯಾಯಾಂಗ ಅಥವಾ ಅರೆ-ನ್ಯಾಯಾಂಗ ಪ್ರಾಧಿಕಾರ ಅಥವಾ ನ್ಯಾಯಮಂಡಳಿ ಅಥವಾ ಯಾವುದೇ ಇತರ ಶಾಸನಬದ್ಧ ಅಥವಾ ಸರ್ಕಾರಿ ಪ್ರಾಧಿಕಾರದ ಮುಂದೆ ಗ್ರಾಹಕರ ವಿರುದ್ಧ ಪುರಾವೆಯಾಗಿ, ಗ್ರಾಹಕರಿಂದ ಪಡೆದ ಎಲ್ಲಾ ಮಾಹಿತಿಯನ್ನು ಬಳಸಲು ಎಕ್ಸಿಸ್ ಬ್ಯಾಂಕ್‌ಗೆ ಅನುಮತಿ ಇದೆ.

14.5. ಟ್ರೇಡ್ ಪೋರ್ಟಲ್ ಸೇವೆಗಳಲ್ಲಿ ಟ್ರಾನ್ಸಾಕ್ಷನ್ ಪ್ರಾರಂಭಿಸಿದ ದಿನಾಂಕದಿಂದ ಎರಡು ಕೆಲಸದ ದಿನಗಳೊಳಗೆ, ಗ್ರಾಹಕರು ಎಲ್ಲಾ ಮೂಲ ಡಾಕ್ಯುಮೆಂಟ್‌ಗಳನ್ನು ಅನ್ವಯವಾಗುವ ಸ್ಟ್ಯಾಂಪಿಂಗ್ (ಎಲ್ಲಿ ಅನ್ವಯ ಆಗುತ್ತದೆಯೋ ಅಲ್ಲಿ) ಸಮೇತ ಸಂಬಂಧಪಟ್ಟ ಎಕ್ಸಿಸ್ ಬ್ಯಾಂಕ್ ಶಾಖೆಗೆ ಸಲ್ಲಿಸಬೇಕು.

**15. ಮುಕ್ತಾಯ**

15.1. ಈ ಷರತ್ತು 15 ಕ್ಕೆ ಒಳಪಟ್ಟು, ಗ್ರಾಹಕರು ನಿಯಮ ಮತ್ತು ಷರತ್ತುಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಅಥವಾ ಬಳಕೆದಾರರ ಮರಣ, ದಿವಾಳಿತನ ಅಥವಾ ಕಾನೂನುಬದ್ಧ ಸಾಮರ್ಥ್ಯದ ಕೊರತೆಯ ಬಗ್ಗೆ ತಿಳಿದುಬಂದ ಸಂದರ್ಭಗಳನ್ನು ಹೊರತುಪಡಿಸಿ, ಎಕ್ಸಿಸ್ ಬ್ಯಾಂಕ್ ಯಾವುದೇ ಸಮಯದಲ್ಲಿ 30 ದಿನಗಳ ಮುನ್ಸೂಚನೆಯೊಂದಿಗೆ ಎಲ್ಲಾ ಅಥವಾ ಯಾವುದೇ ಸೇವೆಗಳನ್ನು ಸ್ಥಗಿತಗೊಳಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.

15.2. ಗ್ರಾಹಕರ ಖಾತೆಗಳ ಕ್ಲೋಸರ್ ಪ್ರಕ್ರಿಯೆಯು ಈ ಸೇವೆಯನ್ನು ಕೊನೆಗೊಳಿಸುತ್ತದೆ.

15.3. ಈ ವಿಷಯದಲ್ಲಿ ಇತರ ಪಾರ್ಟಿಗೆ 30 ದಿನಗಳ ಮುಂಚಿತ ಸೂಚನೆ ನೀಡುವ ಮೂಲಕ ಇಲ್ಲಿ ಒದಗಿಸಲಾದ ಸೇವೆಗಳನ್ನು ರದ್ದುಗೊಳಿಸಲು ಗ್ರಾಹಕರು ಅರ್ಹರಾಗಿರುತ್ತಾರೆ.

15.4. ಸೇವೆಯನ್ನು ಹೀಗೆ ಮುಕ್ತಾಯ ಮಾಡಿದಾಗ ಅಥವಾ ಸ್ಥಗಿತ ಮಾಡಿದಾಗ ಉಂಟಾಗುವ ಯಾವುದೇ ರೀತಿಯ ಹಾನಿಗಳು, ಕ್ಲೈಮ್‌ಗಳು, ನಷ್ಟಗಳು ಅಥವಾ ವೆಚ್ಚಗಳಿಗೆ ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ.

**16. ಅನಿವಾರ್ಯ ಘಟನೆ**

16.1. ಯಾವುದೇ ಅನಿವಾರ್ಯ ಘಟನೆಯಿಂದ ಈ ನಿಯಮಗಳು ಮತ್ತು ಷರತ್ತುಗಳ ಅಡಿಯಲ್ಲಿ ತನ್ನ ಜವಾಬ್ದಾರಿಗಳನ್ನು ನಿರ್ವಹಿಸಲು ಅಡ್ಡಿಯಾದರೆ ಅಥವಾ ವಿಳಂಬವಾದರೆ, ಅಂತಹ ಸಂದರ್ಭದಲ್ಲಿ ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ ಹಾಗೂ ಅಂತಹ ಅನಿವಾರ್ಯ ಘಟನೆಯು ಮುಂದುವರಿಯುವ ತನಕ ಬ್ಯಾಂಕ್‌ನ ಜವಾಬ್ದಾರಿಗಳನ್ನು ಅಮಾನತು ಮಾಡಲಾಗುವುದು (ಆದರೆ, ಪಾವತಿಸಬೇಕಾದ ಅಸಲು ಮೊತ್ತದ ಮೇಲಿನ ಬಡ್ಡಿಯ ಸಂಚಯವನ್ನು ಈ ಷರತ್ತು ತಡೆಯುವುದಿಲ್ಲ). "ಅನಿವಾರ್ಯ ಘಟನೆ" ಎಂದರೆ ಎಕ್ಸಿಸ್ ಬ್ಯಾಂಕ್‌ನ ನಿಯಂತ್ರಣ ಮೀರಿದ ಯಾವುದೇ ಕಾರಣದಿಂದ ಉಂಟಾಗುವ ಘಟನೆಯಾಗಿದ್ದು, ಇದರಲ್ಲಿ ನೆಟ್‌ವರ್ಕ್ ವೈಫಲ್ಯ, ಕಂಪ್ಯೂಟರ್ ಸಿಸ್ಟಮ್‌ಗಳಲ್ಲಿನ ದೋಷಗಳು, ಶೇಖರಣಾ ಸಾಧನಗಳ ತೊಂದರೆ, ನೈಸರ್ಗಿಕ ವಿಕೋಪಗಳು, ಕಾನೂನು ನಿರ್ಬಂಧಗಳು ಅಥವಾ ಇನ್ನಾವುದೇ ಕಾರಣಗಳು ಸೇರಿವೆ, ಆದರೆ ಅಷ್ಟಕ್ಕೇ ಸೀಮಿತವಾಗಿಲ್ಲ.

**17. ಶುಲ್ಕಗಳು**

17.1. ಎಕ್ಸಿಸ್ ಬ್ಯಾಂಕ್ ಕಾಲಕಾಲಕ್ಕೆ ನಿಗದಿಪಡಿಸಬಹುದಾದ ಸೇವಾ ಶುಲ್ಕಗಳನ್ನು (ಇದು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸೇರಿದಂತೆ ಅನ್ವಯವಾಗುವ ಎಲ್ಲಾ ತೆರಿಗೆಗಳನ್ನು

ಹೊರತುಪಡಿಸಿರುತ್ತದೆ ಮತ್ತು ಇವುಗಳನ್ನು ಗ್ರಾಹಕರು/ಖಾತೆದಾರರು ಭರಿಸಬೇಕಾಗುತ್ತದೆ), ಅಥವಾ ಈ ಸೇವೆಗಳನ್ನು ಪಡೆಯಲು ಕಾಲಕಾಲಕ್ಕೆ ಸಮ್ಮತಿಸಲಾದ ಮತ್ತು ಎಕ್ಸಿಸ್ ಬ್ಯಾಂಕ್ ಸೂಕ್ತವೆಂದು ಭಾವಿಸುವ ವೆಬ್‌ಸೈಟ್ ಅಥವಾ ಇತರ ಯಾವುದೇ ಮಾಧ್ಯಮದ ಮೂಲಕ ಗ್ರಾಹಕರಿಗೆ ತಿಳಿಸಲಾದ ದರಗಳು/ಶುಲ್ಕಗಳನ್ನು ಭರಿಸಲು ಗ್ರಾಹಕರು ಒಪ್ಪಿರುತ್ತಾರೆ. ಗ್ರಾಹಕರ ಖಾತೆಗಳಿಂದ ಅಂತಹ ಶುಲ್ಕಗಳನ್ನು ಡೆಬಿಟ್ ಮಾಡಲು ಎಕ್ಸಿಸ್ ಬ್ಯಾಂಕ್ ಅಧಿಕಾರ ಹೊಂದಿದೆ.

17.2. ಬ್ಯಾಂಕ್ ಈ ಮೂಲಕ ಈ ಕೆಳಗಿನಂತೆ ಒಪ್ಪುತ್ತದೆ ಮತ್ತು ಕೈಗೊಳ್ಳುತ್ತದೆ

(i) ಎಕ್ಸಿಸ್ ಬ್ಯಾಂಕ್‌ನಿಂದ ನೀಡಲಾಗುವ ಇನ್‌ವಾಯ್ಸ್ (ಇದ್ದಲ್ಲಿ), ಗ್ರಾಹಕರು ಒದಗಿಸಿರುವ ಜಿಎಸ್‌ಟಿಐಎನ್ ಸಂಖ್ಯೆಯನ್ನು ಹೊಂದಿರತಕ್ಕದ್ದು;

(ii) ಗ್ರಾಹಕರಿಗೆ ಮಾಡಿದ ಪೂರೈಕೆಗಾಗಿ ನಿಗದಿತ ಫಾರ್ಮ್‌ನಲ್ಲಿ ಜಿಎಸ್‌ಟಿಎನ್ ಸಾಮಾನ್ಯ ಪೋರ್ಟಲ್‌ನಲ್ಲಿ ಇನ್ವಾಯ್ಸ್‌ಗಳ ವಿವರಗಳನ್ನು (ಯಾವುದಾದರೂ ಇದ್ದರೆ) ಬ್ಯಾಂಕ್ ಅಪ್‌ಲೋಡ್ ಮಾಡುತ್ತದೆ; ಮತ್ತು

(iii) ಗ್ರಾಹಕರಿಗೆ ನೀಡಲಾದ ಪೂರೈಕೆಯ ಮೇಲೆ ಅನ್ವಯವಾಗುವ ಜಿಎಸ್‌ಟಿಯನ್ನು ಎಕ್ಸಿಸ್ ಬ್ಯಾಂಕ್ ಪಾವತಿಸುತ್ತದೆ ಮತ್ತು ಶಾಸನಬದ್ಧ ಕಾಲಮಿತಿಯೊಳಗೆ ಜಿಎಸ್‌ಟಿ ಕಾನೂನುಗಳ ಅಡಿಯಲ್ಲಿ ಸೂಚಿಸಲಾದಂತೆ ಜಿಎಸ್‌ಟಿ ರಿಟರ್ನ್ ಸಲ್ಲಿಸುತ್ತದೆ.

17.3. ಸೇವಾ ಶುಲ್ಕಗಳು ಮತ್ತು ವಿಧಿಸಲಾಗುವ ಶುಲ್ಕಗಳ ವಿವರಗಳು

**18. ಬಳಕೆದಾರರ ಹೊಣೆಗಾರಿಕೆ**

ಬಳಕೆದಾರರು ನಿಯಮಗಳನ್ನು ಉಲ್ಲಂಘಿಸಿದ್ದರೆ ಅಥವಾ ಈ ಕೆಳಗಿನ ರೀತಿಯ ನಿರ್ಲಕ್ಷ್ಯದ ಕ್ರಮಗಳಿಂದ ನಷ್ಟಕ್ಕೆ ಕಾರಣವಾದರೆ ಅಥವಾ ನಷ್ಟ ಉಂಟುಮಾಡಿದರೆ ಎಕ್ಸಿಸ್ ಬ್ಯಾಂಕ್ ಇಂಟರ್‌ನೆಟ್ ಬ್ಯಾಂಕಿಂಗ್ ಖಾತೆಗಳಲ್ಲಿ ಅನಧಿಕೃತ ಟ್ರಾನ್ಸಾಕ್ಷನ್‌ಗಳಿಂದ ಉಂಟಾಗುವ ಯಾವುದೇ ನಷ್ಟಕ್ಕೆ ಅವರು ಮಾತ್ರ ಹೊಣೆಗಾರರು:

- ಎಕ್ಸಿಸ್ ಬ್ಯಾಂಕ್ ಇಂಟರ್‌ನೆಟ್ ಬ್ಯಾಂಕಿಂಗ್ ಪಾಸ್‌ವರ್ಡ್‌ನ ಲಿಖಿತ ಅಥವಾ ಎಲೆಕ್ಟ್ರಾನಿಕ್ ದಾಖಲೆ ಇಟ್ಟುಕೊಳ್ಳುವುದು
- ಯಾವುದೇ ಅಪ್ರಾಪ್ತರು, ಬ್ಯಾಂಕ್ ಸಿಬ್ಬಂದಿ ಸೇರಿದಂತೆ ಯಾರಿಗಾದರೂ ಎಕ್ಸಿಸ್ ಬ್ಯಾಂಕ್ ಇಂಟರ್‌ನೆಟ್ ಬ್ಯಾಂಕಿಂಗ್ ಪಾಸ್‌ವರ್ಡ್ ಬಹಿರಂಗಪಡಿಸುವುದು ಅಥವಾ ಹಾಗೆ ಬಹಿರಂಗಪಡಿಸುವುದನ್ನು ತಡೆಯಲು ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ವಿಫಲವಾಗುವುದು ಮತ್ತು/ಅಥವಾ ಹಾಗೆ ಬಹಿರಂಗಪಡಿಸಿರುವುದರ ಬಗ್ಗೆ ಸೂಕ್ತ ಸಮಯದೊಳಗೆ ಬ್ಯಾಂಕ್‌ಗೆ ಮಾಹಿತಿ ನೀಡಲು ವಿಫಲವಾಗುವುದು.
- ಎಕ್ಸಿಸ್ ಬ್ಯಾಂಕ್ ಇಂಟರ್‌ನೆಟ್ ಬ್ಯಾಂಕಿಂಗ್ ಖಾತೆಗಳಲ್ಲಿ ಅನಧಿಕೃತ ಅಕ್ಸೆಸ್ ಅಥವಾ ತಪ್ಪಾದ ಟ್ರಾನ್ಸಾಕ್ಷನ್‌ಗಳ ಬಗ್ಗೆ ಸೂಕ್ತ ಸಮಯದಲ್ಲಿ ಬ್ಯಾಂಕ್‌ಗೆ ತಿಳಿಸದೇ ಇರುವುದು.
- ನೈಸರ್ಗಿಕ ವಿಕೋಪಗಳು, ಪ್ರವಾಹ, ಬೆಂಕಿ ಅವಘಡ ಮತ್ತು ಯಾವುದೇ ರೀತಿಯ ಇತರ ನೈಸರ್ಗಿಕ ವಿಕೋಪಗಳು, ಕಾನೂನಾತ್ಮಕ ನಿರ್ಬಂಧಗಳು, ದೂರಸಂಪರ್ಕ ಜಾಲ ಅಥವಾ ಇಂಟರ್‌ನೆಟ್‌ನಲ್ಲಿನ ದೋಷಗಳು ಅಥವಾ ನೆಟ್‌ವರ್ಕ್ ವೈಫಲ್ಯ, ವಿದ್ಯುತ್ ವ್ಯತ್ಯಯ

ಅಥವಾ ಯುಪಿಎಸ್ ವೈಫಲ್ಯ, ಸಾಫ್ಟ್‌ವೇರ್ ಅಥವಾ ಹಾರ್ಡ್‌ವೇರ್ ವೈಫಲ್ಯ ಮತ್ತು/ಅಥವಾ ದೋಷ ಅಥವಾ ಬ್ಯಾಂಕ್‌ನ ನಿಯಂತ್ರಣ ಮೀರಿದ ಯಾವುದೇ ಇತರ ಕಾರಣಗಳಿಂದಾಗಿ ಎಕ್ಸಿಸ್ ಬ್ಯಾಂಕ್ ಇಂಟರ್‌ನೆಟ್ ಬ್ಯಾಂಕಿಂಗ್ ಸೌಲಭ್ಯವು ನಿರೀಕ್ಷಿತ ರೀತಿಯಲ್ಲಿ ಸಿಗದಿದ್ದಲ್ಲಿ, ಬ್ಯಾಂಕ್ ಈ ಯಾವುದೇ ಸಂದರ್ಭದಲ್ಲೂ ಬಳಕೆದಾರರಿಗೆ ಹೊಣೆಯಲ್ಲ. ಬಳಕೆದಾರರು ಹೊರತುಪಡಿಸಿ ಬೇರೆ ವ್ಯಕ್ತಿಯಿಂದ ಖಾತೆಯ ಹ್ಯಾಕಿಂಗ್ ಆಗಿ, ಅದು ಅಂತರಾಷ್ಟ್ರೀಯ ಮಟ್ಟದಲ್ಲಿ ಅಂಗೀಕರಿಸಲ್ಪಟ್ಟ 'ಸೈಬರ್ ಸಂಬಂಧಿತ ಅಪರಾಧ'ದ ವ್ಯಾಖ್ಯಾನಕ್ಕೆ ಒಳಪಟ್ಟಲ್ಲಿ, ಅದರಿಂದ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗೆ ಎಕ್ಸಿಸ್ ಬ್ಯಾಂಕ್ ಯಾವುದೇ ರೀತಿಯಲ್ಲಿ ಹೊಣೆಯಲ್ಲ. ಹಾನಿಗಳು ಪ್ರತ್ಯಕ್ಷ, ಪರೋಕ್ಷ, ಪ್ರಾಸಂಗಿಕ ಅಥವಾ ಪರಿಣಾಮಕಾರಿ ಆಗಿರಲಿ ಮತ್ತು ಅಂತಹ ಕ್ಲೈಮ್‌ಗಳು ಆದಾಯದ ನಷ್ಟ, ಹೂಡಿಕೆ, ಉತ್ಪಾದನೆ, ಸದ್ಭಾವನೆ, ಲಾಭ, ವ್ಯವಹಾರದ ಅಡಚಣೆ ಅಥವಾ ಯಾವುದೇ ಸ್ವರೂಪದ ಇತರ ನಷ್ಟಗಳ ಆಧಾರದಲ್ಲಿ ಇದ್ದರೂ ಸಹ, ಅಂತಹ ಯಾವುದೇ ಸಂದರ್ಭದಲ್ಲೂ ಬ್ಯಾಂಕ್ ಅಂತಹ ಯಾವುದೇ ರೀತಿಯ ಹಾನಿಗಳಿಗೆ ಹೊಣೆಯಲ್ಲ ಹಾಗೂ ಈ ಹಾನಿಯು ಬಳಕೆದಾರರಿಗೆ ಅಥವಾ ಇನ್ಯಾವುದೇ ವ್ಯಕ್ತಿಗೆ ಸಂಭವಿಸಿದ್ದರೂ ಇದು ಅನ್ವಯಿಸುತ್ತದೆ.

**19. ಎಂಐಎಸ್/ವರದಿಗಳು**

19.1. ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಈ ಸೌಲಭ್ಯ/ಸೌಲಭ್ಯಗಳು/ಸೇವೆಗಳಿಗೆ ಸಂಬಂಧಿಸಿದ ಡೇಟಾ, ಸ್ಟೇಟ್‌ಮೆಂಟ್‌ಗಳು ಮತ್ತು ವರದಿಗಳನ್ನು ಒಳಗೊಂಡಂತೆ ಈ ಮಾಧ್ಯಮಗಳಲ್ಲಿ ಮಾಹಿತಿ ಒದಗಿಸಬಹುದು (a) ಕ್ಲೈಂಟ್ ನಿಗದಿಪಡಿಸಿದ ವಿಳಾಸಕ್ಕೆ ಎಲೆಕ್ಟ್ರಾನಿಕ್ ಮೇಲ್ ಅಥವಾ (b) ಎಸ್‌ಎಂಎಸ್ ಸೇರಿದಂತೆ ಯಾವುದೇ ಇತರ ಎಲೆಕ್ಟ್ರಾನಿಕ್ ವಿಧಾನ. ಅಂತಹ ಮಾಹಿತಿಯು ಗೌಪ್ಯ ಸ್ವರೂಪದ್ದಾಗಿರುತ್ತದೆ ಹಾಗೂ ಅಂತಹ ಪ್ರಸರಣ ಮತ್ತು ಇಂಟರ್‌ನೆಟ್ ಸಂವಹನಗಳ ಸಮಯದಲ್ಲಿ ಯಾವುದೇ ವ್ಯಕ್ತಿಯು ಮಾಹಿತಿಯನ್ನು ತಡೆಹಿಡಿಯಬಹುದು, ಓದಬಹುದು, ಮಾರ್ಪಡಿಸಬಹುದು ಅಥವಾ ಬದಲಾಯಿಸಬಹುದು ಹಾಗೂ ಅದು ಸಮಯೋಚಿತ, ಸುರಕ್ಷಿತ, ದೋಷ-ಮುಕ್ತ ಅಥವಾ ವೈರಸ್-ಮುಕ್ತವಾಗಿರಲು ಸಾಧ್ಯವಿಲ್ಲ ಎಂದು ಕ್ಲೈಂಟ್ ತಿಳಿದಿದ್ದಾರೆ. ಬ್ಯಾಂಕ್ ಯಾವುದೇ ವಿಳಂಬ, ದೋಷ ಅಥವಾ ಲೋಪಗಳಿಗೆ ಹೊಣೆಗಾರಿಕೆ ಸ್ವೀಕರಿಸುವುದಿಲ್ಲ ಮತ್ತು ಬ್ಯಾಂಕ್ ಅಥವಾ ಇತರ ಥರ್ಡ್ ಪಾರ್ಟಿಯಿಂದ ಉಂಟಾದರೂ, ಇಂತಹ ಮಾಹಿತಿಯನ್ನು ಇಂಟರ್‌ನೆಟ್ ಮೂಲಕ ಕಳುಹಿಸುವುದರಿಂದ ಉಂಟಾಗುವ ಯಾವುದೇ ಪ್ರತ್ಯಕ್ಷ, ಪರೋಕ್ಷ ಅಥವಾ ಪರಿಣಾಮಕಾರಿ ನಷ್ಟಕ್ಕೆ ಬ್ಯಾಂಕ್ ಯಾವುದೇ ಹೊಣೆಗಾರಿಕೆ ಹೊರುವುದಿಲ್ಲ.

**20. ವರ್ಗಾವಣೆ ಮತ್ತು ಹಸ್ತಾಂತರ ಮಾಡಲು ಆಗದಿರುವುದು**

20.1. ಗ್ರಾಹಕರಿಗೆ ನೀಡುವ ಸೇವೆಗಳನ್ನು ಯಾವುದೇ ಸಂದರ್ಭದಲ್ಲಿ ವರ್ಗಾಯಿಸಲು ಸಾಧ್ಯವಿಲ್ಲ ಮತ್ತು ಅದನ್ನು ಗ್ರಾಹಕರು ಮಾತ್ರ ಬಳಸತಕ್ಕದ್ದು. ಸೇವೆಗಳು ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದ ತಮ್ಮ ಹಕ್ಕುಗಳು ಮತ್ತು/ಅಥವಾ ಜವಾಬ್ದಾರಿಗಳನ್ನು ಗ್ರಾಹಕರು

ಯಾವುದೇ ಇತರ ವ್ಯಕ್ತಿಗೆ ಹಸ್ತಾಂತರ ಮಾಡುವಂತಿಲ್ಲ. ಸೇವೆಗಳಿಗೆ ಸಂಬಂಧಿಸಿದಂತೆ ತನ್ನ ಯಾವುದೇ ಜವಾಬ್ದಾರಿಗಳನ್ನು ನಿರ್ವಹಿಸಲು ಎಕ್ಸಿಸ್ ಬ್ಯಾಂಕ್ ಉಪಗುತ್ತಿಗೆ ನೀಡಬಹುದು ಮತ್ತು ಏಜೆಂಟ್‌ಗಳನ್ನು ನೇಮಿಸಬಹುದು.

**21. ಆಡಳಿತ ಕಾನೂನು ಮತ್ತು ನ್ಯಾಯವ್ಯಾಪ್ತಿ**

21.1. ಸೇವೆಗಳ ರಚನೆ, ಸಿಂಧುತ್ವ ಮತ್ತು ಕಾರ್ಯಕ್ಷಮತೆ ಹಾಗೂ ಈ ನಿಯಮಗಳು ಮತ್ತು ಷರತ್ತುಗಳು ಎಲ್ಲಾ ಅಂಶಗಳಲ್ಲೂ ಭಾರತದ ಕಾನೂನುಗಳಿಗೆ ಒಳಪಟ್ಟಿರುತ್ತವೆ. ಪಾರ್ಟಿಗಳು ಈ ಮೂಲಕ ಮುಂಬೈನಲ್ಲಿರುವ ನ್ಯಾಯಾಲಯಗಳ ಅಬಾಧಿತ ವ್ಯಾಪ್ತಿಗೆ ಒಳಪಡುತ್ತಾರೆ. ಗ್ರಾಹಕರು ಎಕ್ಸಿಸ್ ಬ್ಯಾಂಕ್‌ನ ಗ್ರಾಹಕ ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳಿಗೆ ಲಾಗ್ ಇನ್ ಮಾಡುವ ಮೂಲಕ ಅಥವಾ ಇತರ ಯಾವುದೇ ರೀತಿಯಲ್ಲಿ ಆಕ್ಸೆಸ್ ಮಾಡುವ ಅಥವಾ ಬಳಸುವ ಮೂಲಕ, ಮೇಲೆ ತಿಳಿಸಲಾದ ನಿಯಮಗಳು ಮತ್ತು ಷರತ್ತುಗಳ ಬಗ್ಗೆ ತಮಗೆ ಇರುವ ಜ್ಞಾನ ಮತ್ತು ಅವುಗಳಿಗೆ ತಮ್ಮ ಒಪ್ಪಿಗೆ ಪ್ರದರ್ಶಿಸತಕ್ಕದ್ದು. ಗ್ರಾಹಕರು ಮೇಲೆ ತಿಳಿಸಲಾದ ಯಾವುದೇ ನಿಯಮಗಳು ಅಥವಾ ಷರತ್ತುಗಳನ್ನು ಒಪ್ಪದಿದ್ದರೆ, ವೆಬ್‌ಸೈಟ್‌ಗೆ ಲಾಗ್-ಇನ್ ಆಗುವುದು ಸೇರಿದಂತೆ ಯಾವುದೇ ರೀತಿಯಲ್ಲಿ ಎಕ್ಸಿಸ್ ಬ್ಯಾಂಕ್‌ನ ಗ್ರಾಹಕ ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳನ್ನು ಬಳಸಬಾರದು ಅಥವಾ ಬಳಸಲು ಪ್ರಯತ್ನಿಸಬಾರದು.

**22. ಅಪಾಯಗಳು**

ಎಕ್ಸಿಸ್ ಬ್ಯಾಂಕ್ ಇಂಟರ್‌ನೆಟ್ ಬ್ಯಾಂಕಿಂಗ್ ಅಪ್ಲಿಕೇಶನ್ ಬಳಸುವ ಮೂಲಕ, ಗ್ರಾಹಕರು ಡಿಜಿಟಲ್ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳಿಗೆ ಸಂಬಂಧಿಸಿದ ಅಂತರ್ಗತ ಅಪಾಯಗಳನ್ನು ಅಂಗೀಕರಿಸುತ್ತಾರೆ ಮತ್ತು ಅರ್ಥಮಾಡಿಕೊಳ್ಳುತ್ತಾರೆ. ಎಕ್ಸಿಸ್ ಬ್ಯಾಂಕ್ ದೃಢವಾದ ಭದ್ರತಾ ಕ್ರಮಗಳನ್ನು ಒದಗಿಸಲು ಪ್ರಯತ್ನ ಮಾಡುತ್ತಿದ್ದರೂ, ತನ್ನ ನಿಯಂತ್ರಣ ಮೀರಿದ ಅಂಶಗಳಿಂದಾಗಿ ಬ್ಯಾಂಕ್ ಸಂಪೂರ್ಣ ಭದ್ರತೆ ಖಾತರಿಪಡಿಸಲು ಸಾಧ್ಯವಿಲ್ಲ ಎಂದು ಗ್ರಾಹಕರು ಒಪ್ಪುತ್ತಾರೆ. ಗ್ರಾಹಕರು ಈ ಕೆಳಗಿನ ಸಂಭಾವ್ಯ ಅಪಾಯಗಳನ್ನು ಸ್ಪಷ್ಟವಾಗಿ ಒಪ್ಪುತ್ತಾರೆ ಮತ್ತು ಅಂಗೀಕರಿಸುತ್ತಾರೆ:

- **ಅನಧಿಕೃತ ಅಕ್ಸೆಸ್:** ಪಿನ್, ಪಾಸ್‌ವರ್ಡ್‌ಗಳು ಅಥವಾ ಡಿವೈಸ್ ಭದ್ರತಾ ಸೆಟ್ಟಿಂಗ್ಸ್ ಒಳಗೊಂಡಂತೆ ಗ್ರಾಹಕರ ವಿವರಗಳು ಸೋರಿಕೆ ಆದರೆ ಅನಧಿಕೃತ ಅಕ್ಸೆಸ್ ಸಂಭವಿಸಬಹುದು. ಈ ವಿವರಗಳ ಗೌಪ್ಯತೆ ಕಾಪಾಡಿಕೊಳ್ಳುವುದು ಅವರ ಜವಾಬ್ದಾರಿ ಮಾತ್ರ ಎಂದು ಗ್ರಾಹಕರು ಒಪ್ಪುತ್ತಾರೆ.
- **ಸೈಬರ್-ದಾಳಿಗಳು:** ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳು ಹ್ಯಾಕಿಂಗ್, ಮಾಲ್‌ವೇರ್, ರ್ಯಾನ್ಸಮ್‌ವೇರ್ ಮತ್ತು ವೈರಸ್‌ಗಳನ್ನು ಒಳಗೊಂಡಂತೆ ಸೈಬರ್ ಬೆದರಿಕೆಗಳಿಗೆ ಗುರಿಯಾಗುತ್ತವೆ ಹಾಗೂ ಇದು ವೈಯಕ್ತಿಕ ಮತ್ತು ಹಣಕಾಸು ಮಾಹಿತಿಯ ಸಂಭಾವ್ಯ ದುರ್ಬಳಕೆಗೆ ಕಾರಣ ಆಗಬಹುದು ಎಂದು ಗ್ರಾಹಕರು ಒಪ್ಪುತ್ತಾರೆ.
- **ಫಿಶಿಂಗ್ ಮತ್ತು ಸೋಶಿಯಲ್ ಎಂಜಿನಿಯರಿಂಗ್ ದಾಳಿಗಳು:** ಸೂಕ್ಷ್ಮ ಬ್ಯಾಂಕಿಂಗ್ ವಿವರಗಳನ್ನು ಪಡೆಯಲು ಫಿಶಿಂಗ್ ಇಮೇಲ್‌ಗಳು, ಮೋಸದ ವೆಬ್‌ಸೈಟ್‌ಗಳು, ಕರೆಗಳು,

ಮೆಸೇಜ್‌ಗಳು ಅಥವಾ ಇತರ ಮೋಸದ ವಿಧಾನಗಳನ್ನು ಬಳಸಬಹುದು. ಅನುಮಾನಾಸ್ಪದ ಕೋರಿಕೆಗಳಿಗೆ ಪ್ರತಿಕ್ರಿಯಿಸುವುದನ್ನು ತಪ್ಪಿಸಿ, ಗ್ರಾಹಕರು ಜಾಗರೂಕರಾಗಿರಬೇಕು ಮತ್ತು ಎಚ್ಚರಿಕೆಯಿಂದ ಇರಬೇಕು.

- **ಮಾಲ್‌ವೇರ್ ದಾಳಿಗಳು**: ಡಿವೈಸ್‌ಗಳಲ್ಲಿ ದುರುದ್ದೇಶಪೂರಿತ ಸಾಫ್ಟ್‌ವೇರ್ (ಮಾಲ್‌ವೇರ್) ಇನ್‌ಸ್ಟಾಲೇಶನ್ ವೈಯಕ್ತಿಕ ಡೇಟಾ, ಲಾಗಿನ್ ವಿವರಗಳು ಮತ್ತು ಟ್ರಾನ್ಸಾಕ್ಷನ್ ವಿವರಗಳ ಅನಧಿಕೃತ ಅಕ್ಸೆಸ್ ಆಗಬಹುದು. ತಮ್ಮ ಡಿವೈಸ್‌ಗಳು ವಿಶ್ವಾಸಾರ್ಹ ಭದ್ರತಾ ಸಾಫ್ಟ್‌ವೇರ್ ಮೂಲಕ ರಕ್ಷಣೆ ಹೊಂದಿವೆ ಎಂದು ಗ್ರಾಹಕರು ಖಾತ್ರಿಪಡಿಸಬೇಕು ಮತ್ತು ನಂಬಲಾಗದ ಮೂಲಗಳಿಂದ ಅಪ್ಲಿಕೇಶನ್‌ಗಳನ್ನು ಡೌನ್‌ಲೋಡ್ ಮಾಡುವುದನ್ನು ತಪ್ಪಿಸಬೇಕು.
- **ಪ್ರಕ್ರಿಯೆ ದೋಷಗಳು**: ಸಿಸ್ಟಮ್ ತೊಂದರೆಗಳು, ಸಾಫ್ಟ್‌ವೇರ್ ಬಗ್‌ಗಳು ಅಥವಾ ಮಾನವ ಇನ್‌ಪುಟ್ ದೋಷಗಳಿಂದಾಗಿ, ಟ್ರಾನ್ಸಾಕ್ಷನ್ ವೈಫಲ್ಯಗಳನ್ನು ಒಳಗೊಂಡಂತೆ ಆದರೆ ಅದಕ್ಕೆ ಮಾತ್ರ ಸೀಮಿತವಾಗಿರದಂತೆ ಪ್ರಕ್ರಿಯೆ ದೋಷಗಳು ಆಗಬಹುದು. ಬ್ಯಾಂಕ್‌ನ ಸಂಪೂರ್ಣ ನಿರ್ಲಕ್ಷ್ಯ ಅಥವಾ ಉದ್ದೇಶಪೂರ್ವಕ ದುರ್ನಡತೆಯಿಂದ ಉಂಟಾಗದ ಹೊರತು ಅಂತಹ ಯಾವುದೇ ದೋಷಗಳು ಅಥವಾ ನಷ್ಟಗಳಿಗೆ ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ ಎಂದು ಗ್ರಾಹಕರು ಸ್ಪಷ್ಟವಾಗಿ ಒಪ್ಪುತ್ತಾರೆ.
- **ಟ್ರಾನ್ಸಾಕ್ಷನ್ ಅಪಾಯಗಳು**: ಇಂಟರ್‌ನೆಟ್ ಬ್ಯಾಂಕಿಂಗ್ ಮೂಲಕ ಮಾಡಲಾದ ಟ್ರಾನ್ಸಾಕ್ಷನ್‌ಗಳು ಕೆಲವೊಮ್ಮೆ ತಾಂತ್ರಿಕ ಸಮಸ್ಯೆಗಳು, ನೆಟ್‌ವರ್ಕ್ ವೈಫಲ್ಯಗಳು, ಸರ್ವರ್ ಡೌನ್‌ಟೈಮ್ ಅಥವಾ ಟ್ರಾನ್ಸಾಕ್ಷನ್ ಪ್ರಕ್ರಿಯೆ ದೋಷಗಳಿಂದಾಗಿ ವಿಳಂಬಗಳು, ವೈಫಲ್ಯಗಳು ಅಥವಾ ತಪ್ಪುಗಳನ್ನು ಎದುರಿಸಬಹುದು. ತನ್ನ ಸಮಂಜಸ ನಿಯಂತ್ರಣ ಮೀರಿದ ಅಂತಹ ಟ್ರಾನ್ಸಾಕ್ಷನಲ್ ಅಡೆತಡೆಗಳಿಂದ ಉಂಟಾಗುವ ನಷ್ಟಗಳಿಗೆ ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ.
- **ಭದ್ರತಾ ಉಲ್ಲಂಘನೆ**: ಬಲಿಷ್ಠ ಸೈಬರ್ ಸುರಕ್ಷತಾ ಮೂಲಸೌಕರ್ಯಗಳನ್ನು ಅಳವಡಿಸಿದ್ದರೂ, ಅನಧಿಕೃತ ನುಸುಳುವಿಕೆ, ಹ್ಯಾಕಿಂಗ್ ಪ್ರಯತ್ನಗಳು ಅಥವಾ ಡೇಟಾ ಸೋರಿಕೆಯಂತಹ ಕೆಲವು ಅಪಾಯಗಳು ಇನ್ನೂ ಇರುತ್ತವೆ. ಬ್ಯಾಂಕ್‌ನ ಸಮಂಜಸ ನಿಯಂತ್ರಣ ಮೀರಿದ ಭದ್ರತಾ ಉಲ್ಲಂಘನೆಗಳಿಗೆ ಕಾರಣವಾಗುವ ಯಾವುದೇ ನಷ್ಟಗಳು ಅಥವಾ ಹಾನಿಗಳಿಗೆ ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ ಎಂದು ಗ್ರಾಹಕರು ಒಪ್ಪುತ್ತಾರೆ.
- **ಡೇಟಾ ಉಲ್ಲಂಘನೆಗಳು**: ಎಕ್ಸಿಸ್ ಬ್ಯಾಂಕ್ ಸಮಂಜಸ ಪ್ರಯತ್ನಗಳ ಹೊರತಾಗಿಯೂ ಡೇಟಾ ಉಲ್ಲಂಘನೆಗಳು ಆಗಬಹುದು ಎಂದು ಗ್ರಾಹಕರು ಅರ್ಥಮಾಡಿಕೊಳ್ಳುತ್ತಾರೆ. ಅಂತಹ ಉಲ್ಲಂಘನೆಗಳು ಸೂಕ್ಷ್ಮ ವೈಯಕ್ತಿಕ ಮತ್ತು ಹಣಕಾಸು ಮಾಹಿತಿಯನ್ನು ಬಹಿರಂಗಪಡಿಸಬಹುದು ಹಾಗೂ ಗುರುತಿನ ಕಳ್ಳತನ, ಹಣಕಾಸು ವಂಚನೆ ಮತ್ತು ಗೌಪ್ಯತೆ ಆಕ್ರಮಣದ ಅಪಾಯಗಳನ್ನು ಉಂಟುಮಾಡಬಹುದು.
- **ಥರ್ಡ್ ಪಾರ್ಟಿ ಸೇವಾ ಪೂರೈಕೆದಾರರು**: ಎಕ್ಸಿಸ್ ಬ್ಯಾಂಕ್ ಕೆಲವು ಸೇವೆಗಳಿಗಾಗಿ ಥರ್ಡ್ ಪಾರ್ಟಿ ಸೇವಾ ಪೂರೈಕೆದಾರರನ್ನು ಬಳಸಬಹುದು. ಥರ್ಡ್ ಪಾರ್ಟಿ ಸೇವಾ ಪೂರೈಕೆದಾರರ ಮೇಲಿನ ಅವಲಂಬನೆ ಅಪಾಯಕಾರಿ ಆಗಿರಬಹುದು ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ. ಇದರಲ್ಲಿ ಅಂತಹ ಥರ್ಡ್ ಪಾರ್ಟಿಗಳ ಮೂಲಕ ಸೇವೆಗಳ ವೈಫಲ್ಯ ಅಥವಾ ಡೇಟಾ ಸುರಕ್ಷತೆಯ ಉಲ್ಲಂಘನೆಯಂತಹ ಅಪಾಯಗಳು ಸೇರಿವೆ. ಈ ಥರ್ಡ್ ಪಾರ್ಟಿ ಘಟಕಗಳ ಆಗುವ ಯಾವುದೇ ಉಲ್ಲಂಘನೆಗಳು ಅಥವಾ ವೈಫಲ್ಯಗಳಿಗೆ ಬ್ಯಾಂಕ್ ಹೊಣೆಯಲ್ಲ.

- **ಸೇವೆ ಲಭ್ಯವಿಲ್ಲದಿರುವುದು:** ಕಾಲಕಾಲಕ್ಕೆ, ನಿಗದಿತ ನಿರ್ವಹಣೆ, ಸಿಸ್ಟಮ್ ಅಪ್‌ಡೇಟ್‌ಗಳು ಅಥವಾ ಅನಿರೀಕ್ಷಿತ ತಾಂತ್ರಿಕ ಸಮಸ್ಯೆಗಳಿಂದಾಗಿ ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳಿಗೆ ಅಡಚಣೆ ಆಗಬಹುದು. ಬ್ಯಾಂಕಿಂಗ್ ಸೇವೆಗಳು ಲಭ್ಯವಿಲ್ಲದ ಇಂತಹ ಅವಧಿಯಲ್ಲಿ ಉಂಟಾಗುವ ಯಾವುದೇ ವಿಳಂಬಗಳು, ಅಡಚಣೆಗಳು ಅಥವಾ ಸೇವೆಗಳನ್ನು ಪಡೆಯಲು ಸಾಧ್ಯವಾಗದಿರುವುದಕ್ಕೆ ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ ಎಂದು ಗ್ರಾಹಕರು ಅರ್ಥಮಾಡಿಕೊಂಡಿದ್ದಾರೆ ಮತ್ತು ಅಂಗೀಕರಿಸುತ್ತಾರೆ.
- **ನಿಯಂತ್ರಕ ಮತ್ತು ಕಾನೂನು ಅಪಾಯಗಳು:** ಇಂಟರ್‌ನೆಟ್ ಬ್ಯಾಂಕಿಂಗ್ ಸೌಲಭ್ಯವು ನಿಯಂತ್ರಕ ಚೌಕಟ್ಟುಗಳು, ಮಾರ್ಗಸೂಚಿಗಳು ಮತ್ತು ಅನುಸರಣೆ ಅವಶ್ಯಕತೆಗಳಲ್ಲಿನ ಬದಲಾವಣೆಗಳಿಗೆ ಒಳಪಟ್ಟಿರುತ್ತದೆ. ಕಾನೂನು ಅಥವಾ ನಿಬಂಧನೆಗಳಲ್ಲಿನ ಬದಲಾವಣೆಗಳು ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳ ಕಾರ್ಯಕ್ಷಮತೆ, ಲಭ್ಯತೆ ಅಥವಾ ಭದ್ರತಾ ಅಂಶಗಳ ಮೇಲೆ ಪರಿಣಾಮ ಬೀರಬಹುದು.

ಬ್ಯಾಂಕಿಂಗ್ ಸೇವೆಗಳ ಬಳಕೆಯಲ್ಲಿ ಒಳಗೊಂಡಿರುವ ಈ ಅಥವಾ ಇತರ ಅಪಾಯಗಳಿಂದ ಉಂಟಾಗುವ ಯಾವುದೇ ಪ್ರತ್ಯಕ್ಷ, ಪರೋಕ್ಷ, ಪ್ರಾಸಂಗಿಕ ಅಥವಾ ಪರಿಣಾಮಕಾರಿ ನಷ್ಟಗಳಿಗೆ ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ ಎಂದು ಗ್ರಾಹಕರು ಒಪ್ಪುತ್ತಾರೆ.

**23. ಅಪಾಯ ನಿವಾರಣೆಯಲ್ಲಿ ಗ್ರಾಹಕರ ಜವಾಬ್ದಾರಿಗಳು**

- ಕಾಲಕಾಲಕ್ಕೆ ಅಪ್ಲಿಕೇಶನ್‌ಗಳು ಮತ್ತು ಆಪರೇಟಿಂಗ್ ಸಿಸ್ಟಮ್‌ಗಳನ್ನು ಇತ್ತೀಚಿನ ವರ್ಷನ್‌ಗೆ ಅಪ್‌ಡೇಟ್ ಮಾಡಿ.
- ಬ್ಯಾಂಕಿಂಗ್ ಟ್ರಾನ್ಸಾಕ್ಷನ್‌ಗಳನ್ನು ನಡೆಸಲು ಭದ್ರತೆ ಇಲ್ಲದ ಪಬ್ಲಿಕ್ ವೈ-ಫೈ ನೆಟ್‌ವರ್ಕ್ ಬಳಸುವುದನ್ನು ತಪ್ಪಿಸಿ.
- ಖಾತೆ ಸ್ಟೇಟ್‌ಮೆಂಟ್‌ಗಳು ಮತ್ತು ಟ್ರಾನ್ಸಾಕ್ಷನ್ ಅಲರ್ಟ್‌ಗಳನ್ನು ಆಗಾಗ್ಗೆ ಪರಿಶೀಲಿಸಿ ಅನುಮಾನಾಸ್ಪದ ಅಥವಾ ಅನಧಿಕೃತ ಚಟುವಟಿಕೆಗಳು ನಡೆದಿವೆಯೇ ಎಂದು ಗಮನಿಸಿ.
- ಡಿವೈಸ್‌ಗಳು ಮತ್ತು/ಅಥವಾ ಬ್ಯಾಂಕಿಂಗ್ ಕ್ರೆಡೆನ್ಶಿಯಲ್‌ಗಳ ಯಾವುದೇ ನಷ್ಟ, ಕಳ್ಳತನ ಅಥವಾ ಸೋರಿಕೆಯನ್ನು ತಕ್ಷಣವೇ ಎಕ್ಸಿಸ್ ಬ್ಯಾಂಕ್‌ಗೆ ವರದಿ ಮಾಡಿ.
- ವೈಯಕ್ತಿಕ ಅಥವಾ ಹಣಕಾಸು ಮಾಹಿತಿಗೆ ಕೋರಿಕೆ ಇಡುವ ಅಪರಿಚಿತ ಸಂವಹನಗಳಿಗೆ ಪ್ರತಿಕ್ರಿಯೆ ನೀಡುವಾಗ ಎಚ್ಚರಿಕೆ ವಹಿಸಿ.
- ಭದ್ರತೆ ಕಾಪಾಡಿಕೊಳ್ಳಲು ಮತ್ತು ದುರ್ಬಲತೆ ಕಡಿಮೆ ಮಾಡಲು ಆಗಾಗ್ಗೆ ಪಾಸ್‌ವರ್ಡ್‌ಗಳು ಮತ್ತು ಪಿನ್ ಬದಲಾಯಿಸಿ.

**ಎಕ್ಸಿಸ್ ಬ್ಯಾಂಕ್‌ನ ಕ್ರಮಗಳು:**

- ಗ್ರಾಹಕರ ಡೇಟಾ ರಕ್ಷಿಸಲು ಎನ್‌ಕ್ರಿಪ್ಶನ್, ಫೈರ್‌ವಾಲ್‌ಗಳು, ಸುರಕ್ಷಿತ ದೃಢೀಕರಣ ವಿಧಾನಗಳು ಮತ್ತು ನಿಯತಕಾಲಿಕ ಭದ್ರತಾ ಆಡಿಟ್‌ಗಳನ್ನು ಒಳಗೊಂಡಂತೆ ಸುಧಾರಿತ ಭದ್ರತಾ ಕ್ರಮಗಳನ್ನು ಎಕ್ಸಿಸ್ ಬ್ಯಾಂಕ್ ಬಳಸುತ್ತದೆ. ಈ ಪ್ರಯತ್ನಗಳ ಹೊರತಾಗಿಯೂ, ಅಪಾಯಗಳ ವಿರುದ್ಧ ಸಂಪೂರ್ಣ ರಕ್ಷಣೆ ಖಚಿತಪಡಿಸಲು ಆಗುವುದಿಲ್ಲ ಎಂದು ಗ್ರಾಹಕರು ಒಪ್ಪುತ್ತಾರೆ.

- ಮೇಲೆ ತಿಳಿಸಲಾದ ಅಪಾಯಗಳಿಂದ ಅಥವಾ ಎಕ್ಸಿಸ್ ಬ್ಯಾಂಕ್ ಇಂಟರ್‌ನೆಟ್ ಬ್ಯಾಂಕಿಂಗ್ ಅಪ್ಲಿಕೇಶನ್ ಬಳಕೆಗೆ ಸಂಬಂಧಿಸಿದ ಯಾವುದೇ ಇತರ ಅಪಾಯಗಳಿಂದ ಉಂಟಾಗುವ ಯಾವುದೇ ಪ್ರತ್ಯಕ್ಷ, ಪರೋಕ್ಷ, ಪರಿಣಾಮಕಾರಿ ಅಥವಾ ಪ್ರಾಸಂಗಿಕ ನಷ್ಟಗಳು, ಹಾನಿಗಳು, ಕ್ಲೈಮ್‌ಗಳು, ಹೊಣೆಗಾರಿಕೆಗಳು ಅಥವಾ ವೆಚ್ಚಗಳಿಗೆ ಎಕ್ಸಿಸ್ ಬ್ಯಾಂಕ್ ಹೊಣೆಯಲ್ಲ ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ, ಆದರೆ ಬ್ಯಾಂಕ್‌ನ ಸಾಬೀತಾದ ಘೋರ ನಿರ್ಲಕ್ಷ್ಯ ಅಥವಾ ಉದ್ದೇಶಪೂರ್ವಕ ದುರ್ನಡತೆಯ ಸಂದರ್ಭಗಳನ್ನು ಹೊರತುಪಡಿಸಿ ಈ ನಿಯಮ ಅನ್ವಯಿಸುತ್ತದೆ.
- ಎಕ್ಸಿಸ್ ಬ್ಯಾಂಕ್ ಇಂಟರ್‌ನೆಟ್ ಬ್ಯಾಂಕಿಂಗ್ ಅಪ್ಲಿಕೇಶನ್ ಬಳಸುವುದನ್ನು ಮುಂದುವರೆಸುವ ಮೂಲಕ, ಗ್ರಾಹಕರು ಈ ಅಪಾಯಗಳು, ತಮ್ಮ ಜವಾಬ್ದಾರಿಗಳು ಮತ್ತು ಎಕ್ಸಿಸ್ ಬ್ಯಾಂಕ್‌ನ ಹೊಣೆಗಾರಿಕೆಯ ಮಿತಿಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅಂಗೀಕರಿಸುವುದನ್ನು ಖಚಿತಪಡಿಸುತ್ತಾರೆ.

## 24. ಸುರಕ್ಷಿತ ಬ್ಯಾಂಕಿಂಗ್
**ಮಾಡಬೇಕಾದ ಮತ್ತು ಮಾಡಬಾರದ ಕೆಲಸಗಳು**

- ಎಕ್ಸಿಸ್ ಬ್ಯಾಂಕ್, ಆರ್‌ಬಿಐ ಅಥವಾ ಅಂತಹ ಯಾವುದೇ ಇತರ ಸಂಸ್ಥೆಗಳು ನಿಮ್ಮ ವೈಯಕ್ತಿಕ ಅಥವಾ ಬ್ಯಾಂಕಿಂಗ್ ಮಾಹಿತಿ ಕೇಳಲು ಎಂದಿಗೂ ಕರೆ ಮಾಡುವುದಿಲ್ಲ, ಇಮೇಲ್ ಅಥವಾ ಎಸ್‌ಎಂಎಸ್ ಕಳುಹಿಸುವುದಿಲ್ಲ. ಅಂತಹ ವಂಚನೆಗಳಿಗೆ ಬಲಿಪಶುವಾಗಬೇಡಿ.
- ನಿಮಗೆ ಖಾತ್ರಿ ಇರದ ಯಾವುದೇ ಮೆಸೇಜ್/ಕಳುಹಿಸುವವರಿಂದ ಯಾವುದೇ ಯುಆರ್‌ಎಲ್ ಕ್ಲಿಕ್ ಮಾಡಬೇಡಿ.
- ಎಟಿಎಂ ಕಾರ್ಡ್ ಬಳಸಲು ಅಥವಾ ಶಾಖೆಯಲ್ಲಿ ಹಣ ನಿರ್ವಹಿಸಲು ಅಪರಿಚಿತರಿಂದ ಸಹಾಯ ತೆಗೆದುಕೊಳ್ಳಬೇಡಿ ಮತ್ತು ನೀವು ಟ್ರಾನ್ಸಾಕ್ಷನ್ ಮಾಡುವುದನ್ನು ನೋಡಲು ಅವರಿಗೆ ಅವಕಾಶ ನೀಡಬೇಡಿ.
- ಸೈಬರ್ ಕೆಫೆ/ಹಂಚಿಕೊಂಡ ಕಂಪ್ಯೂಟರ್‌ನಿಂದ ನಿಮ್ಮ ಇಂಟರ್‌ನೆಟ್ ಬ್ಯಾಂಕಿಂಗ್ ಖಾತೆ ಅಕ್ಸೆಸ್ ಮಾಡುವುದನ್ನು ತಪ್ಪಿಸಿ. ನೀವು ಹಾಗೆ ಮಾಡಿದರೆ, ನಿಮ್ಮ ಸ್ವಂತ ಕಂಪ್ಯೂಟರ್‌ನಿಂದ ನಿಮ್ಮ ಪಾಸ್‌ವರ್ಡ್ ಬದಲಾಯಿಸಿ.
- ನಿರಂತರವಾಗಿ ಟ್ರಾನ್ಸಾಕ್ಷನ್ ಅಲರ್ಟ್ ಪಡೆಯಲು ನೀವು ಬ್ಯಾಂಕ್‌ಗೆ ಸರಿಯಾದ ಮೊಬೈಲ್ ನಂಬರ್ ಅಪ್‌ಡೇಟ್ ಮಾಡಿದ್ದೀರಿ ಎಂಬುದನ್ನು ಖಚಿತಪಡಿಸಿಕೊಳ್ಳಿ.

**ಸುರಕ್ಷಿತ ಬಳಕೆಯ ಮಾರ್ಗಸೂಚಿಗಳು**

- ಅಪರಿಚಿತ ಗ್ರಾಹಕರಿಗೆ ಇಂಟರ್‌ನೆಟ್ ಬ್ಯಾಂಕಿಂಗ್ ಅಕ್ಸೆಸ್ ಕೊಡಬೇಡಿ.
- ಸಂಗ್ರಹ ಕೋರಿಕೆ ಅಂಗೀಕರಿಸುವಾಗ, ಸರಿಯಾದ ಸ್ವೀಕೃತಿದಾರರಿಗೆ ಅನುಮೋದನೆ ನೀಡಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಕಾಳಜಿ ವಹಿಸಿ.
- ನೀವು ಮೊಬೈಲ್ ನಂಬರ್ ಬದಲಾಯಿಸಿದರೆ, ನೀವು ಎಸ್‌ಎಂಎಸ್ ನೋಟಿಫಿಕೇಶನ್ ಪಡೆಯುವುದರ ಖಚಿತತೆಗೆ ಆ ಹೊಸ ಮೊಬೈಲ್ ನಂಬರ್ ಬಗ್ಗೆ ಬ್ಯಾಂಕ್‌ಗೆ ತಿಳಿಸಲು ಮರೆಯಬೇಡಿ.

- ಪರಿಚಿತ ಅಥವಾ ಅಪರಿಚಿತ ಮೂಲಗಳಿಂದ ಬರುವ ಕಾಲರ್ ಟ್ಯೂನ್, ಡಯಲರ್ ಟ್ಯೂನ್ ಆಫರ್‌ಗಳನ್ನು ಸ್ವೀಕರಿಸುವಾಗ ಅಥವಾ ಇಮೇಲ್‌ಗಳು ಮತ್ತು ಅಟ್ಯಾಚ್‌ಮೆಂಟ್ ತೆರೆಯುವಾಗ/ಡೌನ್‌ಲೋಡ್ ಮಾಡುವಾಗ ಎಚ್ಚರಿಕೆ ವಹಿಸಿ.
- ಕ್ರೆಡಿಟ್ ಕಾರ್ಡ್ ವಿವರಗಳು, ಇಂಟರ್‌ನೆಟ್ ಬ್ಯಾಂಕಿಂಗ್ ಪಾಸ್‌ವರ್ಡ್, ಕಸ್ಟಮರ್ ಐಡಿ ಮುಂತಾದ ಸೂಕ್ಷ್ಮ ಮಾಹಿತಿಯನ್ನು ನಿಮ್ಮ ಫೋನ್/ಕಂಪ್ಯೂಟರ್‌ನಲ್ಲಿ ಸ್ಟೋರ್ ಮಾಡಬೇಡಿ.
- ಆಗಾಗ್ಗೆ ನಿಮ್ಮ ಪಿನ್ ಬದಲಾಯಿಸಿ.
- ಸಾರ್ವಜನಿಕ ಸ್ಥಳಗಳಲ್ಲಿ ಬ್ಲೂಟೂತ್ ಬಳಸುವಾಗ ಎಚ್ಚರಿಕೆ ವಹಿಸಿ ಏಕೆಂದರೆ ಯಾರಾದರೂ ನಿಮ್ಮ ಗೌಪ್ಯ ಡೇಟಾ/ಮಾಹಿತಿಯನ್ನು ಅಕ್ಸೆಸ್ ಮಾಡಬಹುದು.
- ಬ್ಯಾಂಕ್ ಮೂಲಕ ಬಂದಿದೆ ಎಂದು ಹೇಳಿಕೊಳ್ಳುವ ಇಮೇಲ್‌ಗಳು/ಸೋಶಿಯಲ್ ನೆಟ್‌ವರ್ಕಿಂಗ್ ಸೈಟ್‌ಗಳಲ್ಲಿ ಎಂಬೆಡ್ ಮಾಡಲಾದ ಲಿಂಕ್‌ಗಳ ಮೇಲೆ ಕ್ಲಿಕ್ ಮಾಡಬೇಡಿ

## 25. ಅಪಾಯಗಳು ಮತ್ತು ಗ್ರಾಹಕರ ಜವಾಬ್ದಾರಿ

- ಅಲರ್ಟ್‌ಗಳು ಮತ್ತು ಖಾತೆ ಸಂಬಂಧಿತ ಮಾಹಿತಿಯನ್ನು ಗ್ರಾಹಕರು ಒದಗಿಸಿದ ಅವರ ಮೊಬೈಲ್ ನಂಬರ್ ಮತ್ತು/ಅಥವಾ ಇಮೇಲ್ ವಿಳಾಸಕ್ಕೆ ಬ್ಯಾಂಕ್ ರವಾನಿಸುತ್ತದೆ. ಬ್ಯಾಂಕ್‌ಗೆ ಒದಗಿಸಲಾದ ಮೊಬೈಲ್ ನಂಬರ್ ಮತ್ತು ಇಮೇಲ್ ವಿಳಾಸ ನಿಖರವಾಗಿದೆ ಮತ್ತು ಬ್ಯಾಂಕ್ ದಾಖಲೆಗಳಲ್ಲಿ ಅಪ್ ಟು ಡೇಟ್ ಆಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು ಗ್ರಾಹಕರ ಜವಾಬ್ದಾರಿ ಮಾತ್ರವೇ ಆಗಿದೆ.
- ತಮ್ಮ ಡಿವೈಸ್ ಮತ್ತು ಇಮೇಲ್ ಖಾತೆಯ ಭದ್ರತೆ ಕಾಪಾಡಿಕೊಳ್ಳುವುದು ಸಂಪೂರ್ಣವಾಗಿ ಗ್ರಾಹಕರ ಜವಾಬ್ದಾರಿ ಮಾತ್ರವೇ ಆಗಿರುತ್ತದೆ. ಅಂತಹ ಸಂಪರ್ಕ ವಿವರಗಳ ನಿಖರತೆ ಅಥವಾ ಭದ್ರತೆಯ ನಿರ್ವಹಣೆ ಅಥವಾ ಯಾವುದೇ ಬದಲಾವಣೆಗಳ ಬಗ್ಗೆ ಬ್ಯಾಂಕ್‌ಗೆ ತಿಳಿಸಲು ಗ್ರಾಹಕರ ಕಡೆಯಿಂದ ಆಗುವ ಯಾವುದೇ ವೈಫಲ್ಯವು ಗ್ರಾಹಕರ ಸ್ವಂತ ಅಪಾಯ ಮತ್ತು ಹೊಣೆಗಾರಿಕೆಯಲ್ಲಿ ಇರುತ್ತದೆ. ಈ ಸೌಲಭ್ಯ ಪಡೆಯುವುದನ್ನು ಮುಂದುವರಿಸಲು ಗ್ರಾಹಕರು ತಮ್ಮ ಮೊಬೈಲ್ ಫೋನ್ ಮತ್ತು ಇಮೇಲ್ ಐಡಿ ಆ್ಯಕ್ಟಿವ್ ಆಗಿದೆ ಎಂಬುದನ್ನು ಕೂಡ ಖಚಿತಪಡಿಸಿಕೊಳ್ಳಬೇಕು.
- ಮೊಬೈಲ್ ಫೋನ್ ಮತ್ತು/ಅಥವಾ ಇಮೇಲ್ ಮೂಲಕ ಮಾಹಿತಿಯ ಪ್ರಸರಣ ಮಾಡುವುದು ಸ್ವಾಭಾವಿಕವಾಗಿ ಅಸುರಕ್ಷಿತವಾಗಿದೆ ಮತ್ತು ಕೆಲವು ಅಪಾಯಗಳಿಗೆ ಒಳಪಟ್ಟಿರುತ್ತದೆ. ಅಂತಹ ಅಪಾಯಗಳ ಹೊರತಾಗಿಯೂ, ಗ್ರಾಹಕರು, ತಮ್ಮ ಅನುಕೂಲಕ್ಕಾಗಿ ಮತ್ತು ಅಂತಹ ಅಪಾಯಗಳ ಎಚ್ಚರಿಕೆಯ ಮೌಲ್ಯಮಾಪನದ ನಂತರ, ಈ ಚಾನೆಲ್‌ಗಳ ಮೂಲಕ ಪಡೆದ ಸೂಚನೆಗಳು ಅಥವಾ ಸಂವಹನಗಳ ಮೇಲೆ ಕಾರ್ಯನಿರ್ವಹಿಸಲು ಸ್ವಯಂಪ್ರೇರಿತವಾಗಿ ಕೋರಿಕೆ ಸಲ್ಲಿಸಿದ್ದಾರೆ ಮತ್ತು ಬ್ಯಾಂಕ್‌ಗೆ ಅಧಿಕಾರ ನೀಡಿದ್ದಾರೆ ಎಂದು ಗ್ರಾಹಕರು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಾರೆ ಮತ್ತು ಅಂಗೀಕರಿಸುತ್ತಾರೆ.
- ಅಗತ್ಯ ಇರುವಲ್ಲೆಲ್ಲಾ ನಿಜವಾದ, ಸಂಪೂರ್ಣ ಮತ್ತು ಸರಿಯಾದ ಮಾಹಿತಿ ಒದಗಿಸಲು ಗ್ರಾಹಕರು ಒಪ್ಪಿಕೊಳ್ಳುತ್ತಾರೆ ಮತ್ತು ಬ್ಯಾಂಕ್‌ಗೆ ಸಲ್ಲಿಸಿದ ಡೇಟಾದ ನಿಖರತೆಗೆ ಎಲ್ಲಾ ಸಮಯದಲ್ಲೂ ಅವರೇ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ. ಗ್ರಾಹಕರು ನೀಡಿದ ತಪ್ಪಾದ ಅಥವಾ ಅಸಮರ್ಪಕ ಮಾಹಿತಿಯಿಂದ ಉಂಟಾಗುವ ಯಾವುದೇ ಪರಿಣಾಮಗಳಿಗೆ ಬ್ಯಾಂಕ್ ಹೊಣೆಯಲ್ಲ.

- ಬ್ಯಾಂಕ್ ತಿಳಿಸಿದ ಮಾಹಿತಿಯಲ್ಲಿ ದೋಷ ಇದೆ ಎಂದು ಗ್ರಾಹಕರು ಅಭಿಪ್ರಾಯಪಟ್ಟರೆ, ಗ್ರಾಹಕರು ತಕ್ಷಣವೇ ಅದನ್ನು ಬ್ಯಾಂಕ್‌ಗೆ ಸೂಚಿಸಬೇಕು. ಸಾಧ್ಯವಾದರೆ, ಅತ್ಯುತ್ತಮ ಪ್ರಯತ್ನದ ಆಧಾರದ ಮೇಲೆ, ದೋಷ ಸರಿಪಡಿಸಲು ಬ್ಯಾಂಕ್ ಪ್ರಯತ್ನಿಸುತ್ತದೆ.
- ಅಲರ್ಟ್‌ಗಳು ಅಥವಾ ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳನ್ನು ಪಡೆಯಲು ಬಯಸುವ ಮೊಬೈಲ್ ನಂಬರ್ ಮತ್ತು/ಅಥವಾ ಇಮೇಲ್ ವಿಳಾಸದಲ್ಲಿ ಯಾವುದಾದರೂ ಬದಲಾವಣೆ ಆದರೆ ಗ್ರಾಹಕರು ಯಾವುದೇ ವಿಳಂಬ ಮಾಡದೇ ಬ್ಯಾಂಕ್‌ಗೆ ತಿಳಿಸಬೇಕು.
- ಖಾತೆಗೆ ಸಂಬಂಧಿಸಿದ ಎಲ್ಲಾ ಟ್ರಾನ್ಸಾಕ್ಷನ್‌ಗಳು ಅನ್ವಯವಾಗುವ ಬ್ಯಾಂಕಿಂಗ್ ಪದ್ಧತಿಗಳು ಹಾಗೂ ಗ್ರಾಹಕರ ಖಾತೆಗಳು ಮತ್ತು ಸಂಬಂಧಿತ ಸೇವೆಗಳನ್ನು ನಿಯಂತ್ರಿಸುವ ಬ್ಯಾಂಕ್‌ನ ಪ್ರಸ್ತುತ ನಿಯಮಗಳು, ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಡುವುದು ಮುಂದುವರೆಯುತ್ತದೆ. ಇದಲ್ಲದೆ, ಫೋನ್ ಬ್ಯಾಂಕಿಂಗ್ ಮತ್ತು ನೆಟ್ ಬ್ಯಾಂಕಿಂಗ್ ಸೇವೆಗಳಿಗೆ ಸಂಬಂಧಿಸಿದ ನಿಯಮ ಮತ್ತು ಷರತ್ತುಗಳು, ಸೂಕ್ತ ವ್ಯಾಪ್ತಿಯವರೆಗೆ, ಮೊಬೈಲ್ ಬ್ಯಾಂಕಿಂಗ್/ಅಲರ್ಟ್‌ಗಳ ಸೌಲಭ್ಯಕ್ಕೆ ಕೂಡ ಅನ್ವಯವಾಗುತ್ತವೆ.
- ಬ್ಯಾಂಕ್ ಸ್ವಇಚ್ಛೆಯಿಂದ ನಿರ್ಧರಿಸಿದಂತಿರುವ ಅರ್ಹತೆ ಮಾನದಂಡಗಳಿಗೆ ಒಳಪಟ್ಟು, ಮೊಬೈಲ್ ಬ್ಯಾಂಕಿಂಗ್/ಅಲರ್ಟ್‌ಗಳ ಸೌಲಭ್ಯಕ್ಕೆ ಗ್ರಾಹಕರು ಅಕ್ಸೆಸ್ ಕೋರಬಹುದು. ಬ್ಯಾಂಕ್ ಕಾಲಕಾಲಕ್ಕೆ ಸೂಚಿಸುವ ಅಥವಾ ಲಭ್ಯವಾಗಿಸುವ ವಿಧಾನದಲ್ಲಿ, ಯಾವ ಘಟನೆಗಳಿಗೆ ಸಂಬಂಧಿಸಿದಂತೆ ಅಲರ್ಟ್‌ಗಳನ್ನು ಕೊಡಬೇಕು ಎಂಬುದನ್ನು ಕೂಡ ಗ್ರಾಹಕರು ನಿರ್ದಿಷ್ಟಪಡಿಸಬಹುದು. ಬ್ಯಾಂಕ್ ತನ್ನ ವಿವೇಚನೆಯಿಂದ ಮತ್ತು ಯಾವುದೇ ಕಾರಣ ನೀಡದೆ ಅಂತಹ ಯಾವುದೇ ಅಪ್ಲಿಕೇಶನ್ ನಿರಾಕರಿಸುವ ಸಂಪೂರ್ಣ ಹಕ್ಕನ್ನು ಕಾಯ್ದಿರಿಸುತ್ತದೆ.

## 26. ಅನುಬಂಧ - ದೊಡ್ಡ ಗಾತ್ರದ ಪಾವತಿ ಸೇವೆಗಳು (ಪೇಪ್ರೋ)

1. ಪಾವತಿ ಪ್ಲಾಟ್‌ಫಾರ್ಮ್ ಮಾಡ್ಯೂಲ್ ಎಂಬುದು ಬ್ಯಾಂಕ್ ನೀಡುವ ವೆಬ್ ಆಧಾರಿತ ಪಾವತಿ ಸೇವೆಯಾಗಿದ್ದು, ಇದರಲ್ಲಿ ಗ್ರಾಹಕರು ಬ್ಯಾಂಕ್‌ಗೆ ಒದಗಿಸಿದ ಡೇಟಾದ ಆಧಾರದ ಮೇಲೆ ಗ್ರಾಹಕರ ಬ್ಯಾಂಕ್ ಖಾತೆಯಿಂದ ಕೆಲವು ಫಲಾನುಭವಿಗಳಿಗೆ ಹಣ ಕಳುಹಿಸಲು ಬ್ಯಾಂಕ್‌ಗೆ ಕೋರಿಕೆ ಸಲ್ಲಿಸಬಹುದು.
2. ಗ್ರಾಹಕರು ಎಕ್ಸಿಸ್ ಬ್ಯಾಂಕ್‌ನ ವಿವಿಧ ಉತ್ಪನ್ನಗಳಿಗೆ ಸಂಬಂಧಿಸಿದಂತೆ 'ಸಿಂಗಲ್ ಅಪ್‌ಲೋಡ್' ಸೌಲಭ್ಯಕ್ಕಾಗಿ ಪಾವತಿ ಪ್ಲಾಟ್‌ಫಾರ್ಮ್ ಮಾಡ್ಯೂಲ್ ಸೇವೆ ಪಡೆಯಲು ಇಚ್ಛಿಸಿದ್ದಾರೆ ಹಾಗೂ ಬ್ಯಾಂಕ್ ವಿಧಿಸಬಹುದಾದ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟು ಈ ಸೇವೆ ಪಡೆಯಲು ಬ್ಯಾಂಕನ್ನು ಸಂಪರ್ಕಿಸಿದ್ದಾರೆ. ಗ್ರಾಹಕರ ಖಾತೆಯಲ್ಲಿ ಸ್ಪಷ್ಟ ಫಂಡ್‌ಗಳ ಲಭ್ಯತೆಗೆ ಒಳಪಟ್ಟು ಗ್ರಾಹಕರ ಅವಶ್ಯಕತೆಗೆ ತಕ್ಕಂತೆ ಪಾವತಿ ಪ್ಲಾಟ್‌ಫಾರ್ಮ್ ಮಾಡ್ಯೂಲ್ ಅಡಿಯಲ್ಲಿ ಫಂಡ್ ಟ್ರಾನ್ಸ್‌ಫರ್, ಐಎಂಪಿಎಸ್, ಎನ್‌ಇಎಫ್‌ಟಿ, ಆರ್‌ಟಿಜಿಎಸ್, ಚೆಕ್ ಪ್ರಿಂಟಿಂಗ್, ಡಿಮ್ಯಾಂಡ್ ಡ್ರಾಫ್ಟ್ ಪ್ರಿಂಟಿಂಗ್, ನಗದು ಡೆಲಿವರಿ ಕರೆಸ್ಪಾಂಡಿಂಗ್ ಚೆಕ್ ಮತ್ತು ಕರೆಸ್ಪಾಂಡಿಂಗ್ ಡಿಡಿ ರೀತಿಯ ಸೇವೆಗಳನ್ನು ಒದಗಿಸಲು ಬ್ಯಾಂಕ್ ಒಪ್ಪಿದೆ.

3. ಫಂಡ್ ಟ್ರಾನ್ಸ್‌ಫರ್, ಐಎಂಪಿಎಸ್, ಎನ್‌ಇಎಫ್‌ಟಿ, ಆರ್‌ಟಿಜಿಎಸ್, ಚೆಕ್ ಪ್ರಿಂಟಿಂಗ್, ಡಿಮ್ಯಾಂಡ್ ಡ್ರಾಫ್ಟ್ ಪ್ರಿಂಟಿಂಗ್, ಕರೆಸ್ಪಾಂಡೆಂಟ್ ಚೆಕ್ ಮತ್ತು ಕರೆಸ್ಪಾಂಡೆಂಟ್ ಡಿಡಿ, ಕ್ಯಾಶ್ ಡೆಲಿವರಿ ಫೈಲ್‌ಗಳು ಹಾಗೂ ಸಾಫ್ಟ್‌ವೇರ್ ಮೂಲಕ ನೀಡಲಾಗುವ ಇತರ ಸೇವೆಗಳ ಪ್ರಕ್ರಿಯೆಗಳನ್ನು ನಡೆಸಲು ಪಾವತಿ ಪ್ಲಾಟ್‌ಫಾರ್ಮ್ ಸಾಫ್ಟ್‌ವೇರ್ ಈ ಬ್ಯಾಂಕ್‌ಗೆ ಅವಕಾಶ ನೀಡುತ್ತದೆ ಹಾಗೂ ತದನಂತರ ಗ್ರಾಹಕರು ಇಂಟರ್‌ನೆಟ್ ಮೂಲಕ ಫೈಲ್‌ಗಳನ್ನು ಅಪ್‌ಲೋಡ್ ಮಾಡಬಹುದಾಗಿದೆ.
4. ಗ್ರಾಹಕರು ಅನುಸರಿಸಬೇಕಾದ ಅಪ್‌ಲೋಡ್ ಪ್ರಕ್ರಿಯೆಯನ್ನು ಈ ಕೆಳಗೆ ವಿವರವಾಗಿ ತಿಳಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಯಾವುದೇ ಮಾರ್ಪಾಡು ಮಾಡಲು ಅನುಮತಿ ಇಲ್ಲ.
5. ಪ್ರಕ್ರಿಯೆಯ ವಿಧಾನಕ್ಕೆ ಅನುಗುಣವಾಗಿ ಗ್ರಾಹಕರು ಅಪ್‌ಲೋಡ್ ಮಾಡಿದ ವಿವರಗಳ ಆಧಾರದ ಮೇಲೆ ಮಾತ್ರ, ತಮ್ಮ ಪರವಾಗಿ ಚೆಕ್/ಡಿಡಿ ಮುದ್ರಿಸಲು ಮತ್ತು/ಅಥವಾ ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಹಣ ವರ್ಗಾವಣೆ/ಐಎಂಪಿಎಸ್ ಟ್ರಾನ್ಸಾಕ್ಷನ್ ಕಾರ್ಯಗತಗೊಳಿಸಲು ಗ್ರಾಹಕರು ಈ ಮೂಲಕ ಎಕ್ಸಿಸ್ ಬ್ಯಾಂಕ್‌ಗೆ ಅಧಿಕಾರ ನೀಡುತ್ತಾರೆ. ಇಂಟರ್‌ನೆಟ್ ಅಥವಾ ಬೇರೆ ಯಾವುದೇ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗೆ ಸಂಬಂಧಿಸಿದ ಯಾವುದೇ ವಿಫಲತೆ ಅಥವಾ ವಿಳಂಬಕ್ಕೆ ಬ್ಯಾಂಕ್ ಮೇಲೆ ಹೊಣೆ ಹೊರಿಸುವುದಿಲ್ಲ ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ, ಆದರೆ, ಅಂತಹ ವಿಫಲತೆಯು ಬ್ಯಾಂಕ್‌ನ ಘೋರ ಮತ್ತು ಉದ್ದೇಶಪೂರ್ವಕ ನಿರ್ಲಕ್ಷ್ಯದಿಂದ ಸಂಭವಿಸಿರಬಾರದು.
6. ಚೆಕ್ ಮುದ್ರಣಕ್ಕಾಗಿ ಗ್ರಾಹಕರು ಸಲ್ಲಿಸುವ ವಿನಂತಿಗಳಿಗೆ ಸಂಬಂಧಿಸಿದಂತೆ, ಸದರಿ ನಿರ್ದಿಷ್ಟ ಖಾತೆಯ ಅಡಿಯಲ್ಲಿ ಎಕ್ಸಿಸ್ ಬ್ಯಾಂಕ್ ಮುದ್ರಿಸಿದ ಚೆಕ್‌ಗಳನ್ನು ಮಾತ್ರ ಬ್ಯಾಂಕ್ ಮಾನ್ಯ ಮಾಡುತ್ತದೆ ಎಂಬುದಕ್ಕೆ ಗ್ರಾಹಕರು ಈ ಮೂಲಕ ಒಪ್ಪಿಗೆ ನೀಡುತ್ತಾರೆ. ಗ್ರಾಹಕರು ತಮ್ಮ ಮಾದರಿ ಸಹಿಯನ್ನು ಎಕ್ಸಿಸ್ ಬ್ಯಾಂಕ್‌ಗೆ ಒದಗಿಸಿದ್ದರೆ ಮತ್ತು ಆ ಸಹಿಯು ಗ್ರಾಹಕರು ಬ್ಯಾಂಕ್‌ಗೆ ಸಲ್ಲಿಸಿರುವ ಮಂಡಳಿಯ ನಿರ್ಣಯದ ನಿಯಮಗಳಿಗೆ ಅನುಗುಣವಾಗಿದ್ದರೆ, ಅಂತಹ ಮಾದರಿ ಸಹಿಗಳನ್ನು ಹೊಂದಿರುವ ದಾಖಲೆಗಳನ್ನು ಬ್ಯಾಂಕ್ ಅಂಗೀಕರಿಸುತ್ತದೆ ಎಂದು ಎರಡೂ ಪಾರ್ಟಿಗಳು ಒಪ್ಪಿಕೊಂಡಿದ್ದಾರೆ. ಮಾದರಿ ಸಹಿಗಳ ಆಧಾರದ ಮೇಲೆ ದಾಖಲೆಗಳನ್ನು ಅಂಗೀಕರಿಸುವ ಪ್ರಕ್ರಿಯೆಯು ಸಂಪೂರ್ಣವಾಗಿ ಗ್ರಾಹಕರ ಅಪಾಯ ಮತ್ತು ಜವಾಬ್ದಾರಿಗೆ ಒಳಪಟ್ಟಿರುತ್ತದೆ ಹಾಗೂ ಎಕ್ಸಿಸ್ ಬ್ಯಾಂಕ್ ಇದಕ್ಕೆ ಹೊಣೆಯಲ್ಲ. ಈ ಒಪ್ಪಂದದ ಅಡಿಯಲ್ಲಿ ಉದ್ದೇಶಿಸಲಾದ ವ್ಯವಸ್ಥೆಯ ಹೊರತಾಗಿ, ಎಕ್ಸಿಸ್ ಬ್ಯಾಂಕ್‌ನ ಇತರ ಶಾಖೆಗಳಲ್ಲಿ ಸಲ್ಲಿಕೆಯಾಗುವ ಎಲ್ಲಾ ಚೆಕ್‌ಗಳನ್ನು ಪಾವತಿಸದೆ ಹಿಂತಿರುಗಿಸಲಾಗುವುದು ಮತ್ತು ಅಂತಹ ಸಾಧನಗಳನ್ನು ಹಿಂತಿರುಗಿಸುವುದಕ್ಕೆ ಎಕ್ಸಿಸ್ ಬ್ಯಾಂಕ್ ಯಾವುದೇ ರೀತಿಯಲ್ಲಿ ಜವಾಬ್ದಾರ ಅಥವಾ ಹೊಣೆಗಾರ ಆಗಿರುವುದಿಲ್ಲ ಎಂಬುದಕ್ಕೆ ಗ್ರಾಹಕರು ಈ ಮೂಲಕ ಸಮ್ಮತಿಸುತ್ತಾರೆ. ಚೆಕ್, ಡಿಡಿ, ಕರೆಸ್ಪಾಂಡಿಂಗ್ ಚೆಕ್ ಅಥವಾ ಕರೆಸ್ಪಾಂಡಿಂಗ್ ಡಿಡಿಗಳನ್ನು ಎಕ್ಸಿಸ್ ಬ್ಯಾಂಕ್ ಮುದ್ರಿಸಿದ ನಂತರ, ಅವುಗಳನ್ನು ಗ್ರಾಹಕರಿಗೆ ಖುದ್ದಾಗಿ ತಲುಪಿಸಲಾಗುವುದು

ಅಥವಾ ಕೊರಿಯರ್ ಸೇವೆ ಅಥವಾ ಅಂಚೆಯ ಮೂಲಕ ಕಳುಹಿಸಲಾಗುವುದು ಎಂದು ಗ್ರಾಹಕರು ಈ ಮೂಲಕ ಒಪ್ಪುತ್ತಾರೆ. ಅಂತಹ ರವಾನೆಯು ಗ್ರಾಹಕರ ಸ್ವಂತ ಅಪಾಯ ಮತ್ತು ಜವಾಬ್ದಾರಿಯಲ್ಲಿರುತ್ತದೆ ಹಾಗೂ ಈ ನಿಯಮ ಮತ್ತು ಷರತ್ತುಗಳ ಉದ್ದೇಶಗಳಿಗಾಗಿ ಹೇಳಲಾದ ಕೊರಿಯರ್ ಸೇವೆ/ಪೋಸ್ಟ್ ಅನ್ನು ಗ್ರಾಹಕರ ಏಜೆಂಟ್ ಎಂದು ಪರಿಗಣಿಸಲಾಗುತ್ತದೆ ಎಂದು ಸ್ಪಷ್ಟವಾಗಿ ಒಪ್ಪಿಕೊಳ್ಳಲಾಗಿದೆ.

7. ಅಧಿಕೃತ ವ್ಯಕ್ತಿಯೇ ಡೇಟಾ ಅಪ್‌ಲೋಡ್ ಮಾಡುತ್ತಾರೆ ಎಂದು ಗ್ರಾಹಕರು ಈ ಮೂಲಕ ಭರವಸೆ ನೀಡುತ್ತಾರೆ ಮತ್ತು ಈ ಅಧಿಕಾರ ದೃಢೀಕರಿಸುವ ಮಂಡಳಿಯ ನಿರ್ಣಯದ ಪ್ರತಿಯನ್ನು ಗ್ರಾಹಕರು ಬ್ಯಾಂಕ್‌ಗೆ ಸಲ್ಲಿಸುತ್ತಾರೆ. ಬ್ಯಾಂಕಿನೊಂದಿಗೆ ತೆರೆಯಲಾದ ಖಾತೆಗಳಲ್ಲಿ ಅಧಿಕಾರಿಗಳ ಸಹಿಗಳನ್ನು ಕೂಡ ಅಪ್‌ಡೇಟ್ ಮಾಡಲಾಗುತ್ತದೆ.

8. ಬ್ಯಾಂಕಿನ ವಿರುದ್ಧ ಈ ನಿಯಮಗಳು ಮತ್ತು ಷರತ್ತುಗಳಲ್ಲಿ ಯಾವುದೇ ಸೂಚಿತ ಕರ್ತವ್ಯಗಳು ಅಥವಾ ಬಾಧ್ಯತೆಗಳನ್ನು ಓದಲಾಗಿಲ್ಲ ಅಥವಾ ಓದಲಾಗಿದೆ ಎಂದು ಭಾವಿಸಲಾಗುವುದಿಲ್ಲ. ಮೇಲೆ ತಿಳಿಸಿದಂತೆ ಹಣವನ್ನು ರವಾನಿಸುವ ಕರ್ತವ್ಯವನ್ನು ಹೊರತುಪಡಿಸಿ, ಗ್ರಾಹಕರು ಮತ್ತು/ಅಥವಾ ಫಲಾನುಭವಿಯ ನಡುವೆ ಮಾಡಿಕೊಳ್ಳಲಾದ ಯಾವುದೇ ಒಪ್ಪಂದ, ವ್ಯವಸ್ಥೆ ಅಥವಾ ತಿಳುವಳಿಕೆಯ ನಿಬಂಧನೆಗಳು ಬ್ಯಾಂಕ್ ಅನ್ನು ಬದ್ಧಗೊಳಿಸುವುದಿಲ್ಲ.

9. ಮೇಲ್ಕಂಡ ಸೈಟ್‌ನಲ್ಲಿ ಸ್ವೀಕರಿಸಿದ ವಿನಂತಿಗಳ ಸತ್ಯಾಸತ್ಯತೆ ಮತ್ತು/ಅಥವಾ ಸಿಂಧುತ್ವ ಮತ್ತು/ಅಥವಾ ದೃಢೀಕರಣವನ್ನು ಪರಿಶೀಲಿಸದೆಯೇ, ಪಾವತಿ ಪ್ಲಾಟ್‌ಫಾರ್ಮ್ ಮಾಡ್ಯೂಲ್‌ನಲ್ಲಿ ಅಂತಹ ವಿನಂತಿಗಳ ಮೇಲೆ ಕಾರ್ಯನಿರ್ವಹಿಸುವ ಹಕ್ಕನ್ನು ಬ್ಯಾಂಕ್ ಹೊಂದಿರುತ್ತದೆ ಮತ್ತು ಅಂತಹ ವಿನಂತಿಗಳನ್ನು ಗ್ರಾಹಕರಿಂದ ಬಂದ ಅಧಿಕೃತ, ಸಿಂಧುವಾದ ಮತ್ತು ಸರಿಯಾಗಿ ದೃಢೀಕರಿಸಲ್ಪಟ್ಟ ವಿನಂತಿಗಳೆಂದು ಪರಿಗಣಿಸಲಾಗುವುದು. ಪಾವತಿ ಪ್ಲಾಟ್‌ಫಾರ್ಮ್ ಮಾಡ್ಯೂಲ್ ಮೂಲಕ ಗ್ರಾಹಕರು ಬ್ಯಾಂಕ್‌ಗೆ ಸಲ್ಲಿಸುವ ಮೇಲ್ಕಂಡ ವಿನಂತಿಗಳಿಗೆ ಗ್ರಾಹಕರು ಇಲ್ಲಿ ಅಚಲವಾಗಿ ಮತ್ತು ಬೇಷರತ್ತಾಗಿ ಬದ್ಧರಾಗಿರಲು ಒಪ್ಪಿರುತ್ತಾರೆ ಹಾಗೂ ಸದರಿ ಸೈಟ್‌ಗೆ ಗ್ರಾಹಕರಿಂದಲೇ ಕಳುಹಿಸಲಾಗಿದೆ ಎಂದು ಕಂಡುಬರುವ ಅಂತಹ ಯಾವುದೇ ವಿನಂತಿಗಳ ಅಧಿಕೃತತೆ, ಸಿಂಧುತ್ವ ಅಥವಾ ದೃಢೀಕರಣ ಪ್ರಶ್ನಿಸಲು ಗ್ರಾಹಕರು ಹಕ್ಕು ಹೊಂದಿರುವುದಿಲ್ಲ.

10. ಒದಗಿಸಲಾದ ವೆಬ್ ಸೌಲಭ್ಯವನ್ನು ಬ್ಯಾಂಕ್ ನಿರ್ಧರಿಸಿದ ನಿರ್ದಿಷ್ಟ ಉದ್ದೇಶಕ್ಕಾಗಿ ಬಳಸಲಾಗುತ್ತದೆ ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ.

11. ಗ್ರಾಹಕರು ಕಾರ್ಯಗತಗೊಳಿಸಿದ ಟ್ರಾನ್ಸಾಕ್ಷನ್‌ಗಳ ವಿವರಗಳನ್ನು ಪಡೆಯುತ್ತಾರೆ ಮತ್ತು ಅಪ್‌ಲೋಡ್ ಮಾಡಲಾದ ಡೇಟಾದೊಂದಿಗೆ ಲಿಸ್ಟ್ ಕ್ರಾಸ್ ಚೆಕ್ ಮಾಡುವುದು ಗ್ರಾಹಕರ ಜವಾಬ್ದಾರಿಯಾಗಿರುತ್ತದೆ.

12. ಆನ್‌ಲೈನ್ ಪಾಸ್‌ವರ್ಡ್ ಜನರೇಶನ್ ಮತ್ತು ರಿಸೆಟ್ ಸೌಲಭ್ಯವನ್ನು ಪಡೆದರೆ (ದೊಡ್ಡ ಗಾತ್ರದ ಅಪ್‌ಲೋಡ್ ಸೌಲಭ್ಯ ಪಡೆಯುವ ಗ್ರಾಹಕರಿಗೆ ಮಾತ್ರ), ಪಾಸ್‌ವರ್ಡ್‌ಗಳನ್ನು ಕಳುಹಿಸಲು ನೀಡಲಾದ ಈ ಮಾಹಿತಿಯನ್ನು ಬ್ಯಾಂಕ್

ನೋಂದಾಯಿಸುತ್ತದೆ ಎಂದು ಅರ್ಥಮಾಡಿಕೊಳ್ಳಲಾಗುತ್ತದೆ. ಮೊಬೈಲ್ ನಂಬರ್ ಅಥವಾ ಇಮೇಲ್ ಐಡಿ ಅಥವಾ ಯಾವುದೇ ಬಳಕೆದಾರರ ಟೋಕನ್‌ನಲ್ಲಿನ ಯಾವುದೇ ಬದಲಾವಣೆಯನ್ನು ಅಂತಹ ಬದಲಾವಣೆ ಸಂಭವಿಸಿದಾಗ ಅಧಿಕೃತ ಸಹಿದಾರರು ಸಹಿ ಮಾಡಿದ ಲೆಟರ್ ಹೆಡ್‌ನಲ್ಲಿ ಬ್ಯಾಂಕ್‌ಗೆ ತಿಳಿಸತಕ್ಕದ್ದು. ತಡವಾದ ಮಾಹಿತಿಯ ಸಂದರ್ಭದಲ್ಲಿ ಅಥವಾ ನೋಂದಾಯಿತ ಮಾಹಿತಿಯನ್ನು ಬದಲಾಯಿಸಲು ಬ್ಯಾಂಕ್‌ಗೆ ಯಾವುದೇ ಮಾಹಿತಿ ಇಲ್ಲದಿದ್ದರೆ ಗ್ರಾಹಕರು ಬ್ಯಾಂಕ್‌ನ ಕ್ರಮಗಳಿಗೆ ಬ್ಯಾಂಕ್‌ಗೆ ನಷ್ಟ ಪರಿಹಾರ ನೀಡುತ್ತಾರೆ.

<u>ಗ್ರಾಹಕರ ಕಡೆಯಿಂದ ಫೈಲ್ ಅಪ್‌ಲೋಡ್‌ಗಳ ಪ್ರಕ್ರಿಯೆ.</u>

1. ಪಾವತಿ ಪ್ಲಾಟ್‌ಫಾರ್ಮ್ ಮಾಡ್ಯೂಲ್‌ನಲ್ಲಿ ಪೂರ್ವನಿರ್ಧರಿತ ಪರಸ್ಪರ ಒಪ್ಪಿದ ಫಾರ್ಮ್ಯಾಟ್‌ನಲ್ಲಿ ಕ್ಲೈಂಟ್ ನೇರವಾಗಿ ಡೇಟಾ ಅಪ್‌ಲೋಡ್ ಮಾಡುತ್ತಾರೆ. ಪ್ರತಿ ಕಾರ್ಪೊರೇಟ್‌ಗೆ ಒಂದಕ್ಕಿಂತ ಹೆಚ್ಚು ಉತ್ಪನ್ನಗಳನ್ನು ನಿಯೋಜಿಸಬಹುದು. ಗ್ರಾಹಕರು ಬಯಸಿದರೆ, ಒಂದೇ ಫೈಲ್ ಮೂಲಕ ವಿವಿಧ ಉತ್ಪನ್ನಗಳಿಗೆ ಸಂಬಂಧಿಸಿದ ಡೇಟಾ ಅಪ್‌ಲೋಡ್ ಮಾಡಬಹುದು.
2. ಡೇಟಾ ಅಪ್‌ಲೋಡ್ ಮಾಡಲು ಕಾರ್ಪೊರೇಟ್‌ಗಳು ಪಾವತಿ ಪ್ಲಾಟ್‌ಫಾರ್ಮ್‌ನ ವೆಬ್ ಇಂಟರ್‌ಫೇಸ್‌ಗೆ ಲಾಗಿನ್ ಮಾಡುವ ಮೂಲಕ ಎಲ್ಲಿಂದಲಾದರೂ ಡೇಟಾ ಅಪ್‌ಲೋಡ್ ಮಾಡಬಹುದು. ಪಾವತಿ ಪ್ಲಾಟ್‌ಫಾರ್ಮ್ ಅಕ್ಸೆಸ್ ಮಾಡಲು ಕಾರ್ಪೊರೇಟ್‌ಗೆ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಒದಗಿಸಲಾಗುತ್ತದೆ.
3. ಕಾರ್ಪೊರೇಟ್ ಬಳಕೆದಾರರನ್ನು ವ್ಯಾಖ್ಯಾನಿಸಲು ಮತ್ತು ಮಾಸ್ಟರ್ ಸಂಬಂಧಿತ ಚಟುವಟಿಕೆಗಳನ್ನು ನಿರ್ವಹಿಸಲು ಎಕ್ಸಿಸ್ ಬ್ಯಾಂಕ್ ಅಡ್ಮಿನ್‌ಗೆ ಹಕ್ಕು ಇರುತ್ತದೆ. ಅಗತ್ಯಕ್ಕೆ ಅನುಗುಣವಾಗಿ, ಸೂಕ್ತ ಪ್ರಾಧಿಕಾರದಿಂದ ಅನುಮತಿ ಪಡೆದು ಬ್ಯಾಂಕ್‌ಗೆ ಬೇಕಾದ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಿದಲ್ಲಿ, ಕಾರ್ಪೊರೇಟ್‌ಗಳಿಗೆ ಇದೇ ರೀತಿಯ ಚಟುವಟಿಕೆಗಳನ್ನು ಸ್ವತಂತ್ರವಾಗಿ ನಿರ್ವಹಿಸಲು ಅವರಿಗೆ ಅದೇ ಹಕ್ಕುಗಳನ್ನು ನೀಡಬಹುದಾಗಿದೆ.
4. ಡೇಟಾದ ನಿಖರತೆ ಖಚಿತಪಡಿಸಿಕೊಳ್ಳಲು ಡೇಟಾ ಅಪ್‌ಲೋಡ್ ಮತ್ತು ದೃಢೀಕರಣಕ್ಕಾಗಿ ಮೇಕರ್ ಚೆಕರ್ ಪರಿಕಲ್ಪನೆ ಇರುತ್ತದೆ.
5. ನಿಗದಿತ ದೃಢೀಕರಣ ಮ್ಯಾಟ್ರಿಕ್ಸ್ ಪ್ರಕಾರ ಕಾರ್ಪೊರೇಟ್ ಫೈಲ್/ಗಳನ್ನು ಅಧಿಕೃತಗೊಳಿಸಬಹುದು/ತಿರಸ್ಕರಿಸಬಹುದು. ಲಾಗಿನ್ ಮಾಡಿದ ಬಳಕೆದಾರರು ಆಯ್ಕೆ ಮಾಡಿದ ಫೈಲ್ ಅಪ್‌ಲೋಡ್ ಮಾಡಲು ಹಕ್ಕು ಹೊಂದಿದ್ದಾರೆಯೇ ಎಂದು ಪರಿಶೀಲಿಸಲು ದೃಢೀಕರಣ ಮಾಡಲಾಗುತ್ತದೆ.
6. ಪ್ರಮುಖ ಮೌಲ್ಯಮಾಪನಗಳನ್ನು ಮಾಡಲಾಗುತ್ತದೆ. ಈ ಕೆಳಗಿನ ಅಂಶಗಳನ್ನು ಪರಿಶೀಲಿಸಲಾಗುತ್ತದೆ:

   a) ಒಂದೇ ಫೈಲ್ ಹೆಸರನ್ನು ಒಂದಕ್ಕಿಂತ ಹೆಚ್ಚು ಬಾರಿ ಅಪ್‌ಲೋಡ್ ಮಾಡಲು

ಅನುಮತಿಸಬಾರದು.

b) ಕ್ಲೈಂಟ್ ಪ್ರತಿ ಟ್ರಾನ್ಸಾಕ್ಷನ್‌ಗೆ ವಿಶಿಷ್ಟ ನಂಬರ್ ಒದಗಿಸಿದ ಪಕ್ಷದಲ್ಲಿ, ಒಂದಕ್ಕಿಂತ ಹೆಚ್ಚು ಬಾರಿ ಒಂದೇ ಟ್ರಾನ್ಸಾಕ್ಷನ್ ಅಪ್‌ಲೋಡ್ ಮಾಡಲು ಅವಕಾಶವಿಲ್ಲ.

c) ಕಾರ್ಪೊರೇಟ್ ಐಡಿ ಮತ್ತು ಕಾರ್ಪೊರೇಟ್ ಫಾರ್ಮ್ಯಾಟ್ ಹಾಗೂ ಪ್ರಾಡಕ್ಟ್ ಐಡಿ ಮೌಲ್ಯಮಾಪನ.

d) ಅಪ್‌ಲೋಡ್ ಮಾಡಲಾದ ಫೈಲ್‌ನಲ್ಲಿ ಪಾವತಿ ಮಾಡಲು ಅಗತ್ಯವಿರುವ ಕಡ್ಡಾಯ ಜಾಗಗಳನ್ನು ನೋಡಿ.

e) ಡೇಟಾ ಫೈಲ್‌ನಲ್ಲಿ ಒಂದೇ ಜಾಗಗಳಿಗೆ ಸೆಂಟ್ರಲ್ ಡೇಟಾಬೇಸ್ ಫಾರ್ಮ್ಯಾಟ್‌ನಲ್ಲಿ ನಿರ್ದಿಷ್ಟಪಡಿಸಿದ ಜಾಗದ ವಿಧ ಮತ್ತು ಜಾಗದ ಉದ್ದವನ್ನು ನೋಡಿ.

7. ಹಲವಾರು ಕಾರಣಗಳಿಂದಾಗಿ ಯಾವುದೇ ಫೈಲ್ ತಿರಸ್ಕೃತಗೊಂಡಲ್ಲಿ, ಎಕ್ಸಿಸ್ ಬ್ಯಾಂಕ್ ಸಿಸ್ಟಮ್ ಅದರ ಕಾರಣಗಳನ್ನು ತೋರಿಸುತ್ತದೆ ಹಾಗೂ ಗ್ರಾಹಕರು ಇವುಗಳನ್ನು ಸರಿಪಡಿಸಿ ಮತ್ತೊಮ್ಮೆ ಪರಿಷ್ಕೃತ ಡೇಟಾ ಅಪ್‌ಲೋಡ್ ಮಾಡಬಹುದು.

8. ಅಪ್‌ಲೋಡ್ ಮಾಡಲಾದ ಕಾರ್ಪೊರೇಟ್ ಡೇಟಾವು ಕಾರ್ಪೊರೇಟ್ ಖಾತೆ ನಂಬರ್ ಒಳಗೊಂಡಿರುತ್ತದೆ. ಅಪ್‌ಲೋಡ್ ಮಾಡಿದ ಕಾರ್ಪೊರೇಟ್ ಡೇಟಾದಲ್ಲಿ ಖಾತೆ ನಂಬರ್ ಇಲ್ಲದಿದ್ದರೆ, ಡೀಫಾಲ್ಟ್ ಮೌಲ್ಯವನ್ನು ಬಳಸಲಾಗುತ್ತದೆ, ಇದನ್ನು ಕಾರ್ಪೊರೇಟ್ ಮಾಸ್ಟರ್ ಟೇಬಲ್‌ನಿಂದ ಆಯ್ಕೆ ಮಾಡಲಾಗುತ್ತದೆ.

9. ಅಧಿಕೃತಗೊಳಿಸಿದ ಫೈಲ್‌ಗಳನ್ನು ಬ್ಯಾಂಕ್ ಪ್ರಕ್ರಿಯೆಗೊಳಿಸುತ್ತದೆ, ಅಂದರೆ, ಡೈರೆಕ್ಟ್ ಕ್ರೆಡಿಟ್‌ಗೆ ಸಂಬಂಧಿಸಿದ ಟ್ರಾನ್ಸಾಕ್ಷನ್‌ಗಳನ್ನು ಪಾವತಿ ಫೈಲ್‌ನಲ್ಲಿ ನಮೂದಿಸಲಾದ ಫಲಾನುಭವಿಯ ಖಾತೆ ನಂಬರ್ ಆಧಾರದ ಮೇಲೆ ಯಾವುದೇ ಅಡೆತಡೆಯಿಲ್ಲದೆ ಕಾರ್ಯಗತಗೊಳಿಸಲಾಗುತ್ತದೆ ಹಾಗೂ ಆಯಾ ಪಾವತಿ ವಿಧಾನಗಳಿಗೆ ನಿಗದಿಪಡಿಸಿದ ಕಟ್-ಆಫ್ ಸಮಯಕ್ಕಿಂತ ಸಾಕಷ್ಟು ಮುಂಚಿತವಾಗಿ ಕಾರ್ಪೊರೇಟ್ ಸಂಸ್ಥೆಯು ಅನುಮೋದನೆ ನೀಡಿದಲ್ಲಿ, ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಐಎಂಪಿಎಸ್/ನಗದು ವಿತರಣೆಯ ಟ್ರಾನ್ಸಾಕ್ಷನ್‌ಗಳನ್ನು ಸಹ ಸುಗಮವಾಗಿ ನಿರ್ವಹಿಸಲಾಗುವುದು.

10. ಈ ಒಪ್ಪಂದದ ಪ್ರಕಾರ, ಗ್ರಾಹಕರ ಚೆಕ್‌ಗಳು, ಡಿಮ್ಯಾಂಡ್ ಡ್ರಾಫ್ಟ್ ಅಥವಾ ಕರೆಸ್ಪಾಂಡಿಂಗ್ ಡಿಡಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಬ್ಯಾಂಕ್‌ನ ದೂರದ ಶಾಖೆಗಳು ಅಥವಾ ಗ್ರಾಹಕರೇ ಮುದ್ರಿಸಬಹುದು. ಬ್ಯಾಂಕ್‌ನ ನಿಯಂತ್ರಣ ಮೀರಿ ಉಂಟಾಗುವ ಯಾವುದೇ ತಾಂತ್ರಿಕ ದೋಷ ಅಥವಾ ನೆಟ್‌ವರ್ಕ್ ಸ್ಥಗಿತದ ಸಂದರ್ಭದಲ್ಲಿ, ನಮಗೆ ನೀಡಲಾದ ಸೌಲಭ್ಯಗಳು ಮತ್ತು ಪ್ರಯೋಜನಗಳನ್ನು ಅಂತಹ ಅವಧಿಯವರೆಗೆ ಅಮಾನತು ಮಾಡಲಾಗುವುದು ಹಾಗೂ ಈ ಸಂದರ್ಭದಲ್ಲಿ ಉಂಟಾಗುವ ಯಾವುದೇ ನಷ್ಟ, ಪರಿಹಾರ ಅಥವಾ ಇತರ ಪರಿಣಾಮಗಳಿಗೆ ಬ್ಯಾಂಕ್ ಯಾವುದೇ ರೀತಿಯಲ್ಲಿ ಹೊಣೆಯಲ್ಲ ಅಥವಾ ಜವಾಬ್ದಾರಿ ಹೊಂದಿರುವುದಿಲ್ಲ.

## 27. ಅನುಬಂಧ - ಹೋಸ್ಟ್ ಟು ಹೋಸ್ಟ್ ಪಾವತಿಗಳು

1. ಪಾವತಿ ಪ್ಲಾಟ್‌ಫಾರ್ಮ್ ಮಾಡ್ಯೂಲ್ ಎಂಬುದು ಬ್ಯಾಂಕ್ ನೀಡುವ ವೆಬ್ ಆಧಾರಿತ ಪಾವತಿ ಸೇವೆಯಾಗಿದ್ದು, ಇದರಲ್ಲಿ ಗ್ರಾಹಕರು ಬ್ಯಾಂಕ್‌ಗೆ ಒದಗಿಸಿದ ಡೇಟಾದ ಆಧಾರದ ಮೇಲೆ ಗ್ರಾಹಕರ ಬ್ಯಾಂಕ್ ಖಾತೆಯಿಂದ ಕೆಲವು ಫಲಾನುಭವಿಗಳಿಗೆ ಹಣ ಕಳುಹಿಸಲು ಬ್ಯಾಂಕ್‌ಗೆ ಕೋರಿಕೆ ಸಲ್ಲಿಸಬಹುದು.
2. ಗ್ರಾಹಕರು ಬ್ಯಾಂಕ್‌ನಿಂದ ನಿಗದಿಪಡಿಸಬಹುದಾದ ನಿಯಮ ಮತ್ತು ಷರತ್ತುಗಳ ಮೇಲೆ ಎಕ್ಸಿಸ್ ಬ್ಯಾಂಕ್‌ನ ವಿವಿಧ ಪ್ರಾಡಕ್ಟ್‌ಗಳಲ್ಲಿ ಸೇವೆ ಹೋಸ್ಟ್ ಮಾಡಲು ಪಾವತಿ ಪ್ಲಾಟ್‌ಫಾರ್ಮ್ ಮಾಡ್ಯೂಲ್ ಸೇವೆ ಪಡೆಯಲು ಬಯಸುತ್ತಾರೆ ಮತ್ತು ಅದಕ್ಕಾಗಿ ಬ್ಯಾಂಕನ್ನು ಸಂಪರ್ಕಿಸಿದ್ದಾರೆ. ಬ್ಯಾಂಕ್ ಅಂತಹ ಸೇವೆಗಳನ್ನು, ಅಂದರೆ ಫಂಡ್ ಟ್ರಾನ್ಸ್‌ಫರ್, ಐಎಂಪಿಎಸ್, ಎನ್‌ಇಎಫ್‌ಟಿ, ಆರ್‌ಟಿಜಿಎಸ್, ಸಂಬಳ ಮತ್ತು ಶಾಸನಬದ್ಧ ಪಾವತಿಗಳನ್ನು ಒದಗಿಸಲು ಒಪ್ಪಿದೆ.
3. ಗ್ರಾಹಕರ ಖಾತೆಯಲ್ಲಿ ಸಾಕಷ್ಟು ಹಣದ ಲಭ್ಯತೆಗೆ ಒಳಪಟ್ಟು, ಗ್ರಾಹಕರ ಅಗತ್ಯತೆಗಳಿಗೆ ಅನುಗುಣವಾಗಿ ಪಾವತಿ ಪ್ಲಾಟ್‌ಫಾರ್ಮ್ ಮಾಡ್ಯೂಲ್ ಅಡಿಯಲ್ಲಿ ಚೆಕ್ ಪ್ರಿಂಟಿಂಗ್, ಡಿಮ್ಯಾಂಡ್ ಡ್ರಾಫ್ಟ್ ಪ್ರಿಂಟಿಂಗ್, ಕೋರ್ ಚೆಕ್ ಮತ್ತು ಕೋರ್ ಡಿಡಿ.
4. ಪಾವತಿ ಪ್ಲಾಟ್‌ಫಾರ್ಮ್ ಸಾಫ್ಟ್‌ವೇರ್ ಮೂಲಕ ಗ್ರಾಹಕರು ಇಂಟರ್‌ನೆಟ್ ಬಳಸಿ ಫೈಲ್‌ಗಳನ್ನು ಅಪ್‌ಲೋಡ್ ಮಾಡಿದ ನಂತರ, ಫಂಡ್ ವರ್ಗಾವಣೆ, ಐಎಂಪಿಎಸ್, ಎನ್‌ಇಎಫ್‌ಟಿ, ಆರ್‌ಟಿಜಿಎಸ್, ಚೆಕ್ ಪ್ರಿಂಟಿಂಗ್, ಡಿಮ್ಯಾಂಡ್ ಡ್ರಾಫ್ಟ್ ಪ್ರಿಂಟಿಂಗ್, ಕರೆಸ್ಪಾಂಡಿಂಗ್ ಚೆಕ್ ಮತ್ತು ಕರೆಸ್ಪಾಂಡಿಂಗ್ ಡಿಡಿ, ಫೈಲ್‌ಗಳು ಹಾಗೂ ಸಾಫ್ಟ್‌ವೇರ್ ಮೂಲಕ ನೀಡಲಾಗುವ ಇತರ ಸೇವೆಗಳ ಪ್ರಕ್ರಿಯೆಯನ್ನು ವ್ಯವಸ್ಥೆಗೊಳಿಸಲು ಬ್ಯಾಂಕ್‌ಗೆ ಈ ಸಾಫ್ಟ್‌ವೇರ್ ಅನುವು ಮಾಡಿಕೊಡುತ್ತದೆ.
5. ಗ್ರಾಹಕರು ಅನುಸರಿಸಬೇಕಾದ ಅಪ್‌ಲೋಡ್ ಪ್ರಕ್ರಿಯೆಯನ್ನು ಈ ಕೆಳಗೆ ವಿವರವಾಗಿ ತಿಳಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಯಾವುದೇ ಮಾರ್ಪಾಡು ಮಾಡಲು ಅನುಮತಿ ಇಲ್ಲ.

<u>ಹೋಸ್ಟ್ ಟು ಹೋಸ್ಟ್ ಪ್ರಕ್ರಿಯೆಗಾಗಿ ಪ್ರಕ್ರಿಯೆ ವಿಧಾನ:</u>

I. ಎಕ್ಸಿಸ್ ಬ್ಯಾಂಕಿನೊಂದಿಗೆ ಒಪ್ಪಿದ ಫಾರ್ಮ್ಯಾಟ್ ಪ್ರಕಾರ ಪಾವತಿ ಟ್ರಾನ್ಸಾಕ್ಷನ್‌ಗಳನ್ನು ಗ್ರಾಹಕರ ಇಆರ್‌ಪಿ/ಸಾಫ್ಟ್‌ವೇರ್ ಜನರೇಟ್ ಮಾಡುತ್ತದೆ.

II. ಒಪ್ಪಿದ ಹೋಸ್ಟ್ ಟು ಹೋಸ್ಟ್ (H2H) ಏಕೀಕರಣ ಪ್ರಕ್ರಿಯೆಯ ಪ್ರಕಾರ ಎನ್‌ಕ್ರಿಪ್ಟ್ ಮಾಡಲಾದ ಪ್ರಕ್ರಿಯೆಯ ಮೂಲಕ ಪಾವತಿ ಟ್ರಾನ್ಸಾಕ್ಷನ್‌ಗಳನ್ನು ಎಕ್ಸಿಸ್ ಬ್ಯಾಂಕ್‌ಗೆ ಕಳುಹಿಸಲಾಗುತ್ತದೆ.

III. ಗ್ರಾಹಕರಿಂದ ಅಗತ್ಯ ದೃಢೀಕರಣಕ್ಕಾಗಿ ಎಕ್ಸಿಸ್ ಬ್ಯಾಂಕ್ ಪೋರ್ಟಲ್‌ನಲ್ಲಿ ಮಾನ್ಯ ಪಾವತಿ ಕೋರಿಕೆಗಳು ಲಭ್ಯವಿರುತ್ತವೆ.

IV. ಟ್ರಾನ್ಸಾಕ್ಷನ್ ವಿವರಗಳ ಪ್ರಕಾರ ಬ್ಯಾಂಕ್ ಕಡೆಯಿಂದ ಫಂಡ್ ಟ್ರಾನ್ಸ್‌ಫರ್ ಆಗಿ ಅಥವಾ ಆರ್‌ಬಿಐ/ಎನ್‌ಪಿಸಿಐ ಮೂಲಕ ಅಧಿಕೃತ ಪಾವತಿ ಟ್ರಾನ್ಸಾಕ್ಷನ್‌ಗಳನ್ನು ಪ್ರಕ್ರಿಯೆಗೊಳಿಸಲಾಗುತ್ತದೆ.

V. H2H ಏಕೀಕರಣದ ಮೂಲಕ ಗ್ರಾಹಕರ ಇಆರ್‌ಪಿ/ಸಾಫ್ಟ್‌ವೇರ್‌ನಲ್ಲಿ ಟ್ರಾನ್ಸಾಕ್ಷನ್‌ಗಳ ಸ್ಟೇಟಸ್/ಎಂಐಎಸ್/ವರದಿಯನ್ನು ಆಟೋಮ್ಯಾಟಿಕ್ ಆಗಿ ಒದಗಿಸಲಾಗುತ್ತದೆ

6. ಪ್ರಕ್ರಿಯೆಯ ವಿಧಾನಕ್ಕೆ ಅನುಗುಣವಾಗಿ ಗ್ರಾಹಕರು ಅಪ್‌ಲೋಡ್ ಮಾಡಿದ ವಿವರಗಳ ಆಧಾರದ ಮೇಲೆ ಮಾತ್ರ ಚೆಕ್‌ಗಳು/ಡಿಡಿ ಪ್ರಿಂಟ್ ಮಾಡಲು ಮತ್ತು/ಅಥವಾ ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಫಂಡ್ ವರ್ಗಾವಣೆ ಟ್ರಾನ್ಸಾಕ್ಷನ್‌ಗಳನ್ನು ಕಾರ್ಯಗತಗೊಳಿಸಲು ಗ್ರಾಹಕರು ಈ ಮೂಲಕ ಬ್ಯಾಂಕ್‌ಗೆ ಅಧಿಕಾರ ನೀಡುತ್ತಾರೆ. ಇಂಟರ್‌ನೆಟ್ ಅಥವಾ ಬೇರೆ ಯಾವುದೇ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗೆ ಸಂಬಂಧಿಸಿದ ಯಾವುದೇ ವಿಫಲತೆ ಅಥವಾ ವಿಳಂಬಕ್ಕೆ ಬ್ಯಾಂಕ್ ಮೇಲೆ ಹೊಣೆ ಹೊರಿಸುವುದಿಲ್ಲ ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ, ಆದರೆ, ಅಂತಹ ವಿಫಲತೆಯು ಬ್ಯಾಂಕ್‌ನ ಘೋರ ಮತ್ತು ಉದ್ದೇಶಪೂರ್ವಕ ನಿರ್ಲಕ್ಷ್ಯದಿಂದ ಸಂಭವಿಸಿರಬಾರದು.

7. ಚೆಕ್ ಮುದ್ರಣಕ್ಕಾಗಿ ಗ್ರಾಹಕರು ಸಲ್ಲಿಸುವ ವಿನಂತಿಗಳಿಗೆ ಸಂಬಂಧಿಸಿದಂತೆ, ಸದರಿ ನಿರ್ದಿಷ್ಟ ಖಾತೆಯ ಅಡಿಯಲ್ಲಿ ಬ್ಯಾಂಕ್ ಮುದ್ರಿಸಿದ ಚೆಕ್‌ಗಳನ್ನು ಮಾತ್ರ ಬ್ಯಾಂಕ್ ಮಾನ್ಯ ಮಾಡುತ್ತದೆ ಎಂಬುದಕ್ಕೆ ಗ್ರಾಹಕರು ಈ ಮೂಲಕ ಒಪ್ಪಿಗೆ ನೀಡುತ್ತಾರೆ. ಗ್ರಾಹಕರು ತಮ್ಮ ಮಾದರಿ ಸಹಿಯನ್ನು ಬ್ಯಾಂಕ್‌ಗೆ ಒದಗಿಸಿದ್ದರೆ ಮತ್ತು ಆ ಸಹಿಯು ಗ್ರಾಹಕರು ಬ್ಯಾಂಕ್‌ಗೆ ಸಲ್ಲಿಸಿರುವ ಮಂಡಳಿಯ ನಿರ್ಣಯದ ನಿಯಮಗಳಿಗೆ ಅನುಗುಣವಾಗಿದ್ದರೆ, ಅಂತಹ ಮಾದರಿ ಸಹಿಗಳನ್ನು ಹೊಂದಿರುವ ದಾಖಲೆಗಳನ್ನು ಬ್ಯಾಂಕ್ ಅಂಗೀಕರಿಸುತ್ತದೆ ಎಂದು ಎರಡೂ ಪಾರ್ಟಿಗಳು ಒಪ್ಪಿಕೊಂಡಿದ್ದಾರೆ. ಮಾದರಿ ಸಹಿಗಳ ಆಧಾರದ ಮೇಲೆ ದಾಖಲೆಗಳನ್ನು ಅಂಗೀಕರಿಸುವ ಪ್ರಕ್ರಿಯೆಯು ಸಂಪೂರ್ಣವಾಗಿ ಗ್ರಾಹಕರ ಅಪಾಯ ಮತ್ತು ಜವಾಬ್ದಾರಿಗೆ ಒಳಪಟ್ಟಿರುತ್ತದೆ ಹಾಗೂ ಬ್ಯಾಂಕ್ ಇದಕ್ಕೆ ಹೊಣೆಯಲ್ಲ. ಈ ಒಪ್ಪಂದದ ಅಡಿಯಲ್ಲಿ ಉದ್ದೇಶಿಸಲಾದ ವ್ಯವಸ್ಥೆಯ ಹೊರತಾಗಿ, ಬ್ಯಾಂಕ್‌ನ ಇತರ ಶಾಖೆಗಳಲ್ಲಿ ಸಲ್ಲಿಕೆಯಾಗುವ ಎಲ್ಲಾ ಚೆಕ್‌ಗಳನ್ನು ಪಾವತಿಸದೆ ಹಿಂತಿರುಗಿಸಲಾಗುವುದು ಮತ್ತು ಅಂತಹ ಸಾಧನಗಳನ್ನು ಹಿಂತಿರುಗಿಸುವುದಕ್ಕೆ ಬ್ಯಾಂಕ್ ಯಾವುದೇ ರೀತಿಯಲ್ಲಿ ಜವಾಬ್ದಾರ ಅಥವಾ ಹೊಣೆಗಾರ ಆಗಿರುವುದಿಲ್ಲ ಎಂಬುದಕ್ಕೆ ಗ್ರಾಹಕರು ಈ ಮೂಲಕ ಸಮ್ಮತಿಸುತ್ತಾರೆ. ಬ್ಯಾಂಕ್ ಕಡೆಯಿಂದ ಚೆಕ್, ಡಿಡಿ, ಕರೆಸ್ಪಾಂಡಿಂಗ್ ಚೆಕ್, ಕರೆಸ್ಪಾಂಡಿಂಗ್ ಡಿಡಿ ಮುದ್ರಿಸಿದ ನಂತರ, ಅವುಗಳನ್ನು ಕೊರಿಯರ್ ಸೇವೆಯ ಮೂಲಕ ಅಥವಾ ಪೋಸ್ಟ್ ಮೂಲಕ ಗ್ರಾಹಕರಿಗೆ ಹಸ್ತಾಂತರಿಸಲಾಗುತ್ತದೆ ಅಥವಾ ರವಾನಿಸಲಾಗುತ್ತದೆ ಎಂದು ಗ್ರಾಹಕರು ಒಪ್ಪುತ್ತಾರೆ. ಅಂತಹ ರವಾನೆಯು ಗ್ರಾಹಕರ ಸ್ವಂತ ಅಪಾಯ ಮತ್ತು ಜವಾಬ್ದಾರಿಯಲ್ಲಿರುತ್ತದೆ ಹಾಗೂ ಈ ನಿಯಮ ಮತ್ತು ಷರತ್ತುಗಳ ಉದ್ದೇಶಗಳಿಗಾಗಿ ಹೇಳಲಾದ ಕೊರಿಯರ್ ಸೇವೆ/ಪೋಸ್ಟ್ ಅನ್ನು ಗ್ರಾಹಕರ ಏಜೆಂಟ್ ಎಂದು ಪರಿಗಣಿಸಲಾಗುತ್ತದೆ ಎಂದು ಸ್ಪಷ್ಟವಾಗಿ ಒಪ್ಪಿಕೊಳ್ಳಲಾಗಿದೆ.

8. ಅಧಿಕೃತ ವ್ಯಕ್ತಿಯೇ ಡೇಟಾ ಅಪ್‌ಲೋಡ್ ಮಾಡುತ್ತಾರೆ ಎಂದು ಗ್ರಾಹಕರು ಈ ಮೂಲಕ ಭರವಸೆ ನೀಡುತ್ತಾರೆ ಮತ್ತು ಈ ಅಧಿಕಾರ ದೃಢೀಕರಿಸುವ ಮಂಡಳಿಯ ನಿರ್ಣಯದ ಪ್ರತಿಯನ್ನು ಗ್ರಾಹಕರು ಬ್ಯಾಂಕ್‌ಗೆ ಸಲ್ಲಿಸುತ್ತಾರೆ. ಬ್ಯಾಂಕಿನೊಂದಿಗೆ ತೆರೆಯಲಾದ ಖಾತೆಗಳಲ್ಲಿ ಅಧಿಕಾರಿಗಳ ಸಹಿಗಳನ್ನು ಕೂಡ ಅಪ್‌ಡೇಟ್ ಮಾಡಲಾಗುತ್ತದೆ.

9. ಬ್ಯಾಂಕಿನ ವಿರುದ್ಧ ಈ ನಿಯಮಗಳು ಮತ್ತು ಷರತ್ತುಗಳಲ್ಲಿ ಯಾವುದೇ ಸೂಚಿತ ಕರ್ತವ್ಯಗಳು ಅಥವಾ ಬಾಧ್ಯತೆಗಳನ್ನು ಒದಲಾಗಿಲ್ಲ ಅಥವಾ ಒದಲಾಗಿದೆ ಎಂದು ಭಾವಿಸಲಾಗುವುದಿಲ್ಲ. ಮೇಲೆ ತಿಳಿಸಿದಂತೆ ಹಣವನ್ನು ರವಾನಿಸುವ ಕರ್ತವ್ಯವನ್ನು ಹೊರತುಪಡಿಸಿ, ಗ್ರಾಹಕರು ಮತ್ತು/ಅಥವಾ ಫಲಾನುಭವಿಯ ನಡುವೆ ಮಾಡಿಕೊಳ್ಳಲಾದ ಯಾವುದೇ ಒಪ್ಪಂದ, ವ್ಯವಸ್ಥೆ ಅಥವಾ ತಿಳುವಳಿಕೆಯ ನಿಬಂಧನೆಗಳು ಬ್ಯಾಂಕ್ ಅನ್ನು ಬದ್ಧಗೊಳಿಸುವುದಿಲ್ಲ.
10. ಮೇಲ್ಕಂಡ ಸೈಟ್‌ನಲ್ಲಿ ಬ್ಯಾಂಕಿನಿಂದ ಸ್ವೀಕರಿಸಿದ ವಿನಂತಿಗಳ ಸತ್ಯಾಸತ್ಯತೆ ಮತ್ತು/ಅಥವಾ ಸಿಂಧುತ್ವ ಮತ್ತು/ಅಥವಾ ದೃಢೀಕರಣವನ್ನು ಪರಿಶೀಲಿಸದೆಯೇ, ಪಾವತಿ ಪ್ಲಾಟ್‌ಫಾರ್ಮ್ ಮಾಡ್ಯೂಲ್‌ನಲ್ಲಿ ಅಂತಹ ವಿನಂತಿಗಳ ಮೇಲೆ ಕಾರ್ಯನಿರ್ವಹಿಸುವ ಹಕ್ಕನ್ನು ಬ್ಯಾಂಕ್ ಹೊಂದಿರುತ್ತದೆ ಮತ್ತು ಅಂತಹ ವಿನಂತಿಗಳನ್ನು ಗ್ರಾಹಕರಿಂದ ಬಂದ ಅಧಿಕೃತ, ಸಿಂಧುವಾದ ಮತ್ತು ಸರಿಯಾಗಿ ದೃಢೀಕರಿಸಲ್ಪಟ್ಟ ವಿನಂತಿಗಳೆಂದು ಪರಿಗಣಿಸಲಾಗುವುದು. ಗ್ರಾಹಕರು ಇದರ ಮೂಲಕ ಒಪ್ಪಿಕೊಳ್ಳುವುದು ಏನೆಂದರೆ ಹೋಸ್ಟ್ ಟು ಹೋಸ್ಟ್ ಸೇವೆಯ ಮೂಲಕ ಗ್ರಾಹಕರು ಬ್ಯಾಂಕ್‌ಗೆ ಸಲ್ಲಿಸಿದ ಮೇಲ್ಕಂಡ ವಿನಂತಿಗಳಿಗೆ ಗ್ರಾಹಕರು ಬದಲಾಯಿಸಲಾಗದಂತೆ ಮತ್ತು ಬೇಷರತ್ತಾಗಿ ಬದ್ಧರಾಗಿರುತ್ತಾರೆ ಹಾಗೂ ಮೇಲೆ ತಿಳಿಸಲಾದ ಸೈಟ್‌ಗೆ ಗ್ರಾಹಕರಿಂದಲೇ ಕಳುಹಿಸಲಾಗಿದೆ ಎಂದು ಕಂಡುಬರುವ ಅಂತಹ ಯಾವುದೇ ವಿನಂತಿಗಳ ಅಧಿಕೃತತೆ, ಸಿಂಧುತ್ವ ಅಥವಾ ದೃಢೀಕರಣವನ್ನು ಪ್ರಶ್ನಿಸಲು ಗ್ರಾಹಕರು ಅರ್ಹರಾಗಿರುವುದಿಲ್ಲ.
11. ಹೋಸ್ಟ್ ಟು ಹೋಸ್ಟ್ ಸೇವೆಯನ್ನು ಒಳಗೊಂಡಂತೆ ತಮಗೆ ನೀಡಲಾಗುವ ವೆಬ್ ಸೌಲಭ್ಯವನ್ನು ಬ್ಯಾಂಕ್ ನಿರ್ಧರಿಸಿದ ನಿರ್ದಿಷ್ಟ ಉದ್ದೇಶಕ್ಕಾಗಿ ಮಾತ್ರ ಬಳಸಲಾಗುತ್ತದೆ ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ.
12. ಗ್ರಾಹಕರು ರಿವರ್ಸ್ ಫೀಡ್ ಅಥವಾ ಇತರೆ ರೀತಿಯಲ್ಲಿ ಕಾರ್ಯಗತಗೊಳಿಸಿದ ಟ್ರಾನ್ಸಾಕ್ಷನ್‌ಗಳ ವಿವರಗಳನ್ನು ಪಡೆಯುತ್ತಾರೆ ಮತ್ತು ಟ್ರಾನ್ಸಾಕ್ಷನ್ ಡೇಟಾದೊಂದಿಗೆ ಲಿಸ್ಟ್ ಕ್ರಾಸ್ ಚೆಕ್ ಮಾಡುವುದು ಗ್ರಾಹಕರ ಜವಾಬ್ದಾರಿಯಾಗಿರುತ್ತದೆ.
13. ಆನ್‌ಲೈನ್ ಪಾಸ್‌ವರ್ಡ್ ಜನರೇಶನ್ ಮತ್ತು ರಿಸೆಟ್ ಸೌಲಭ್ಯ ಪಡೆದರೆ, ಪಾಸ್‌ವರ್ಡ್‌ಗಳನ್ನು ಕಳುಹಿಸಲು ನೀಡಲಾದ ಈ ಮಾಹಿತಿಯನ್ನು ಬ್ಯಾಂಕ್ ನೋಂದಣಿ ಮಾಡುತ್ತದೆ ಎಂಬುದನ್ನು ಅರ್ಥೈಸಲಾಗಿದೆ. ಮೊಬೈಲ್ ನಂಬರ್ ಅಥವಾ ಇಮೇಲ್ ಐಡಿ ಅಥವಾ ಯಾವುದೇ ಬಳಕೆದಾರರ ಟೋಕನ್‌ನಲ್ಲಿನ ಯಾವುದೇ ಬದಲಾವಣೆಯನ್ನು ಅಂತಹ ಬದಲಾವಣೆ ಸಂಭವಿಸಿದಾಗ ಅಧಿಕೃತ ಸಹಿದಾರರು ಸಹಿ ಮಾಡಿದ ಲೆಟರ್ ಹೆಡ್‌ನಲ್ಲಿ ಬ್ಯಾಂಕ್‌ಗೆ ತಿಳಿಸತಕ್ಕದ್ದು. ತಡವಾದ ಮಾಹಿತಿಯ ಸಂದರ್ಭದಲ್ಲಿ ಅಥವಾ ನೋಂದಾಯಿತ ಮಾಹಿತಿಯನ್ನು ಬದಲಾಯಿಸಲು ಬ್ಯಾಂಕ್‌ಗೆ ಯಾವುದೇ ಮಾಹಿತಿ ಇಲ್ಲದಿದ್ದರೆ ಗ್ರಾಹಕರು ಬ್ಯಾಂಕ್‌ನ ಕ್ರಮಗಳಿಗೆ ಬ್ಯಾಂಕ್‌ಗೆ ನಷ್ಟ ಪರಿಹಾರ ನೀಡುತ್ತಾರೆ.
14. ಹಾನಿಗಳು, ದುರುಪಯೋಗ, ಅನಧಿಕೃತ ಅಕ್ಸೆಸ್ ಮತ್ತು ಕಳ್ಳತನದಿಂದ ವ್ಯವಸ್ಥೆಯ ಅಡಿಯಲ್ಲಿ ಒದಗಿಸಲಾದ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ರಕ್ಷಿಸಲು ಗ್ರಾಹಕರು ಒಪ್ಪುತ್ತಾರೆ.

15. ಯಾವುದೇ ಬದಲಾವಣೆಯ ಸಂದರ್ಭದಲ್ಲಿ, ಗ್ರಾಹಕರು ಪರಸ್ಪರ ಒಪ್ಪಿದಂತೆ ಅಂತಹ ಸಮಯದೊಳಗೆ ಬ್ಯಾಂಕ್‌ಗೆ ತಿಳಿಸುತ್ತಾರೆ.
16. ಬ್ಯಾಂಕ್ ಮತ್ತು ಗ್ರಾಹಕರ ನಡುವಿನ ಸಿಸ್ಟಮ್‌ಗಳ ಮಧ್ಯೆ ಡೇಟಾ ವಿನಿಮಯ ಸುಗಮಗೊಳಿಸಲು, ಗ್ರಾಹಕರು ತಮ್ಮ ಆವರಣದಲ್ಲಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳ ನಿಯೋಜನೆ, ಬದಲಾವಣೆ ಮತ್ತು ಆಯಾ ಕಾಲಕ್ಕೆ ನಡೆಯುವ ನಿರ್ವಹಣೆಗಾಗಿ, ಎಕ್ಸಿಸ್ ಬ್ಯಾಂಕ್‌ನ ಅಧಿಕಾರಿಗಳಿಗೆ ಮತ್ತು ಅದರ ಅಧಿಕೃತ ಪ್ರತಿನಿಧಿಗಳಿಗೆ ಪರಸ್ಪರ ಅನುಕೂಲಕರವಾದ ಸಮಯದಲ್ಲಿ ಮುಕ್ತವಾಗಿ ಅಕ್ಸೆಸ್ ಮಾಡುವುದಕ್ಕೆ ಅನುಮತಿಸಲು ಈ ಮೂಲಕ ಒಪ್ಪುತ್ತಾರೆ.
17. ಈ ಸೇವೆಯನ್ನು ನಿಲ್ಲಿಸಿದ ಸಂದರ್ಭದಲ್ಲಿ, ಈ ವ್ಯವಸ್ಥೆಯ ಅಡಿಯಲ್ಲಿ ಗ್ರಾಹಕರಿಗೆ ಬ್ಯಾಂಕ್ ಒದಗಿಸಿದ ಎಲ್ಲಾ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಅನ್ನು ಬ್ಯಾಂಕ್ ಹಿಂಪಡೆಯುತ್ತದೆ.
18. ಈ ಸೇವೆ ಸ್ಥಗಿತಗೊಂಡ ಸಂದರ್ಭದಲ್ಲಿ, ಗ್ರಾಹಕರು ತಮ್ಮ ಹಾರ್ಡ್‌ವೇರ್ ಸಿಸ್ಟಮ್‌ಗಳಲ್ಲಿ ಬ್ಯಾಂಕ್ ಅಥವಾ ಅದರ ಪ್ರತಿನಿಧಿಗಳು ಅಳವಡಿಸಿರುವ ಎಲ್ಲಾ ಸಾಫ್ಟ್‌ವೇರ್‌ಗಳನ್ನು ತಕ್ಷಣವೇ ಮತ್ತು ಶಾಶ್ವತವಾಗಿ ನಾಶಪಡಿಸಲು ಒಪ್ಪುತ್ತಾರೆ ಹಾಗೂ ಈ ಸಿಸ್ಟಮ್‌ನಲ್ಲಿ ಬ್ಯಾಂಕ್ ಒದಗಿಸಿರುವ ಸಾಫ್ಟ್‌ವೇರ್ ಮತ್ತು ಡಾಕ್ಯುಮೆಂಟ್‌ಗಳನ್ನು ಒಳಗೊಂಡಿರುವ ಎಲ್ಲಾ ಮೀಡಿಯಾಗಳನ್ನು ಬ್ಯಾಂಕ್‌ಗೆ ಹಿಂತಿರುಗಿಸಲು ಒಪ್ಪುತ್ತಾರೆ.
19. ಗ್ರಾಹಕರ ಇಆರ್‌ಪಿ/ಅಪ್ಲಿಕೇಶನ್‌ನಿಂದ ಟ್ರಾನ್ಸಾಕ್ಷನ್‌ಗಳು ಪ್ರಾರಂಭವಾದರೆ ಮತ್ತು ಗ್ರಾಹಕರ ಸೂಚನೆಗಳ ಆಧಾರದ ಮೇಲೆ ಅಂತಹ ಸೂಚನೆಗಳನ್ನು ಬ್ಯಾಂಕ್ ಸ್ವೀಕರಿಸಿದರೆ ಯಾವುದೇ ಹೆಚ್ಚಿನ ಅಧಿಕೃತ ಅನುಮೋದನೆಯ ಅಗತ್ಯವಿಲ್ಲದೆ 'ನೇರ-ಪ್ರಕ್ರಿಯೆ' ಮೂಲಕ ಸುಗಮವಾಗಿ ಎಕ್ಸಿಸ್ ಬ್ಯಾಂಕ್ ಈ H2H ವಹಿವಾಟುಗಳನ್ನು 'ಮುಂಚಿತ ಅನುಮೋದಿತ' ಟ್ರಾನ್ಸಾಕ್ಷನ್‌ಗಳು ಎಂದು ಪರಿಗಣಿಸಿ ಪ್ರಕ್ರಿಯೆಗೊಳಿಸುತ್ತದೆ ಎಂದು ಗ್ರಾಹಕರು ಈ ಮೂಲಕ ಒಪ್ಪುತ್ತಾರೆ ಮತ್ತು ದೃಢೀಕರಿಸುತ್ತಾರೆ. ಅಂತಹ ಸಂದರ್ಭದಲ್ಲಿ, ಗ್ರಾಹಕರ ಸೂಚನೆಗಳನ್ನು ಆಧರಿಸಿ ಬ್ಯಾಂಕ್ ಸದ್ಭಾವನೆಯಿಂದ ಕ್ರಮ ಕೈಗೊಂಡಿರುವ ಕಾರಣದಿಂದ ಗ್ರಾಹಕರಿಗೆ ಯಾವುದೇ ನಷ್ಟ/ಹಾನಿ ಉಂಟಾದಲ್ಲಿ, ಅದಕ್ಕೆ ಬ್ಯಾಂಕನ್ನು ಯಾವುದೇ ರೀತಿಯಲ್ಲೂ ಜವಾಬ್ದಾರರನ್ನಾಗಿ ಅಥವಾ ಹೊಣೆಗಾರರನ್ನಾಗಿ ಮಾಡುವಂತಿಲ್ಲ.

## 28. ಅನುಬಂಧ - ಸೇವೆ ಕೋರಿಕೆಗಳು

1. **ಮೊಬೈಲ್ ನಂಬರ್ ಅಪ್‌ಡೇಟ್ ಮಾಡುವುದು:** ಖಾತೆಗೆ ಸಂಬಂಧಿಸಿದ ಯಾವುದೇ ಸಂವಹನ ಮತ್ತು ಟ್ರಾನ್ಸಾಕ್ಷನ್ ಸಲಹೆ ಕಳುಹಿಸಲು ಬ್ಯಾಂಕ್ ದಾಖಲೆಗಳಲ್ಲಿ ಮೊಬೈಲ್ ನಂಬರ್ ಅಪ್‌ಡೇಟ್ ಮಾಡಬಹುದು. ಯಾವುದೇ ಟ್ರಾನ್ಸಾಕ್ಷನ್‌ನ ಸತ್ಯಾಸತ್ಯತೆ ಖಚಿತಪಡಿಸಿಕೊಳ್ಳಲು ಎಕ್ಸಿಸ್ ಬ್ಯಾಂಕ್‌ಗೆ ಸೂಕ್ತ ಎನಿಸುವ ವೆರಿಫಿಕೇಶನ್, ಕಾಲ್ ಬ್ಯಾಕ್‌ಗಳು ಅಥವಾ ತಪಾಸಣೆಗಳನ್ನು ನಡೆಸಲು, ಅಪ್‌ಡೇಟ್ ಆದ ಮೊಬೈಲ್ ನಂಬರ್ ಮೂಲಕ ನನ್ನನ್ನು ಸಂಪರ್ಕಿಸಲು ನಾನು ಬ್ಯಾಂಕ್‌ಗೆ ಅಧಿಕಾರ ನೀಡುತ್ತಿದ್ದೇನೆ. ಈ ಮೊಬೈಲ್ ನಂಬರ್ ನನಗೆ ಮಾತ್ರ ಸೇರಿದೆ ಮತ್ತು ಇದನ್ನು ಯಾವುದೇ ಥರ್ಡ್ ಪಾರ್ಟಿ ಬಳಸುತ್ತಿಲ್ಲ

ಎಂದು ನಾನು ಖಚಿತಪಡಿಸುತ್ತೇನೆ. ಮೊಬೈಲ್ ನಂಬರ್ ಬದಲಾದಾಗ ನಾನು ಸರಿಯಾಗಿ ಮತ್ತು ತ್ವರಿತವಾಗಿ ಬ್ಯಾಂಕ್‌ಗೆ ತಿಳಿಸುತ್ತೇನೆ ಎಂದು ನಾನು ಒಪ್ಪುತ್ತೇನೆ.

2. **ಸ್ಕೀಮ್ ಕೋಡ್ ಪರಿವರ್ತನೆ:** ನಾವು ಆಯ್ಕೆ ಮಾಡಿರುವ ಹೊಸ ಸ್ಕೀಮ್ ಕೋಡ್‌ಗೆ ಸಂಬಂಧಿಸಿದ ಫೀಚರ್‌ಗಳು ಮತ್ತು ಶುಲ್ಕದ ರಚನೆಯನ್ನು ಓದಿ ಅರ್ಥಮಾಡಿಕೊಂಡಿದ್ದೇವೆ ಹಾಗೂ ಇದು ಮುಂದಿನ ಶುಲ್ಕದ ಚಕ್ರದಿಂದ, ಅಂದರೆ ಮುಂದಿನ ತಿಂಗಳ 1 ನೇ ತಾರೀಖಿನಿಂದ ಜಾರಿಗೆ ಬರಲಿದೆ.
3. **ಇಮೇಲ್ ಐಡಿ ಅಪ್‌ಡೇಟ್ ಮಾಡುವುದು:** ಇಮೇಲ್ ಐಡಿಯನ್ನು ಖಾತೆ ಮಟ್ಟದಲ್ಲಿ ಅಪ್‌ಡೇಟ್ ಮಾಡಬಹುದು. ಬ್ಯಾಂಕ್‌ನಿಂದ ಖಾತೆ ಸ್ಟೇಟ್‌ಮೆಂಟ್ ಮತ್ತು ಸಂವಹನಗಳನ್ನು ಈ ನೋಂದಾಯಿತ ಇಮೇಲ್ ಐಡಿಗೆ ಕಳುಹಿಸಲಾಗುತ್ತದೆ. ಇಮೇಲ್ ಐಡಿ ಅಪ್‌ಡೇಟ್ ಮಾಡುವುದರ ಆಧಾರದ ಮೇಲೆ, ಭೌತಿಕ ಸ್ಟೇಟ್‌ಮೆಂಟ್ ಕಳುಹಿಸುವುದನ್ನು ನಿಲ್ಲಿಸಲಾಗುತ್ತದೆ.
4. **ಚೆಕ್ ಬುಕ್ ಕೋರಿಕೆ:** ಅನ್ವಯವಾಗುವ ಚೆಕ್ ಬುಕ್ ಶುಲ್ಕಗಳನ್ನು ಪಾವತಿಸಲು ನಾನು ಒಪ್ಪುತ್ತೇನೆ ಮತ್ತು ಈ ಮೊತ್ತವನ್ನು ನನ್ನ ಎಕ್ಸಿಸ್ ಬ್ಯಾಂಕ್ ಖಾತೆಯಿಂದ ಕಡಿತಗೊಳಿಸಲಾಗುವುದು
5. **ಚೆಕ್ ಪಾವತಿ ನಿಲ್ಲಿಸುವುದು:** ಸಿಂಗಲ್ ಚೆಕ್ ನಿಲ್ಲಿಸಲು, ಚೆಕ್ ಆಯ್ಕೆಮಾಡಿ ಮತ್ತು ಪಾವತಿ ನಿಲ್ಲಿಸಲು ಆ ಚೆಕ್ ನಂಬರ್ ನಮೂದಿಸಿ. ಒಂದು ಶ್ರೇಣಿಯ ಅನೇಕ ಚೆಕ್‌ಗಳನ್ನು ನಿಲ್ಲಿಸಲು, "ಸಿಂಗಲ್ ಚೆಕ್" ಆಯ್ಕೆಮಾಡಿ ಮತ್ತು ನೀವು ನಿಲ್ಲಿಸಲು ಬಯಸುವ ಚೆಕ್ ಶ್ರೇಣಿ ನಮೂದಿಸಿ. ನಿಮಗೆ ಚೆಕ್ ನಂಬರ್ ನೆನಪಿಲ್ಲದಿದ್ದರೆ, "ಚೆಕ್ ನಂಬರ್ ಹುಡುಕಿ ಮತ್ತು ಪಾವತಿ ನಿಲ್ಲಿಸಿ" ಆಯ್ಕೆಮಾಡಿ. ನಿಮ್ಮ ಕೋರಿಕೆಯನ್ನು ತಕ್ಷಣವೇ ಪ್ರಕ್ರಿಯೆಗೊಳಿಸಲಾಗುತ್ತದೆ. ಸಲ್ಲಿಸಿದ ನಂತರ ಕೋರಿಕೆ ಹಿಂಪಡೆಯಲು ಸಾಧ್ಯವಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ.

6. **ಜಿಎಸ್‌ಟಿಐಎನ್ ಅಪ್‌ಡೇಶನ್:**

1. ನಾನು/ನಾವು ಈ ಮೂಲಕ ಇದಕ್ಕೆ ಎಕ್ಸಿಸ್ ಬ್ಯಾಂಕ್ ಲಿಮಿಟೆಡ್‌ಗೆ ("ಬ್ಯಾಂಕ್") ಇವುಗಳಿಗಾಗಿ ನನ್ನ/ನಮ್ಮ ಸ್ಪಷ್ಟ ಒಪ್ಪಿಗೆ ಮತ್ತು ಅಧಿಕಾರ ನೀಡುತ್ತೇವೆ:
    1. ಬ್ಯಾಂಕ್‌ನಿಂದ ನೇಮಕಗೊಂಡ ಸೇವಾ ಪೂರೈಕೆದಾರರಾದ ಕರ್ಜಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ("ಕರ್ಜಾ") ಅವರೊಂದಿಗೆ ವಿವರಗಳನ್ನು ಹಂಚಿಕೊಳ್ಳುವ ಉದ್ದೇಶಕ್ಕಾಗಿ ನನ್ನ/ನಮ್ಮ ಪ್ಯಾನ್ ನಂಬರ್ ಬಳಸಲು, ಆಕ್ಸೆಸ್ ಮಾಡಲು, ಪ್ರಕ್ರಿಯೆಗೊಳಿಸಲು ಮತ್ತು ಸಂಗ್ರಹಿಸಲು [ನನ್ನ/ನಮ್ಮ ಜಿಎಸ್‌ಟಿಐಎನ್ ನಂಬರ್, ಜಿಎಸ್‌ಟಿಐಎನ್ ಸ್ಟೇಟಸ್, ನೋಂದಾಯಿತ ಮೊಬೈಲ್ ನಂಬರ್, ನೋಂದಾಯಿತ ಇಮೇಲ್ ಐಡಿ ಮತ್ತು ವಿಳಾಸದ ಮಾಹಿತಿಯನ್ನು ("ಜಿಎಸ್‌ಟಿಐಎನ್ ಡೇಟಾ") ಜಿಎಸ್‌ಟಿ ಪೋರ್ಟಲ್‌ನಿಂದ ಪಡೆದುಕೊಳ್ಳಲು ಕರ್ಜಾ ಗೆ ಅನುವು ಮಾಡಿಕೊಡಲು ಹಾಗೂ ಈ ಜಿಎಸ್‌ಟಿಐಎನ್ ಡೇಟಾವನ್ನು ಬ್ಯಾಂಕ್ ಮತ್ತು ಅದರ

ಅಂಗಸಂಸ್ಥೆಗಳೊಂದಿಗೆ ಹಂಚಿಕೊಳ್ಳಲು, ವರ್ಗಾಯಿಸಲು ಮತ್ತು ಬಹಿರಂಗಪಡಿಸಲು] ಮತ್ತು,

2. ಬ್ಯಾಂಕ್ ಮತ್ತು ಅದರ ಗುಂಪು ಅಂಗಸಂಸ್ಥೆಗಳು [ಬ್ಯಾಂಕ್ ಮತ್ತು ಅದರ ಗುಂಪು ಅಂಗಸಂಸ್ಥೆಗಳ ಉತ್ಪನ್ನಗಳು ಮತ್ತು ಸೇವೆಗಳ ಗುಣಮಟ್ಟವನ್ನು ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಸುಧಾರಿಸುವ, ಕ್ರೆಡಿಟ್ ಮೌಲ್ಯಮಾಪನ, ಕ್ರೆಡಿಟ್ ಬ್ಯೂರೋ ಪರಿಶೀಲನೆಗಳು, ಕ್ರೆಡಿಟ್ ಸ್ಕೋರಿಂಗ್ ಮಾದರಿಗಳು ಮತ್ತು ವ್ಯವಹಾರ ತಂತ್ರಗಳನ್ನು ಅಭಿವೃದ್ಧಿಪಡಿಸುವುದು, ವಂಚನೆ ಪತ್ತೆ ಮತ್ತು ಹಣ ವರ್ಗಾವಣೆ ವಿರೋಧಿ ಜವಾಬ್ದಾರಿಗಳಿಗಾಗಿ ಮತ್ತು ಕ್ರೆಡಿಟ್ ಮಾಹಿತಿ ಕಂಪನಿಗಳು, ಮಾಹಿತಿ ಯುಟಿಲಿಟಿಗಳು, ಇತರ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ಮತ್ತು ನಿಯಂತ್ರಕ ಪ್ರಾಧಿಕಾರಗಳು, ತನಿಖಾ ಏಜೆನ್ಸಿಗಳು, ನ್ಯಾಯಾಂಗ, ಅರೆ-ನ್ಯಾಯಾಂಗ ಮತ್ತು ಶಾಸನಬದ್ಧ ಪ್ರಾಧಿಕಾರಗಳಿಗೆ ಜಿಎಸ್‌ಟಿಐಎನ್ ಡೇಟಾವನ್ನು ಹಂಚಿಕೊಳ್ಳಲು ಮತ್ತು ಬಹಿರಂಗಪಡಿಸಲು] ಜಿಎಸ್‌ಟಿಐಎನ್ ಡೇಟಾ ಬಳಸಲು, ಅಕ್ಸೆಸ್ ಮಾಡಲು, ಪ್ರಕ್ರಿಯೆಗೊಳಿಸಲು, ಸ್ಟೋರ್ ಮಾಡಲು, ಪರಿಶೀಲಿಸಲು, ಪ್ರೊಫೈಲ್, ವಿಶ್ಲೇಷಿಸಲು, ಹಂಚಿಕೊಳ್ಳಲು, ವರ್ಗಾವಣೆ ಮಾಡಲು ಮತ್ತು ಬಹಿರಂಗಪಡಿಸಲು].

2. ಕರ್ಜಾ ಸಂಸ್ಥೆಯು ಜಿಎಸ್‌ಟಿಐಎನ್ ಡೇಟಾವನ್ನು ಯಾವುದೇ ರೀತಿಯಲ್ಲಿ ಉಲ್ಲಂಘಿಸಿದರೆ ಅಥವಾ ದುರುಪಯೋಗ ಮಾಡಿದರೆ ಅದಕ್ಕೆ ಬ್ಯಾಂಕ್ ಹೊಣೆಯಲ್ಲ ಎಂದು ನಾನು/ನಾವು ಒಪ್ಪಿಕೊಳ್ಳುತ್ತೇವೆ ಹಾಗೂ ಕರ್ಜಾ ಸಂಸ್ಥೆಯು ಬಳಸುವ ನನ್ನ/ನಮ್ಮ ಜಿಎಸ್‌ಟಿಐಎನ್ ಡೇಟಾವನ್ನು ಯಾವುದೇ ರೀತಿಯಲ್ಲಿ ಆಡಿಟ್ ಮಾಡುವ, ಮೇಲ್ವಿಚಾರಣೆ ಮಾಡುವ, ಮರುಪರಿಶೀಲಿಸುವ ಅಥವಾ ಮೌಲ್ಯಮಾಪನ ಮಾಡುವ ಜವಾಬ್ದಾರಿ ಬ್ಯಾಂಕ್‌ಗೆ ಇರುವುದಿಲ್ಲ ಎಂಬುದನ್ನು ನಾನು/ನಾವು ದೃಢೀಕರಿಸುತ್ತೇವೆ ಮತ್ತು ಒಪ್ಪಿಕೊಳ್ಳುತ್ತೇವೆ.

**7. ಐಇ ಕೋಡ್ ಅಪ್‌ಡೇಶನ್:**

1. ನಾನು/ನಾವು ಈ ಮೂಲಕ ಇದಕ್ಕೆ ಎಕ್ಸಿಸ್ ಬ್ಯಾಂಕ್ ಲಿಮಿಟೆಡ್‌ಗೆ ("ಬ್ಯಾಂಕ್") ನನ್ನ/ನಮ್ಮ ಸ್ಪಷ್ಟ ಒಪ್ಪಿಗೆ ಮತ್ತು ಅಧಿಕಾರ ನೀಡುತ್ತೇವೆ:

   (a) ಬ್ಯಾಂಕ್‌ನಿಂದ ತೊಡಗಿಸಿಕೊಂಡಿರುವ ಸೇವಾ ಪೂರೈಕೆದಾರರಾದ ಜೋಕಾಟಾ ಹಣಕಾಸು ಸಲಹಾ ಮತ್ತು ತಂತ್ರಜ್ಞಾನ ("ಜೋಕಾಟಾ") ಜೊತೆಗೆ ಹಂಚಿಕೊಳ್ಳುವ ಉದ್ದೇಶಗಳಿಗಾಗಿ ನನ್ನ/ನಮ್ಮ ಐಇಸಿ ನಂಬರ್ ಬಳಸಲು, ಅಕ್ಸೆಸ್ ಮಾಡಲು, ಪ್ರಕ್ರಿಯೆಗೊಳಿಸಲು ಮತ್ತು ಸಂಗ್ರಹಿಸಲು, [ಡಿಜಿಎಫ್‌ಟಿ ಪೋರ್ಟಲ್‌ನಿಂದ ನನ್ನ ಐಇಸಿ ನಂಬರ್, ಐಇಸಿ ಸ್ಟೇಟಸ್ ಪಡೆಯುವುದಕ್ಕೆ ಜೋಕಾಟಾ ಗೆ ಅವಕಾಶ ನೀಡಲು ಹಾಗೂ ಬ್ಯಾಂಕ್ ಮತ್ತು ಅದರ ಗುಂಪು ಅಂಗಸಂಸ್ಥೆಗಳೊಂದಿಗೆ ಐಇಸಿ ಡೇಟಾ ಹಂಚಿಕೊಳ್ಳಲು, ವರ್ಗಾಯಿಸಲು ಮತ್ತು ಬಹಿರಂಗಪಡಿಸಲು] ಮತ್ತು

(b) ಐಇಸಿ ಡೇಟಾವನ್ನು ಹಲವಾರು ಉದ್ದೇಶಗಳಿಗಾಗಿ [ಬ್ಯಾಂಕ್ ಮತ್ತು ಅದರ ಅಂಗಸಂಸ್ಥೆಗಳ ಉತ್ಪನ್ನ ಹಾಗೂ ಸೇವೆಗಳ ಗುಣಮಟ್ಟದ ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಸುಧಾರಣೆ ಮಾಡಲು, ಸಾಲದ ಮೌಲ್ಯಮಾಪನ, ಕ್ರೆಡಿಟ್ ಬ್ಯೂರೋ ಪರಿಶೀಲನೆ, ಕ್ರೆಡಿಟ್ ಸ್ಕೋರಿಂಗ್ ಮಾದರಿಗಳು ಮತ್ತು ವ್ಯವಹಾರ ತಂತ್ರಗಳನ್ನು ಅಭಿವೃದ್ಧಿಪಡಿಸಲು, ವಂಚನೆ ಪತ್ತೆ ಮತ್ತು ಅಕ್ರಮ ಹಣ ವರ್ಗಾವಣೆ ತಡೆಗಟ್ಟುವ ಜವಾಬ್ದಾರಿಗಳಿಗಾಗಿ, ಹಾಗೂ ಐಇಸಿ ಡೇಟಾವನ್ನು ಕ್ರೆಡಿಟ್ ಮಾಹಿತಿ ಕಂಪನಿಗಳು, ಮಾಹಿತಿ ಸಾಧನಗಳು, ಇತರ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಹಾಗೂ ನಿಯಂತ್ರಕ ಸಂಸ್ಥೆಗಳು, ತನಿಖಾ ಸಂಸ್ಥೆಗಳು, ನ್ಯಾಯಾಂಗ, ಅರೆ-ನ್ಯಾಯಾಂಗ ಮತ್ತು ಶಾಸನಬದ್ಧ ಪ್ರಾಧಿಕಾರಗಳೊಂದಿಗೆ ಹಂಚಿಕೊಳ್ಳಲು ಮತ್ತು ಬಹಿರಂಗಪಡಿಸಲು] ಬ್ಯಾಂಕ್ ಮತ್ತು ಅದರ ಅಂಗಸಂಸ್ಥೆಗಳು [ಬಳಸಲು, ಅಕ್ಸೆಸ್ ಮಾಡಲು, ಪ್ರಕ್ರಿಯೆಗೊಳಿಸಲು, ಸಂಗ್ರಹಿಸಲು, ವೆರಿಫೈ ಮಾಡಲು, ಪ್ರೊಫೈಲ್ ಮಾಡಲು, ವಿಶ್ಲೇಷಿಸಲು, ಹಂಚಿಕೊಳ್ಳಲು, ವರ್ಗಾಯಿಸಲು ಮತ್ತು ಬಹಿರಂಗಪಡಿಸಲು].

2. ಜೋಕಾಟಾ ಸಂಸ್ಥೆಯು ಐಇಸಿ ಡೇಟಾವನ್ನು ಯಾವುದೇ ರೀತಿಯಲ್ಲಿ ದುರ್ಬಳಕೆ ಮಾಡಿಕೊಂಡರೆ ಅಥವಾ ಅದರ ಭದ್ರತೆಗೆ ಧಕ್ಕೆ ತಂದರೆ, ಅದಕ್ಕೆ ಬ್ಯಾಂಕ್ ಹೊಣೆಯಲ್ಲ ಅಥವಾ ಜವಾಬ್ದಾರರಲ್ಲ ಎಂದು ನಾನು/ನಾವು ಈ ಮೂಲಕ ಒಪ್ಪಿಕೊಳ್ಳುತ್ತೇವೆ ಹಾಗೂ ಜೋಕಾಟಾ ಸಂಸ್ಥೆಯು ನನ್ನ/ನಮ್ಮ ಐಇಸಿ ಡೇಟಾವನ್ನು ಬಳಸುವ ವಿಧಾನವನ್ನು ಪರಿಶೀಲಿಸುವ, ಮೇಲ್ವಿಚಾರಣೆ ಮಾಡುವ ಅಥವಾ ಮೌಲ್ಯಮಾಪನ ಮಾಡುವ ಯಾವುದೇ ಬಾಧ್ಯತೆ ಬ್ಯಾಂಕ್‌ಗೆ ಇರುವುದಿಲ್ಲ ಎಂಬುದನ್ನು ನಾನು/ನಾವು ಒಪ್ಪುತ್ತೇವೆ ಮತ್ತು ದೃಢೀಕರಿಸುತ್ತೇವೆ.

8. **ಟಿಒಡಿ (ತಾತ್ಕಾಲಿಕ ಓವರ್ ಡ್ರಾಫ್ಟ್)**

ಬಿಡುಗಡೆ ಮಾಡಲಾದ ಓವರ್‌ಡ್ರಾಫ್ಟ್ ಮೊತ್ತವನ್ನು ಮೇಲಿನ ಉದ್ದೇಶಕ್ಕಾಗಿ ಮಾತ್ರ ಬಳಸಲಾಗುವುದು ಮತ್ತು ಇದನ್ನು ಸಂಧಾನ, ವೈಯಕ್ತಿಕ ವ್ಯಾಪಾರ, ಅಡಮಾನವಿಟ್ಟ ಸೆಕ್ಯೂರಿಟಿಗಳು/ಮ್ಯೂಚುಯಲ್ ಫಂಡ್‌ಗಳು/ಡಿಬೆಂಚರ್‌ಗಳಲ್ಲಿ ಹೂಡಿಕೆ ಮಾಡಲು ಬಳಸುವುದಿಲ್ಲ ಎಂದು ನಾವು ಖಚಿತಪಡಿಸುತ್ತೇವೆ ಹಾಗೂ ಮೇಲೆ ತಿಳಿಸಲಾದ ದಿನದಂದೇ ಈ ಓವರ್‌ಡ್ರಾಫ್ಟ್ ಕ್ರಮಬದ್ಧಗೊಳಿಸುತ್ತೇವೆ ಎಂದು ನಾವು ಈ ಮೂಲಕ ಒಪ್ಪಿಕೊಳ್ಳುತ್ತೇವೆ. ಇದಲ್ಲದೇ, ಪಾವತಿ ಮತ್ತು/ಅಥವಾ ಸಾಂಸ್ಥಿಕ ಟ್ರಾನ್ಸಾಕ್ಷನ್‌ಗಳ ಸಂಬಂಧವಾಗಿ 'ಟಿಒಡಿ' ನೀಡಿದಾಗ ಬ್ಯಾಂಕ್‌ಗೆ ಉಂಟಾಗಬಹುದಾದ ಯಾವುದೇ ನಷ್ಟ, ಅಪಾಯ ಅಥವಾ ಹಾನಿಯಿಂದ ಬ್ಯಾಂಕನ್ನು ರಕ್ಷಿಸಲು ಮತ್ತು ಅದಕ್ಕೆ ಪರಿಹಾರ ನೀಡಲು ನಾವು ಈ ಮೂಲಕ ಒಪ್ಪುತ್ತೇವೆ. ನಿಮ್ಮ ಬೇಡಿಕೆಯ ಮೇರೆಗೆ, ಕಾಲಕಾಲಕ್ಕೆ ಬ್ಯಾಂಕ್ ನಿಗದಿಪಡಿಸುವ ಗರಿಷ್ಠ ಸಾಲದ ಬಡ್ಡಿದರ ಮತ್ತು ಅನ್ವಯವಾಗುವ ಸಂದರ್ಭಗಳಲ್ಲಿ ವಿಳಂಬ ಪಾವತಿಯ ಬಡ್ಡಿಯೊಂದಿಗೆ ಅಂತಹ ನಷ್ಟ/ಅಪಾಯ/ಹಾನಿಗೆ

ಪರಿಹಾರ ನೀಡಲು ನಾವು ಹೊಣೆಗಾರರಾಗಿರುತ್ತೇವೆ. ಪಾವತಿಗೆ ಸಂಬಂಧಿಸಿದ ಟಿಒಡಿ ಸಂದರ್ಭದಲ್ಲಿ ಸೆಟಲ್‌ಮೆಂಟ್ ಖಾತೆಯಿಂದ ಹಣ ವರ್ಗಾವಣೆ ಮಾಡಲು ಅಥವಾ ಬ್ಯಾಂಕ್‌ಗೆ ಪಾವತಿಸಬೇಕಾದ ಟಿಒಡಿ ಬಾಧ್ಯತೆಯಲ್ಲಿ ಯಾವುದೇ ಕೊರತೆ ಆದಲ್ಲಿ, ಕಂಪನಿಯು ಬ್ಯಾಂಕ್‌ನಲ್ಲಿ ಹೊಂದಿರುವ ಯಾವುದೇ ಖಾತೆಯಿಂದ ಹಣ ವರ್ಗಾವಣೆ ಮಾಡಲು ನಮ್ಮ ಬದಲಾಯಿಸಲಾಗದ ಅಧಿಕಾರವನ್ನು ಸ್ವೀಕರಿಸಬೇಕೆಂದು ನಾವು ವಿನಂತಿಸುತ್ತೇವೆ. ಈ ವರ್ಗಾವಣೆಯನ್ನು ಖಾತೆದಾರರ ಅಪಾಯ ಮತ್ತು ಪರಿಣಾಮದಲ್ಲಿ ಮಾತ್ರ ಮಾಡಲಾಗುತ್ತದೆ. ಕಾಲಕಾಲಕ್ಕೆ ಜಾರಿಯಲ್ಲಿರುವ ಬ್ಯಾಂಕ್‌ನ ನಿಯಮಗಳನ್ನು ನಾವು ಪಾಲಿಸುತ್ತೇವೆ. ಯಾವುದೇ ಶುಲ್ಕಗಳಿದ್ದಲ್ಲಿ, ಬ್ಯಾಂಕ್‌ನಲ್ಲಿರುವ ನಮ್ಮ ನಿಗದಿತ ಖಾತೆಯಿಂದ ಅವುಗಳನ್ನು ಡೆಬಿಟ್ ಮಾಡಲು ನೀವು ಈ ಮೂಲಕ ಅನುಮತಿ ಪಡೆದಿದ್ದೀರಿ. ಈ ಸೌಲಭ್ಯವನ್ನು ಕಾಲಕಾಲಕ್ಕೆ ಬ್ಯಾಂಕ್ ವಿಧಿಸುವ ದರದಲ್ಲಿ ಒದಗಿಸಲಾಗುವುದು ಎಂದು ನಾವು ಅರ್ಥಮಾಡಿಕೊಂಡಿದ್ದೇವೆ.

## 29. ಎಕ್ಸಿಸ್ ಮೊಬೈಲ್ ಕಾರ್ಪೊರೇಟ್‌ನಲ್ಲಿ ಎಂಪಿನ್ ಮೂಲಕ ಲಾಗಿನ್ ಮಾಡಿ ನೋಂದಣಿ:

ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನ್ ನೋಂದಣಿಯ ಪ್ರಕ್ರಿಯೆಯಲ್ಲಿ ಬಳಕೆದಾರರಿಗೆ ಎಂಪಿನ್ ಸೆಟ್ ಮಾಡಲು ಕೇಳಲಾಗುತ್ತದೆ ಮತ್ತು ಬಳಕೆದಾರರು ತಮ್ಮದೇ ಅಪಾಯ ಮತ್ತು ಪರಿಣಾಮಗಳಲ್ಲಿ ಸಾಧ್ಯವಾದಷ್ಟು ಸಲ ಎಂಪಿನ್ ಬದಲಾಯಿಸಲು ಸ್ವಾತಂತ್ರ್ಯ ಹೊಂದಿದ್ದಾರೆ. ಹೀಗೆ ಬದಲಾಯಿಸಿದ ಎಂಪಿನ್ ಬಗ್ಗೆ ಗೌಪ್ಯತೆ ಕಾಪಾಡಿಕೊಳ್ಳುವುದು ಬಳಕೆದಾರರ ಏಕಮಾತ್ರ ಜವಾಬ್ದಾರಿ ಆಗಿದೆ ಮತ್ತು ಅಧಿಕೃತ ಬಳಕೆದಾರರನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿಯು ಈ ಎಂಪಿನ್ ದುರುಪಯೋಗ ಮಾಡಿದರೆ ಅದಕ್ಕೆ ಯಾವುದೇ ರೀತಿಯಲ್ಲಿ ಈ ಬ್ಯಾಂಕ್ ಹೊಣೆಯಲ್ಲ.

ಮೊಬೈಲ್ ಬ್ಯಾಂಕಿಂಗ್ ಸೌಲಭ್ಯದ ದುರುಪಯೋಗ/ಅನಧಿಕೃತ ಬಳಕೆಯ ಪರಿಣಾಮವಾಗಿ ಬಳಕೆದಾರರು ಎದುರಿಸುವ ನಷ್ಟವನ್ನು ಒಳಗೊಂಡಂತೆ ಇದರ ಕುರಿತು ಬ್ಯಾಂಕ್ ಯಾವುದೇ ಜವಾಬ್ದಾರಿ ವಹಿಸುವುದಿಲ್ಲ.

ಬಳಕೆದಾರರು ಎಂಪಿನ್ ಮರೆತುಹೋದರೆ, ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನ್‌ನಲ್ಲಿ ಹೊಸ ಎಂಪಿನ್ ರಿಸೆಟ್ ಮಾಡುವ ಫೀಚರ್ ಇದೆ

ಎಕ್ಸಿಸ್ ಬ್ಯಾಂಕ್ ತನ್ನ ವಿವೇಚನೆಗೆ ಅನುಗುಣವಾಗಿ ನಿಗದಿಪಡಿಸುವ ರೀತಿಯಲ್ಲಿ, ಮೊಬೈಲ್ ಫೋನ್ ನಂಬರ್ ವೆರಿಫಿಕೇಶನ್ ಮತ್ತು/ಅಥವಾ ಎಂಪಿನ್ ವೆರಿಫಿಕೇಶನ್ ಮೂಲಕ ಗ್ರಾಹಕರ ದೃಢೀಕರಣ ವಿಧಾನವನ್ನು ಅಳವಡಿಸಿಕೊಂಡಿದೆ

ಮೇಲೆ ತಿಳಿಸಿದ ದೃಢೀಕರಣದ ಅನಧಿಕೃತ ಅಕ್ಸೆಸ್ ಮತ್ತು/ಅಥವಾ ಬಳಕೆಯು ಗ್ರಾಹಕರ ಖಾತೆಯ/ಗಳ ಭದ್ರತೆಗೆ ಅಪಾಯ ಹೆಚ್ಚಿಸಬಹುದು. ಹಾಗಾಗಿ, ವೆರಿಫಿಕೇಶನ್ ವಿಧಾನಗಳ ಬಳಕೆಗೆ ಸಂಬಂಧಿಸಿದ ಯಾವುದೇ ಕಾನೂನು ಅಪಾಯಗಳನ್ನು ತಪ್ಪಿಸಲು, ಗ್ರಾಹಕರು ತಮ್ಮ ಮೊಬೈಲ್

ಫೋನ್ ನಂಬರ್, ಎಂಪಿನ್ ಅಥವಾ ಎಕ್ಸಿಸ್ ಬ್ಯಾಂಕ್ ವಿವೇಚನೆಯಂತೆ ಸೂಚಿಸಬಹುದಾದ ಇತರ ಯಾವುದೇ ದೃಢೀಕರಣದ ವಿಧಾನಗಳ ಸಂಪೂರ್ಣ ಗೌಪ್ಯತೆ, ರಹಸ್ಯ ಮತ್ತು ಸುರಕ್ಷತೆ ಕಾಪಾಡಬೇಕು.

ಎಕ್ಸಿಸ್ ಮೊಬೈಲ್ ಕಾರ್ಪೊರೇಟ್ ಅಡಿಯಲ್ಲಿ ನೀಡಲಾಗುವ ಸೇವೆಗಳು ಭಾರತೀಯ ನಾಗರಿಕರಾಗಿದ್ದು, ನೋಂದಣಿ ದಿನಾಂಕದಂದು 18 ವರ್ಷ ಮೇಲ್ಪಟ್ಟ ಬಳಕೆದಾರರಿಗೆ ಲಭ್ಯವಿರುತ್ತವೆ ಹಾಗೂ ಅವರು ಎಕ್ಸಿಸ್ ಮೊಬೈಲ್ ಕಾರ್ಪೊರೇಟ್ ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ, ಅದನ್ನು ಯಶಸ್ವಿಯಾಗಿ ಇನ್‌ಸ್ಟಾಲ್ ಮಾಡಿಕೊಂಡಿರಬೇಕು ಮತ್ತು ನಂತರ ಅನ್ವಯವಾಗುವ ವಿವರಗಳೊಂದಿಗೆ ತಮ್ಮ ದೃಢೀಕರಣ ಮಾಡಿ ಎಂಪಿನ್ ಸೆಟ್ ಮಾಡಿರಬೇಕು ಎಂಬ ಷರತ್ತಿಗೆ ಇದು ಒಳಪಟ್ಟಿರುತ್ತದೆ

**ಬಳಕೆದಾರರ ಹೊಣೆಗಾರಿಕೆಗಳು ಮತ್ತು ಜವಾಬ್ದಾರಿಗಳು:**

1. ಈ ಸೇವೆಗಳ ಬಳಕೆಗಾಗಿ ಬಳಕೆದಾರರು ತಮ್ಮ ಮೊಬೈಲ್ ಫೋನ್ ಮತ್ತು ಎಂಪಿನ್ ರಕ್ಷಿಸಲು ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ.
2. ಮೇಲೆ ತಿಳಿಸಲಾದ ಯಾವುದಾದರೂ ಎಂಪಿನ್ ಅಥವಾ ಎಕ್ಸಿಸ್ ಮೊಬೈಲ್ ಕಾರ್ಪೊರೇಟ್‌ನಲ್ಲಿ ಒದಗಿಸಲಾದ ವಿವರಗಳ ಯಾವುದೇ ರೀತಿಯ ಅನಧಿಕೃತ ಅಥವಾ ಕಾನೂನುಬಾಹಿರ ಬಳಕೆ, ಅಥವಾ ಯಾವುದೇ ವಂಚನೆ ಅಥವಾ ದೋಷಪೂರಿತ ಸೂಚನೆಗಳು ಮತ್ತು ಅದರಿಂದ ಉಂಟಾಗುವ ಯಾವುದೇ ಆರ್ಥಿಕ ಶುಲ್ಕಗಳಿಗೆ ಬಳಕೆದಾರರೇ ಬ್ಯಾಂಕ್‌ಗೆ ಹೊಣೆಗಾರರು ಆಗಿರುತ್ತಾರೆ ಹಾಗೂ ಅಂತಹ ಶುಲ್ಕಗಳನ್ನು ಬಳಕೆದಾರರೇ ಪಾವತಿಸತಕ್ಕದ್ದು.
3. ಮಾನ್ಯವಾದ ಎಂಪಿನ್ ಮೂಲಕ ನೋಂದಾಯಿಸಿದ ಮೊಬೈಲ್ ಫೋನ್ ನಂಬರ್‌ನಿಂದ ಬರುವ ಯಾವುದೇ ಟ್ರಾನ್ಸಾಕ್ಷನ್ ಬಳಕೆದಾರರ ಸ್ವಂತ ವಿವೇಚನೆಯಿಂದ ಪ್ರಾರಂಭಿಸಲಾಗಿದೆ ಎಂದು ಭಾವಿಸಲಾಗುತ್ತದೆ ಎಂಬುದನ್ನು ಬಳಕೆದಾರರು ಒಪ್ಪಿಕೊಳ್ಳುತ್ತಾರೆ

**ಸೇವೆಯ ಇತರ ನಿಯಮಗಳು:**

ಎಂಪಿನ್/ಒಟಿಪಿ/ಕೋಡ್/ಪಾಸ್‌ವರ್ಡ್‌ನ ಗೌಪ್ಯತೆ ಕಾಪಾಡಿಕೊಳ್ಳಲು ಮತ್ತು ಆ ಎಂಪಿನ್/ಒಟಿಪಿ/ಪಾಸ್‌ಕೋಡ್/ಪಾಸ್‌ವರ್ಡ್‌ನ ಬಳಕೆ ಅಥವಾ ದುರುಪಯೋಗದಿಂದ ಉಂಟಾಗಬಹುದಾದ ಎಲ್ಲಾ ಪರಿಣಾಮಗಳಿಗೆ ಬಳಕೆದಾರರು ಜವಾಬ್ದಾರರಾಗಿರುತ್ತಾರೆ.

1. ಬಳಕೆದಾರರ ಪರವಾಗಿ ಎಕ್ಸಿಸ್ ಮೊಬೈಲ್ - ಕಾರ್ಪೊರೇಟ್ ಅಪ್ಲಿಕೇಶನ್‌ನಲ್ಲಿ ಮಾಡಲಾದ ಯಾವುದೇ ಅನಧಿಕೃತ ಬಳಕೆ/ಆಕ್ಸೆಸ್ ಅಥವಾ ಎಂಪಿನ್/ಒಟಿಪಿ/ ಪಾಸ್‌ಕೋಡ್/ ಪಾಸ್‌ವರ್ಡ್ ದುರುಪಯೋಗ ಅಥವಾ ಸೇವೆಗಳಿಗೆ ಸಂಬಂಧಿಸಿದಂತೆ ಅವರ ಗಮನಕ್ಕೆ ಬಂದ ಯಾವುದೇ ಇತರ ಭದ್ರತಾ ಉಲ್ಲಂಘನೆಯ ಬಗ್ಗೆ ಎಕ್ಸಿಸ್ ಬ್ಯಾಂಕ್‌ಗೆ ಸೂಕ್ತ ಅವಧಿಯೊಳಗೆ ತಕ್ಷಣವೇ ತಿಳಿಸಲು ವಿಫಲವಾದಲ್ಲಿ ಅಥವಾ ಅವರ ನಿರ್ಲಕ್ಷ್ಯದ ಕ್ರಮಗಳಿಂದ ಉಂಟಾಗುವ ಎಲ್ಲಾ ನಷ್ಟಗಳಿಗೆ ಬಳಕೆದಾರರೇ ಜವಾಬ್ದಾರರಾಗಿರುತ್ತಾರೆ.

2. ಅಂತಹ ಸೇವೆಗಳನ್ನು ಪಡೆಯಲು ಅವರು ಬಳಸಿದ ಅಧಿಕೃತ ಎಂಪಿನ್/ಒಟಿಪಿ/ಪಾಸ್‌ಕೋಡ್/ಪಾಸ್‌ವರ್ಡ್ ಮೌಲ್ಯಮಾಪನದ ನಂತರವೇ ಅವರು ನೀಡಿದ ಯಾವುದೇ ಸೂಚನೆಗಳು ಪರಿಣಾಮಕಾರಿ ಆಗಿರುತ್ತವೆ ಎಂದು ಬಳಕೆದಾರರು ಖಚಿತಪಡಿಸುತ್ತಾರೆ

ಹಕ್ಕು ನಿರಾಕರಣೆ: ಬಳಕೆದಾರರ ಎಂಪಿನ್, ಪಾಸ್‌ವರ್ಡ್, ಪಾಸ್‌ಕೋಡ್, ಒಟಿಪಿ ಅಥವಾ ಮೊಬೈಲ್ ಫೋನ್ ನಂಬರ್‌ನ ಯಾವುದೇ ಅನಧಿಕೃತ ಬಳಕೆ ಇದ್ದರೆ ಬಳಕೆದಾರರ ಎಂಪಿನ್, ಪಾಸ್‌ವರ್ಡ್, ಪಾಸ್‌ಕೋಡ್, ಒಟಿಪಿ ಅಥವಾ ಮೊಬೈಲ್ ಫೋನ್ ಅಥವಾ ಮೊಬೈಲ್ ಫೋನ್ ನಂಬರ್ ಬಳಕೆಯಿಂದ ನೀಡಲಾದ ಯಾವುದೇ ಮೋಸದ, ನಕಲಿ ಅಥವಾ ತಪ್ಪಾದ ಟ್ರಾನ್ಸಾಕ್ಷನ್ ಸೂಚನೆಗಳಿಗೆ ಎಕ್ಸಿಸ್ ಬ್ಯಾಂಕ್ ಯಾವುದೇ ಹೊಣೆಗಾರಿಕೆ ಸ್ವೀಕರಿಸುವುದಿಲ್ಲ.

**30. ಎಫ್‌ಎಕ್ಸ್ ಆಂಡ್ ಮಾರ್ಕೆಟ್ಸ್**

ನಿಯಮ ಮತ್ತು ಷರತ್ತುಗಳು

**31. ಫಿಕ್ಸೆಡ್ ಡೆಪಾಸಿಟ್ - ನಿಯಮ ಮತ್ತು ಷರತ್ತುಗಳು**

ಡಿಜಿಟಲ್ ಫಿಕ್ಸೆಡ್ ಡೆಪಾಸಿಟ್‌ಗೆ ಸಂಬಂಧಿಸಿದ ನಿಯಮ ಮತ್ತು ಷರತ್ತುಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ

**32. ಡೆಬಿಟ್ ಕಾರ್ಡ್‌ಗಳು**

ನಿಯಮ ಮತ್ತು ಷರತ್ತುಗಳು